Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–41 | ಅಕ್ಟೋಬರ್ 7–13, 2024 | ಪುಟ 16 | ರೂ.10/–
Volume-18 | Issue-41 | October 7-13, 2024 | Pages:16 | Price: 10/-





ಚೀನಾದ ಕ್ರಾಂತಿಗೆ 75 ವರ್ಷಗಳು-ಮುನ್ನಡೆ

ಜಮ್ಮು-ಕಾಶ್ಮೀರ: ದ್ವೇಷ ರಾಜಕಾರಣಕ್ಕೆ ಜನ ಪಾಠ ಕಲಿಸುವರೇ?

ಅನರ್ಹತೆ ಹೆಸರಿನಲ್ಲಿ 10 ಲಕ್ಷ ರೇಷನ್ ಕಾರ್ಡ್ ರದ್ದು!

ಪಶ್ಚಿಮ ಏಶ್ಯಾ: ಬೆಂಕಿಯ ಕುಲುಮೆಗೆ ತಳ್ಳಿದ ಇಸ್ರೇಲ್



ಅನರ್ಹ ಎಂಬ ಹೆಸರಿನಲ್ಲಿ 10 ಲಕ್ಷಕ್ಕೂ ಹೆಚ್ಚು ಬಿಪಿಎಲ್ ಕಾರ್ಡುಗಳ ರದ್ದು!! ಬಿಪಿಎಲ್ ಗೆ ಇರುವ ಮಾನದಂಡ ಬದಲಾಗಬೇಕಿದೆ

ಕರ್ನಾಟಕದಲ್ಲಿ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಪಡಿತರ ಅಂಗಡಿಗಳ ಗೋಡೆಯ ಮೇಲೆ ಅನರ್ಹರ ಹೆಸರುಗಳುಳ್ಳ ಪಟ್ಟಿಯನ್ನು ಅಂಟಿಸಲಾಗಿದೆ. ಎಂದಿನಂತೆ ಪಡಿತರ ಪಡೆಯಲು ಬಂದವರು ಒಮ್ಮೆ ಆ ಪಟ್ಟಿಯಲ್ಲಿ ತಮ್ಮ ಹೆಸರಿದೆಯೇ ಎಂದು ಆತಂಕದಿಂದ ಹುಡುಕುವ ದೃಶ್ಯಗಳು ಮನಕಲಕುವಂತಿವೆ. ಬಹಳಷ್ಟು ಜನರಿಗೆ ತಮ್ಮ ಬಿಪಿಎಲ್ ಕಾರ್ಡ್ ರದ್ದುಗೊಳ್ಳಲು ಕಾರಣವೇನು ಎಂಬ ಪ್ರಶ್ನೆಗಳು ಮೂಡುತ್ತವೆ. ಎಂದಿನಂತೆ ರಾಜ್ಯ ಸರ್ಕಾರ, ಮತ್ತು ಅದರ ಮುಖ್ಯಸ್ಥರನ್ನು ಶಪಿಸುತ್ತಾ ಭಾರವಾದ ಮನಸ್ಸಿನೊಡನೆ ಬರಿಗೈಯಲ್ಲಿ ಮನೆಯ ಕಡೆ ನಡೆಯುತ್ತಾರೆ. 2024ರ ಅಕ್ಟೋಬರ್ ಒಂದರ ವರದಿಯಂತೆ ಅಂದಾಜು 10 ಲಕ್ಷಕ್ಕೂ ಹೆಚ್ಚು ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗುತ್ತದೆ ಎಂಬ ಸುದ್ದಿಗಳು ಬಂದಿವೆ. ಇದರಿಂದ ಬಿಪಿಎಲ್ ಕಾರ್ಡ್ ಮೂಲಕ ಪಡಿತರ ಪಡೆಯುತ್ತಿರುವ ಮತ್ತಷ್ಟು ಕುಟುಂಬಗಳು ಆತಂಕದಲ್ಲಿವೆ.

ಏನಿದು ಮಾನದಂಡ?

ಸಿರಿವಂತರು, ಹೆಚ್ಚಿನ ಆದಾಯ ಇರುವ ಕುಟುಂಬಗಳು, ನಿಜವಾದ ಫಲಾನುಭವಿಗಳಲ್ಲದ ಕುಟುಂಬಗಳೂ ಬಿಪಿಎಲ್ ಕಾರ್ಡ್ ಪಡೆದಿದ್ದಾರೆ ಎಂಬುದು ನಿಜ. ಇಂತಹ ವ್ಯವಹಾರದಲ್ಲಿ ಆಹಾರ ಸರಬರಾಜು ಇಲಾಖೆಯ ಅಧಿಕಾರಿಗಳು, ಸ್ಥಳೀಯ ರಾಜಕೀಯ ನಾಯಕರು, ಕಾಮನ್ ಸರ್ವೀಸ್ ಸೆಂಟರ್, ಮಧ್ಯವರ್ತಿಗಳೂ ಸೇರಿದಂತೆ ಹಲವರ ಶಾಮೀಲು ಇದ್ದೇ ಇದೆ. ಕೇಳಿದಷ್ಟು ಹಣ ಕೊಟ್ಟರೆ, ಸುಳ್ಳು ದಾಖಲೆಗಳನ್ನೇ ಸೃಷ್ಟಿ ಮಾಡಿ ಬಿಪಿಎಲ್ ಕಾರ್ಡ್ ಕೊಡಿಸುವ ವ್ಯವಸ್ಥಿತ ದಂದೆಯೇ ನಡೆಯುತ್ತಿದೆ. ಬಡತನ ಅಳೆಯಲು ಸರ್ಕಾರ ನಿಗದಿಪಡಿಸಿದ ಅಸಮರ್ಪಕ ಮಾನದಂಡದಿಂದಾಗಿ ನಿಜವಾದ ಫಲಾನುಭವಿಗಳೂ ಹಣ ಕೊಟ್ಟೇ ಬಿಪಿಎಲ್ ಕಾರ್ಡ್ ಪಡೆಯಬೇಕಾದ ಪರಿಸ್ಥಿತಿ ಇದೆ.

ವಿಶ್ವಬ್ಯಾಂಕ್ ನ ಮಾನದಂಡದಂತೆ 3,24,000 ರೂ.

ಬಿಪಿಎಲ್ ಕಾರ್ಡ್ ಪಡೆಯಲು ಕೇಂದ್ರ ಸರ್ಕಾರ ಕೆಲವು ಮಾನದಂಡಗಳನ್ನು ನಿಗದಿಪಡಿಸಿದೆ. 'ಬಿಪಿಎಲ್' ಎಂದರೆ, ಬಡತನ ರೇಖೆಗಿಂತ ಕೆಳಗಿನವರು (**Below Poverty Line**) ಎಂದರ್ಥ. ಅಂದರೆ, ಬಡತನ ರೇಖೆಗಿಂತ ಮೇಲಿನ ಕುಟುಂಬಗಳು ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲ. ಹಾಗಾದರೆ, ಭಾರತದಲ್ಲಿ ಬಡತನ ರೇಖೆಗೆ ಇರುವ ಮಾನದಂಡ ಏನು?

ಇದಕ್ಕೂ ಮೊದಲು ವಿಶ್ವಬ್ಯಾಂಕ್ ಬಡತನ ರೇಖೆಗೆ ನಿಗದಿ ಪಡಿಸಿದ ಮಾನದಂಡವನ್ನು ನೋಡೋಣ. ವಿಶ್ವಬ್ಯಾಂಕ್ ತೀವ್ರ ಬಡತನದ ಅಳತೆಗೆ ಪ್ರತಿ ವ್ಯಕ್ತಿಗೆ ದಿನಕ್ಕೆ 2.15 ಡಾಲರ್ ನಿಗದಿ ಮಾಡಿದೆ. ನಮ್ಮ ಇಂದಿನ ರೂಪಾಯಿ ಮೌಲ್ಯದ ಲೆಕ್ಕದಲ್ಲಿ ದಿನವೊಂದಕ್ಕೆ 180 ರೂಪಾಯಿ ಆಗುತ್ತದೆ. ಇದು ತಿಂಗಳಿಗೆ 5,400 ರೂ. ವರ್ಷಕ್ಕೆ 64,800 ರೂ. ಇದಕ್ಕಿಂತ ಕಡಿಮೆ ಆದಾಯ ಇರುವ ವ್ಯಕ್ತಿ ಬಡತನ ರೇಖೆಗಿಂತ ಕೆಳಗಿನವರ ಸಾಲಿಗೆ ಸೇರುತ್ತಾರೆ. ಈ ಲೆಕ್ಕದಲ್ಲಿ ಐದು ಸದಸ್ಯರಿರುವ ಕುಟುಂಬದ ಒಟ್ಟು ಆದಾಯ ಭಾರತದಲ್ಲಿ 3,24,000 ರೂ. ವಿಶ್ವ ಬ್ಯಾಂಕ್ ಪ್ರಕಾರ ಇದು ಬಡತನ ರೇಖೆಯನ್ನು ಅಳೆಯುವ ಮಾನದಂಡವಾಗಬೇಕು.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳು 'ಅನರ್ಹ ಕುಟುಂಬಗಳು'(?) ಪಡೆದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಸಲು ಮುಂದಾಗಿವೆ. ಈಗ ಸರ್ಕಾರ ನಿಗಧಿಪಡಿಸಿರುವ ಬಡತನ ರೇಖೆಗೆ ಇರುವ ಮಾನದಂಡವೇನು? ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 26 ರೂ.ಗಿಂತ ಹೆಚ್ಚು ಆದಾಯ ಇರುವ ವ್ಯಕ್ತಿ ಬಡವನಲ್ಲ ಎಂಬ ತೆಂಡೂಲ್ಕರ್ ಸಮಿತಿ 2009ರಲ್ಲಿ ನಿಗದಿಪಡಿಸಿದ ಮಾನದಂಡವೇ? ಬಿಪಿಎಲ್ ಕಾರ್ಡ್ ಪಡೆಯಲು ಇಂದು ರಾಜ್ಯ ಸರ್ಕಾರ ನಿಗದಿಪಡಿಸಿರುವ ಮಾನದಂಡವೆಂದರೆ, ಗ್ರಾಮೀಣ ಪ್ರದೇಶದ ಕುಟುಂಬದ ವಾರ್ಷಿಕ ಆದಾಯ 1,20,000 ರೂಪಾಯಿ. ಅಂದರೆ, ಒಬ್ಬ ವ್ಯಕ್ತಿ ದಿನಕ್ಕೆ ರೂ. 66, ತಿಂಗಳಿಗೆ ರೂ. 2000 ಕ್ಕಿಂತ ಕಡಿಮೆ ಆದಾಯ ಇರಬೇಕು. ಐವರು ಸದಸ್ಯರ ಕುಟುಂಬದ ತಿಂಗಳ ಆದಾಯ 10,000 ರೂಪಾಯಿ. ನಗರ ಪ್ರದೇಶದಲ್ಲಿ 1,50,000 ರೂಪಾಯಿಗಿಂತ ಹೆಚ್ಚಿನ ವಾರ್ಷಿಕ ಆದಾಯ ಇರುವ ಕುಟುಂಬದವರು ಬಡವರಲ್ಲ! ಹೀಗಾಗಿ ಇಂತಹ ಕುಟುಂಬಗಳು ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲ!!



ವಿಶ್ವ ಬ್ಯಾಂಕ್ ನ ಬಡತನ ರೇಖೆಗಳನ್ನು 'ಖರೀದಿ ಸಾಮರ್ಥ್ಯದ ಸಮಾನತೆ' (PPP- purchasing power parity) ಲೆಕ್ಕಾಚಾರಗಳ ಆಧಾರದ ಮೇಲೆ ನವೀಕರಿಸಲಾಗುತ್ತದೆ. 2017ರ ಪಿಪಿಪಿ ಗಳನ್ನು 2022ರಲ್ಲಿ ಬಡತನ ರೇಖೆಗಳನ್ನು ನವೀಕರಿಸಲು ಬಳಸಲಾಗಿದೆ.

ವಿಶ್ವ ಬ್ಯಾಂಕ್ 2011ರಲ್ಲಿ 1.90 ಡಾಲರ್ ನಿಗದಿ ಮಾಡಿತ್ತು. ಅಂದರೆ, ಅಂದಿನ ಡಾಲರ್ ಎದುರಿನ ರೂಪಾಯಿ ಮೌಲ್ಯ 54. ಅಂದಿನ ಲೆಕ್ಕದಲ್ಲಿ ದಿನವೊಂದರಲ್ಲಿ 102 ರೂ.ಗಳಿಗಿಂತ ಕಡಿಮೆ ಆದಾಯ ಇರುವ ವ್ಯಕ್ತಿ ಬಡತನ ರೇಖೆಗಿಂತ ಕೆಳಗಿನವರು ಎಂದಾಗುತ್ತದೆ. ತಿಂಗಳಿಗೆ ರೂ. 3,000. ವರ್ಷಕ್ಕೆ ರೂ. 36,000. ಐದು ಸದಸ್ಯರ ಕುಟುಂಬಕ್ಕೆ 1,80,000 ರೂ. 2011ರಲ್ಲಿ ಇದಕ್ಕಿಂತ ಕಡಿಮೆ ಆದಾಯ ಗಳಿಸುತ್ತಿದ್ದ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿನವರು ಎಂದಾಗುತ್ತದೆ.

ಆದರೆ, ಭಾರತ ಸರ್ಕಾರ ಬಡತನ ರೇಖೆಗೆ ನಿಗದಿ ಮಾಡಿರುವ ಮಾನದಂಡವೇನು? ಇಂದು ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ 1,20,000 ರೂ. ನಗರ ಪ್ರದೇಶಗಳಲ್ಲಿ 1,50,000 ರೂ.ಗಿಂತ ಕಡಿಮೆ ಇರುವವರು ಬಡತನ ರೇಖೆಗಿಂತ ಕೆಳಗಿನವರು. ಇವರು ಮಾತ್ರವೇ ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರು ಎಂದು ಕರ್ನಾಟಕ ಸರ್ಕಾರ ಹೇಳುತ್ತಿದೆ. ಅಂದರೆ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಿಪಿಎಲ್ ಕುಟುಂಬದ ತಿಂಗಳ ಆದಾಯ 10,000 ರೂಪಾಯಿ, ಕುಟುಂಬದಲ್ಲಿನ ಒಬ್ಬ ವ್ಯಕ್ತಿಗೆ ದಿನಕ್ಕೆ ಸರಾಸರಿ 83 ರೂಪಾಯಿ. ಇಂದಿನ ದುಬಾರಿ ಜೀವನ ವೆಚ್ಚದಲ್ಲಿ ಇಷ್ಟು ಕಡಿಮೆ ಆದಾಯದಲ್ಲಿ ವ್ಯಕ್ತಿಯೊಬ್ಬ ಜೀವನ ಸಾಗಿಸಲು ಸಾಧ್ಯವೇ? ಇನ್ನು ನಗರ ಪ್ರದೇಶದಲ್ಲಿ 12,500 ರೂ.ಗಳ ಮಾಸಿಕ ಆದಾಯದಲ್ಲಿ 5 ಸದಸ್ಯರ ಒಂದು ಕುಟುಂಬ, ಅಥವಾ ದಿನಕ್ಕೆ 104 ರೂಪಾಯಿಗಳಲ್ಲಿ ಒಬ್ಬ ವ್ಯಕ್ತಿ ಜೀವಿಸಲು ಸಾಧ್ಯವೇ?

ಇತ್ತೀಚೆಗೆ ನೀತಿ(NITI) ಆಯೋಗವು ಬ್ಯಾಂಕ್ ಖಾತೆ ಮತ್ತು ತಾಯಿಯ ಆರೋಗ್ಯ ಎಂಬ ಎರಡು ಸೂಚ್ಯಂಕಗಳನ್ನು ಸೇರಿಸಿದೆ. ಬ್ಯಾಂಕ್ ಖಾತೆ ಹೊಂದಿರುವವರು, ಮನೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸ್ವಂತ ಶೌಚಾಲಯ ಎಂಬ ಮೂರು ಸೂಚಕಗಳನ್ನು ಹೊಂದಿದ್ದರೆ ಒಬ್ಬ ವ್ಯಕ್ತಿ ಮತ್ತು ಅವನ ಕುಟುಂಬವು ಬಡತನದಿಂದ ಮುಕ್ತವಾಗಿದೆ ಎಂದು ಪರಿಗಣಿಸಲಾಗುತ್ತದೆ. ಸಧ್ಯ ಈ ಮಾನದಂಡಗಳನ್ನು ಬಿಪಿಎಲ್ ಚೀಟಿ ಪಡೆಯುವ ಅರ್ಹತೆಗೆ ಸೇರಿಸಿಲ್ಲ ಎಂಬುದೊಂದು ಸಮಾಧಾನದ ಸಂಗತಿ.

26 ರೂ.ಗಿಂತ ಹೆಚ್ಚಿನ ಆದಾಯ ಇರುವವರು ಬಡವರಲ್ಲ!

2005ರಡಿಸೆಂಬರ್‌ನಲ್ಲಿಯೋಜನಾ ಆಯೋಗವು ಬಡತನದ ಅಂದಾಜಿನ ವಿಧಾನವನ್ನು ಪರಿಶೀಲಿಸಲು ಮತ್ತು ಹಿಂದಿನ ವಿಧಾನಗಳ ನ್ಯೂನತೆಗಳನ್ನು ಪರಿಹರಿಸಲು ಯೋಜನಾ ಆಯೋಗದಿಂದ ಪ್ರೊ. ಸುರೇಶ್ ತೆಂಡೂಲ್ಕರ್ ನೇತೃತ್ವದಲ್ಲಿ ಸಮಿತಿಯನ್ನು ಸ್ಥಾಪಿಸಲಾಯಿತು. ಈ ಸಮಿತಿಯು ನಿರ್ಧರಿಸಿದ ಬಡತನ ರೇಖೆಯ ಮಾನದಂಡದಂತೆ 2009ರಲ್ಲಿ ಗ್ರಾಮೀಣ ಪ್ರದೇಶದ ಒಬ್ಬ ವ್ಯಕ್ತಿಗೆ ತಿಂಗಳಿಗೆ ರೂ. 816 ಅಂದರೆ, ದಿನಕ್ಕೆ 26 ರೂ.ಗಿಂತ ಹೆಚ್ಚು ಆದಾಯ ಇದ್ದರೆ ಆ ವ್ಯಕ್ತಿ ಬಡವನಲ್ಲ! ಅದೇ ರೀತಿ ನಗರಗಳಲ್ಲಿ ವಾಸಿಸುವ ಒಬ್ಬ ವ್ಯಕ್ತಿಗೆ ತಿಂಗಳಿಗೆ 1000 ರೂಪಾಯಿ ಅಂದರೆ, ದಿನಕ್ಕೆ 32 ರೂ.ಗಿಂತ ಹೆಚ್ಚು ಆದಾಯ ಇದ್ದರೆ ಆ ವ್ಯಕ್ತಿ ಬಡವನಲ್ಲ! ಅಂದರೆ, ಐದು ಸದಸ್ಯರ ಗ್ರಾಮೀಣ ಪ್ರದೇಶದ ಒಂದು ಕುಟುಂಬ ತಿಂಗಳಿಗೆ 4,080 ರೂ.ಗಿಂತ ಹೆಚ್ಚು ಹಾಗೂ ನಗರ ಪ್ರದೇಶದ ಒಂದು ಕುಟುಂಬ 5,000 ರೂ.ಗಿಂತ ಹೆಚ್ಚು ಆದಾಯ ಗಳಿಸುತ್ತಿದ್ದರೆ ಅಂತಹ ಕುಟುಂಬ ಬಡತನ ರೇಖೆಯ ಕೆಳಗೆ ಬರುವುದಿಲ್ಲ. ಅಂದರೆ ಈ ಕುಟುಂಬಗಳು ಬಿಪಿಎಲ್ ಕುಟುಂಬಗಳಲ್ಲ! ಇಂದಿನ ಬಡತನ ರೇಖೆಯು ತೆಂಡೂಲ್ಕರ್ ನೇತೃತ್ವದ ತಜ್ಞರ ಸಮಿತಿಯು ಡಿಸೆಂಬರ್ 2009ರಲ್ಲಿ ನೀಡಿದ ಮಾನದಂಡಗಳನ್ನೇ ಆಧರಿಸಿದೆ ಎಂಬುದನ್ನು ಗಮನಿಸಬೇಕು!!

ಡಾ.ಸಿ.ರಂಗರಾಜನ್ ಸಮಿತಿ

ತೆಂಡೂಲ್ಕರ್ ಸಮಿತಿ ಮಾಡಿದ ಮಾನದಂಡದ ಬಗ್ಗೆ ವ್ಯಾಪಕವಾದ ಟೀಕೆಗಳು ಕೇಳಿಬಂದವು. ಗ್ರಾಮೀಣ ಭಾಗದಲ್ಲಿ ವಾಸಿಸುವ ಒಬ್ಬ ಬಡ ವ್ಯಕ್ತಿ ದಿನಕ್ಕೆ ಕೇವಲ 33 ರೂಪಾಯಿಗಳಲ್ಲಿ ಜೀವನ ಸಾಗಿಸಬಹುದು ಎಂಬುದೇ ನೋವಿನ ಸಂಗತಿ. ನಂತರ ಕೇಂದ್ರ ಸರ್ಕಾರವು ಈ ಮಾನದಂಡವನ್ನು ಮರುಪರಿಶೀಲಿಸಲು 2012ರ ಜೂನ್‌ನಲ್ಲಿ ಡಾ.ಸಿ.ರಂಗರಾಜನ್ ನೇತೃತ್ವದ ಮತ್ತೊಂದು ತಜ್ಞರ ಸಮಿತಿಯನ್ನು ರಚಿಸಿತು. ಜೂನ್ 30, 2014ರಂದು ತನ್ನ ವರದಿಯನ್ನು ಸಲ್ಲಿಸಿದ ರಂಗರಾಜನ್ ಸಮಿತಿಯು, ನಗರ ಪ್ರದೇಶಗಳಿಗೆ ರೂ. 1,407 (ದಿನಕ್ಕೆ ರೂ.47) ಮತ್ತು ಗ್ರಾಮೀಣ ಪ್ರದೇಶಗಳಿಗೆ ರೂ. 972 (ದಿನಕ್ಕೆ ರೂ.33) ಮಾಸಿಕ ಮಿತಿಯನ್ನು ಸೂಚಿಸಿತು. ಐದು ಸದಸ್ಯರಿರುವ ಕುಟುಂಬದ ತಿಂಗಳ ಆದಾಯ ಗ್ರಾಮೀಣ ಪ್ರದೇಶದಲ್ಲಿ 4,860 ರೂಪಾಯಿ, ನಗರ ಪ್ರದೇಶಗಳಲ್ಲಿ 7,035 ರೂಪಾಯಿಗಳನ್ನು ಬಡತನ ರೇಖೆಗೆ ನಿಗದಿಪಡಿಸಿತು. ಈ ಲೆಕ್ಕದಲ್ಲಿ 2014ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ಆದಾಯ 58,320 ರೂ.ಗಳು, ನಗರ ಪ್ರದೇಶದಲ್ಲಿ 84,420 ರೂಗಳಿಗಿಂತ ಕಡಿಮೆ ಆದಾಯ ಇರುವ ಕುಟುಂಬಗಳು ಮಾತ್ರ ಬಡವರು. ಆದರೆ ರಂಗರಾಜನ್ ಸಮಿತಿ ವರದಿಯನ್ನು ಸರ್ಕಾರ ಇದುವರೆಗೂ ಅಂಗೀಕರಿಸಿಲ್ಲ.

2155 ಕ್ಯಾಲೋರಿಗಳ ಅಹಾರದ ಅಗತ್ಯವಿದೆ

ಬಡತನ ರೇಖೆಯು ಸಾಕಷ್ಟು ಪೋಷಣೆ, ಬಟ್ಟೆ, ಮನೆ ಬಾಡಿಗೆ, ಸಾರಿಗೆ ಮತ್ತು ಶಿಕ್ಷಣದ ಕೆಲವು ಪ್ರಾಮಾಣಿತ ಮಟ್ಟಗಳನ್ನು ಆಧರಿಸಿರಬೇಕು ಮತ್ತು ಆಹಾರೇತರ ವೆಚ್ಚಗಳ ನಡವಳಿಕೆಯಿಂದ ನಿರ್ಧರಿಸಲ್ಪಟ್ಟ ಮಟ್ಟವನ್ನು ಆಧರಿಸಿರಬೇಕು ಎಂದು ಸಿ.ರಂಗರಾಜನ್ ಸಮಿತಿಯ ವರದಿ ಹೇಳುತ್ತದೆ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ಮಾನದಂಡಗಳ ಆಧಾರದ ಮೇಲೆ ವ್ಯಕ್ತಿಗೆ ಬೇಕಾದ ಕ್ಯಾಲೋರಿಗಳು, ಪ್ರೋಟೀನ್ ಗಳು ಮತ್ತು ಕೊಬ್ಬಿನ ಸರಾಸರಿ ಅಗತ್ಯಗಳನ್ನು ಲೆಕ್ಕಾಚಾರ ಮಾಡಿದೆ. ನಗರ ಪ್ರದೇಶಗಳಲ್ಲಿ ದಿನಕ್ಕೆ 2090 ಕ್ಯಾಲೋರಿಗಳು ಮತ್ತು ಹಳ್ಳಿಗಳಲ್ಲಿ ದಿನಕ್ಕೆ 2155 ಕ್ಯಾಲೋರಿಗಳ ಅಹಾರದ ಅಗತ್ಯವಿದೆ ಎಂದು ಆ ಸಮಿತಿ ಹೇಳಿದೆ.

ಇವೆಲ್ಲದರ ಜೊತೆಗೆ ಇಂದು ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಮೊಬೈಲ್ ಬಳಕೆಯು ಪ್ರತಿಯೊಂದು ಕುಟುಂಬದ ಬದುಕಿನ ಅವಿಭಾಜ್ಯ ಅಂಗವಾಗಿದೆ. ಇದಕ್ಕಾಗಿ ಹಣ ಹೊಂದಿಸಬೇಕಾದ ಅನಿವಾರ್ಯತೆ ಇದೆ.

ಹಸಿವಿನ ಸೂಚ್ಯಂಕದಲ್ಲಿ 111ನೇ ಸ್ಥಾನ

ವಿಶ್ವಸಂಸ್ಥೆಯ ವರದಿಯ ಪ್ರಕಾರ, ದಕ್ಷಿಣ ಏಷ್ಯಾದ ದೇಶಗಳಿಗೆ ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಭಾರತದಲ್ಲಿ ಶೇಕಡಾ 74 ರಷ್ಟು ಜನರಿಗೆ ಪೌಷ್ಠಿಕ ಆಹಾರ ಲಭ್ಯವಿಲ್ಲ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019–21ರ ಅವಧಿಯ 5ನೇ ಸಮೀಕ್ಷೆಯ ಪ್ರಕಾರ, ಮಹಿಳೆಯರಲ್ಲಿ (15 ರಿಂದ 49 ವರ್ಷಗಳ ನಡುವೆ) ರಕ್ತಹೀನತೆಯ ಪ್ರಮಾಣವು 2015–16ಕ್ಕೆ ಹೋಲಿಸಿದರೆ 2019–21ರಲ್ಲಿ ಶೇ. 53ರಿಂದ ಶೇ. 57ಕ್ಕೆ ಹೆಚ್ಚಾಗಿದೆ.

2023ರಲ್ಲಿ ವಿಶ್ವ ಹಸಿವಿನ ಸೂಚ್ಯಂಕದ 125 ದೇಶಗಳ ಪಟ್ಟಿಯಲ್ಲಿ ಭಾರತ 111ನೇ ಸ್ಥಾನದಲ್ಲಿದೆ. ಇದನ್ನು ಒಪ್ಪದ ಕೇಂದ್ರ ಸರ್ಕಾರ ಹಸಿವು ಸೂಚ್ಯಂಕವನ್ನು ಲೆಕ್ಕಾಚಾರ ಮಾಡುವ ವಿಧಾನ ಸರಿಯಾಗಿಲ್ಲ ಎಂದು ಆಕ್ಷೇಪಿಸುತ್ತಿದೆ. ಸರ್ಕಾರ ಅನುಸರಿಸುತ್ತಿರುವ ನೀತಿಗಳು ಎಷ್ಟೇ ದೋಷಪೂರಿತವಾಗಿದ್ದರೂ ಅದೇ ನೀತಿಯನ್ನು ಮುಂದುವರಿಸುತ್ತಿದ್ದಾರೆ. ತಲಾ ಆದಾಯ ಗಣನೀಯವಾಗಿ ಹೆಚ್ಚುತ್ತಿದೆ ಎಂದು ಹೇಳುತ್ತಿರುವ ನಮ್ಮ ದೇಶ ಹಸಿವಿನ ಸೂಚ್ಯಂಕದಲ್ಲಿ ಏಕೆ ಇಳಿಯಬೇಕು? ಬಡತನ ರೇಖೆಗಿಂತ ಕೆಳಗಿರುವ

ಪುಟ 4 ಕ್ಕೆ

ಚುನಾವಣಾ ಬಾಂಡ್ ಕೇಸ್: ಅಪರಾಧಿಗಳಿಗೆ ಶಿಕ್ಷೆ ಆಗಬೇಕು

ಸಂಪಾದಕೀಯ

ಬೆಂಗಳೂರಿನ ತಿಲಕ್ ನಗರದ ಪೊಲೀಸರು ದಾಖಲಿಸಿರುವ 'ಚುನಾವಣಾ ಬಾಂಡ್ ಗಳ ಸುಲಿಗೆ ಪ್ರಕರಣ'ದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕರ್ನಾಟಕ ಬಿಜೆಪಿ ಮಾಜಿ ಮುಖ್ಯಸ್ಥ ನಳಿನ್ ಕುಮಾರ್ ಕಟೀಲ್, ಬಿಜೆಪಿಯ ಕೇಂದ್ರ ಮತ್ತು ರಾಜ್ಯದ ನಾಯಕರು ಹಾಗೂ ಹೆಸರಿಸದ ಇಡಿ ಅಧಿಕಾರಿಗಳನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 384 ಮತ್ತು 120 ಬಿ ಅಡಿಯಲ್ಲಿ ಎಫ್ಐಆರ್ ದಾಖಲಾಗಿದೆ. ಪ್ರಕರಣದ ಮೊದಲ ಆರೋಪಿ ಎ1 ನಿರ್ಮಲಾ ಸೀತಾರಾಮನ್, ಎ2 ಜಾರಿ ನಿರ್ದೇಶನಾಲಯ, ಎ3 ಬಿಜೆಪಿ ಕೇಂದ್ರ ಪದಾಧಿಕಾರಿಗಳು, ಎ4 ಬಿಜೆಪಿ ಕರ್ನಾಟಕ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಎ5 ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಎ6 ರಾಜ್ಯ ಬಿಜೆಪಿ ಪದಾಧಿಕಾರಿಗಳು ಇದ್ದಾರೆ. ಆರೋಪಿಗಳ ಪಟ್ಟಿಯಲ್ಲಿ ಕೇಂದ್ರ ಸಚಿವ ಜೆಪಿ ನಡ್ಡಾ ಅವರ ಹೆಸರೂ ಇದೆ.

ಪ್ರಕರಣದ ತನಿಖೆ ಮತ್ತು ಮುಂದಿನ ಪ್ರಕ್ರಿಯೆಗೆ ತಡೆ ನೀಡುವಂತೆ ಕಟೀಲ್ ಕರ್ನಾಟಕ ಹೈಕೋರ್ಟ್‌ನ ಮೊರೆ ಹೋಗಿದ್ದರು ಮತ್ತು ಪ್ರಕರಣದ ತನಿಖೆಗೆ ಕರ್ನಾಟಕ ಹೈಕೋರ್ಟ್ ನ ಏಕಸದಸ್ಯ ಪೀಠ ಸೆಪ್ಟೆಂಬರ್ 30 ರಂದು ತಡೆ ನೀಡಿದೆ.

ಕಟೀಲ್ ಸಲ್ಲಿಸಿದ ಅರ್ಜಿಯಲ್ಲಿ ಹಿರಿಯ ವಕೀಲ ಕೆ.ಜಿ. ರಾಘವನ್ ಅವರು 'ದೂರಿನಲ್ಲಿ ಯಾವುದೇ ಸುಲಿಗೆ ಪ್ರಕರಣ ದಾಖಲಾಗಿಲ್ಲ ಎಂದು ವಾದ ಮಂಡಿಸಿದರು. ಖಾಸಗಿ ದೂರುದಾರರ ಪರ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು, ಚುನಾವಣಾ ಬಾಂಡ್‌ಗಳ ಯೋಜನೆಯು ಸುಲಿಗೆಯ ಒಂದು ಉತ್ತಮ ಪ್ರಕರಣವನ್ನು ಒಳಗೊಂಡಿದ್ದು, ಜಾರಿ ನಿರ್ದೇಶನಾಲಯವು (ಇಡಿ) ಕೆಲವು ಕಂಪನಿಗಳಲ್ಲಿ ಚುನಾವಣಾ ಬಾಂಡ್‌ಗಳನ್ನು ಖರೀದಿಸಲು ಭಯವನ್ನು ಉಂಟುಮಾಡಿದೆ ಎಂದು ವಾದಿಸಿದರು. ಭೂಷಣ್ ಮತ್ತು ಇತರರು ಮಂಡಿಸಿದ ಎಲ್ಲಾ ವಿಷಯಗಳನ್ನು ಹೈಕೋರ್ಟ್‌ನ ದಸರಾ ರಜೆಯ ನಂತರದ ವಿಚಾರಣೆಯ ಸಮಯದಲ್ಲಿ ಪರಿಗಣಿಸಲಾಗುವುದು ಎಂದು ಏಕಸದಸ್ಯ ಪೀಠ ಸೂಚಿಸಿದೆ. ಹೆಚ್ಚಿನ ವಿಚಾರಣೆಗಾಗಿ ಅಕ್ಟೋಬರ್ 22ರಂದು ನ್ಯಾಯಾಲಯ ಪಟ್ಟಿ ಮಾಡಿದೆ. ಈ ಪ್ರಕರಣದಿಂದ ಬಿಜೆಪಿಯ ಸಂಘಟಿತ ಭ್ರಷ್ಟಾಚಾರ ಮತ್ತೊಮ್ಮೆ ಸಾರ್ವಜನಿಕ ಚರ್ಚೆಯ ಮುನ್ನೆಲೆಗೆ ಬಂದಿದೆ. ಸಿಪಿಐ(ಎಂ) ಪಕ್ಷ ಈ ಯೋಜನೆಯ ರದ್ದತಿಗೆ ಸಂಸತ್ತಿನೊಳಗೆ ಮತ್ತು ಕಾನೂನು ಹೋರಾಟ ಮಾಡಿ ಯಶಸ್ವಿಯಾಗಿರುವುದನ್ನು ನೆನಪಿಸಿಕೊಳ್ಳ ಬಹುದು.

ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಬಿಜೆಪಿ ರಾಷ್ಟ್ರೀಯ ಮತ್ತು ಕರ್ನಾಟಕ ರಾಜ್ಯ ನಾಯಕರ ವಿರುದ್ಧ ಚುನಾವಣಾ ಬಾಂಡ್ ಪ್ರಕರಣದಲ್ಲಿ ಬೆಂಗಳೂರಿನಲ್ಲಿ ದಾಖಲಾಗಿರುವ ಈ ಪ್ರಕರಣವು ಬಿಜೆಪಿಯ ಸಂಘಟಿತ ಭ್ರಷ್ಟಾಚಾರದ ಸ್ಪಷ್ಟ ಸೂಚನೆ. ನಿರ್ಮಲಾ ಅವರು ಜಾರಿ ನಿರ್ದೇಶನಾಲಯದ (ಇಡಿ) ಮೂಲಕ ಕೈಗಾರಿಕೋದ್ಯಮಿಗಳನ್ನು ಬೆದರಿಸಿ, ಅವರಿಂದ ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ಹಣ ಪಡೆದು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಆರೋಪ ಇಲ್ಲಿದೆ. ದೇಶಾದ್ಯಂತ ಸಂಚಲನ ಮೂಡಿಸಿದ್ದ ಈ ಪ್ರಕರಣದ ದಾಖಲಾತಿಯ ಹಿಂದೆ ಜನಾಧಿಕಾರ ಸಂಘರ್ಷ ಪರಿಷತ್ತಿನ ಆದರ್ಶ್ ಆರ್ ಅಯ್ಯರ್ ಅವರ ನಿರಂತರ ಹೋರಾಟವೂ ಗಮನಾರ್ಹ. ಆರು ತಿಂಗಳ ಹಿಂದೆ ಅಂದರೆ, 2024ರ ಮಾರ್ಚ್ 30 ರಂದು ಅವರು ಬೆಂಗಳೂರಿನ ತಿಲಕ್ ನಗರ ಪೊಲೀಸರನ್ನು ಸಂಪರ್ಕಿಸಿ ದೂರು ಕೊಡಲು ಮುಂದಾದರು. ಆದರೆ, ಪೊಲೀಸರು ಅವರನ್ನು ನಿರ್ಲಕ್ಷಿಸಿದ್ದರು. ನಂತರ ಈ ಕುರಿತು ಬೆಂಗಳೂರು ದಕ್ಷಿಣ ಡಿಸಿಪಿಯವರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಸಂಸದರು ಮತ್ತು ಶಾಸಕರ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳಿಗಾಗಿ ಕರ್ನಾಟಕದಲ್ಲಿ ಸ್ಥಾಪಿಸಲಾದ ವಿಶೇಷ ನ್ಯಾಯಾಲಯದಲ್ಲಿ ಏಪ್ರಿಲ್‌ನಲ್ಲಿ ದೂರು ದಾಖಲಿಸಿದ ನಂತರ, ನ್ಯಾಯಾಲಯವು ಸೆಪ್ಟೆಂಬರ್ 27ರಂದು ಎಫ್ಐಆರ್ ದಾಖಲಿಸಲು ಆದೇಶಿಸಿತು. ಈ ಆದೇಶದ ನಂತರ ಅದೇ ತಿಲಕನಗರ ಪೊಲೀಸರು ಮರುದಿನವೇ ಪ್ರಕರಣ ದಾಖಲಿಸಬೇಕಾಯಿತು.

ನಿರ್ಮಲಾ ಸೀತಾರಾಮನ್ ಹಾಗೂ ಜಾರಿ ನಿರ್ದೇನಾಲಯದ ಅಧಿಕಾರಿಗಳು 2019 ರಿಂದ 2023 ರ ನವೆಂಬರ್ ಅವಧಿಯಲ್ಲಿ ಸಾಂವಿಧಾನಿಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಇತರೆ ಆರೋಪಿಗಳ ಜತೆ ಒಳಸಂಚು ನಡೆಸಿ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ದೇಶೀಯ ಕಾರ್ಪೋರೇಟ್ ಕಂಪನಿಗಳ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕರನ್ನು ಹೆದರಿಸಿ ಚುನಾವಣಾ ಬಾಂಡ್ ಹೆಸರಿನಲ್ಲಿ 8,000 ಕೋಟಿ ರೂ.ಗಳನ್ನು ಬಲವಂತವಾಗಿ ಸುಲಿಗೆ ಮಾಡಿದ್ದಾರೆ ಎಂಬುದು ದೂರುದಾರರ ಆರೋಪ.

ನಿರ್ಮಲಾ ಸೀತಾರಾಮನ್ ಸೂಚನೆಯಂತೆ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಕಾರ್ಪೊರೇಟ್ ಕಂಪೆನಿಗಳ ಮೇಲೆ ದಾಳಿ ನಡೆಸಿ ಹಲವರನ್ನು ಬಂಧಿಸಿದ್ದರು. ಈ ದಾಳಿಗಳಿಗೆ ಹೆದರಿದ ಕಂಪನಿಗಳ ಸಿಇಒಗಳು, ವ್ಯವಸ್ಥಾಪಕ ನಿರ್ದೇಶಕರುಗಳು ನೂರಾರು ಕೋಟಿ ರೂ.ಗಳ ಚುನಾವಣಾ ಬಾಂಡ್ ಗಳನ್ನು ಖರೀದಿ ಮಾಡಿದ್ದರು. ಇದರಿಂದ ಬಿಜೆಪಿ ರಾಷ್ಟ್ರ ಘಟಕ ಹಾಗೂ ರಾಜ್ಯ ಘಟಕವು ಲಾಭ ಪಡೆದಿದೆ ಎಂದು ಆರೋಪಿಸಲಾಗಿದೆ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಕೇಂದ್ರ ತನಿಖಾ ಸಂಸ್ಥೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಸಿಬಿಐ, ಇಡಿ ಬಳಸಿ ವಿರೋಧ ಪಕ್ಷಗಳ ಪ್ರಮುಖ ನಾಯಕರನ್ನು ಬೆದರಿಸಿ ಬಗ್ಗುಬಡಿಯಲು ಯತ್ನಿಸುವುದು, ತಮ್ಮ ಹಾದಿಗೆ ಬರದಿದ್ದರೆ ಕಿರುಕುಳ ನೀಡುವುದು, ಅಕ್ರಮ ಪ್ರಕರಣಗಳು, ಬಂಧನಗಳನ್ನು ಮಾಡುವುದು ಮೋದಿ ಸರಕಾರಕ್ಕೆ ಮಾಮೂಲಿಯಾಗಿ ಬಿಟ್ಟಿದೆ. ಇಂತಹ ಅನೈತಿಕ ಕ್ರಮಗಳ ಮೂಲಕ ಪಕ್ಷದ ನಿಧಿ ಸಂಗ್ರಹಿಸಬಹುದು ಎಂಬುದನ್ನು ಇತ್ತೀಚಿನ ಬೆಂಗಳೂರು ಪೊಲೀಸರ ಎಫ್ಐಆರ್ ಪ್ರಕರಣ ದೃಢಪಡಿಸಿದೆ. ಕೈಗಾರಿಕೋದ್ಯಮಿಗಳು, ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು, ಸಿಇಒಗಳು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಉನ್ನತ ಅಧಿಕಾರಿಗಳ ಮೇಲೆ ಇಡಿ ದಾಳಿ ನಡೆಸಿ ಆಸ್ತಿ ವಶಪಡಿಸಿಕೊಂಡು ವಿವಿಧ ರೀತಿಯಲ್ಲಿ ಬೆದರಿಕೆ ಹಾಕಿದ್ದಾರೆ, ಪಕ್ಷದ ಹೆಸರಿನಲ್ಲಿ ಎಲೆಕ್ಟೋರಲ್ ಬಾಂಡ್ ಖರೀದಿಸಿದ್ದಾರೆ ಮತ್ತು ಹೆಚ್ಚು ಲೂಟಿ ಮಾಡಿದ್ದಾರೆ ಎಂಬ ದೂರುದಾರರ

ಪುಟ 4 ಕ್ಕೆ

ಕರ್ಜಗಿ ನೇಮಕ: ಸರಕಾರದ ನಿರ್ಧಾರ ಓಲೈಕೆ ರಾಜಕಾರಣವೇ?

ಈ ವಾರ

ಎಸ್.ವೈ.ಗುರುಶಾಂತ್

ಕರ್ನಾಟಕದ ಸರ್ಕಾರಕ್ಕೆ ಏನಾಗಿದೆ? ಈ ಸರ್ಕಾರದ ಚುಕ್ಕಾಣಿ ಹಿಡಿದವರ ಮೆದುಳಿನಲ್ಲಿ ಏನಿದೆ? ಕೋಮುವಾದದ ವಿರುದ್ಧ ಮತನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವುದಾಗಿ ದೊಡ್ಡ ಗಂಟಲಿ ಮಾತನಾಡುವ ಈ ಸರ್ಕಾರ ನಿಜಕ್ಕೂ ಆ ಮೌಲ್ಯಗಳನ್ನು ಸಂರಕ್ಷಿಸುವುದಕ್ಕೆ ಬದ್ಧವಾಗಿದೆಯೇ? ಎನ್ನುವ ಪ್ರಶ್ನೆ ಆಗೀಗ ಏಳುತ್ತಲೇ ಇರುತ್ತದೆ. ಈ ವಾರದ ಮತ್ತೊಂದು ಬೆಳವಣಿಗೆ ಯೆಂದರೆ ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಗುಣಮಟ್ಟ ಸುಧಾರಣಾ ಸಮಿತಿಗೆ ಗುರುರಾಜ ಕರ್ಜಗಿ ಅವರನ್ನು ಸರ್ಕಾರ ಅಧ್ಯಕ್ಷರನ್ನಾಗಿ ಮಾಡಿದೆ. ಇವರನ್ನೇ ಯಾಕೆ ಆಯ್ಕೆ ಮಾಡಿದರು ಎನ್ನುವ ಪ್ರಶ್ನೆಗೆ ಬಹುಶಃ ಅಂತಹ ಸ್ಪಷ್ಟ ಉತ್ತರ ಇರಲಿಕ್ಕಿಲ್ಲ. ಆದರೆ ನೇಮಕ ಮಾಡಿದವರಿಗೆ ಕೆಲವು ಅಭಿಪ್ರಾಯಗಳಿರಬಹುದು. ಇವರೊಬ್ಬ ಅತ್ಯಂತ ಪ್ರಭಾವಕಾರಿ ವಾಗ್ಮಿ, ಹಲವಾರು ಸಂಗತಿಗಳನ್ನು ನಿರ್ಗಳವಾಗಿ , ನೀತಿ ನಿಯಮಗಳನ್ನು ತಿಳಿಸುವ ತಜ್ಞರು ಎನ್ನುವುದು ಇರಬಹುದು! ಆದರೆ ಗುರುರಾಜ ಕರ್ಜಗಿ ಅವರು ಮಂಡಿಸುವ ವಿಚಾರಗಳು ವಿಚಾರ ಧಾರೆ ಎಂತಹುದು? ಅವರು ಹೇಳಬೇಕಾದುದನ್ನು ಉತ್ತಮವಾಗಿ ಪ್ರಸ್ತುತಪಡಿಸುತ್ತಾರೆ ಮನಮುಟ್ಟುವಂತೆ ವಿವರಿಸುತ್ತಾರೆ ಎನ್ನುವುದೇ ವೈಚಾರಿಕತೆಗೆ, ಶಿಕ್ಷಣದ ಒಂದು ಪ್ರಮುಖ ಮಾನದಂಡವಾಗಬಹುದೇ? ಅಂತಹುದೇ ಆಧಾರವಾಗುವುದಾದರೆ ಆ ವೈಚಾರಿಕತೆ ಏನನ್ನು ಪ್ರತಿಪಾದಿಸುತ್ತದೆ ಮತ್ತು ಪ್ರಭಾವಿಸುತ್ತದೆ ಎನ್ನುವುದು ಮುಖ್ಯವಾಗಬೇಕು. ಬಹುತೇಕ ಅವರ ವಿಚಾರ ವಿಶ್ಲೇಷಣೆ ಹಾಗೂ ಅದರ ವಸ್ತು ಭಿನ್ನವಾಗಿ ಇರುತ್ತವೆ. ಅತ್ಯಂತ ಭಾವನಾತ್ಮಕವಾದ ಮಾತುಗಳ ಮೂಲಕ ಜನಸಾಮಾನ್ಯರನ್ನು ಮೂಢರನ್ನಾಗಿಸುವಲ್ಲಿ ಅವರು ಪರಿಣಿತರು. ಬಹುತೇಕ, ಅವರ ಉಪನ್ಯಾಸಗಳು ಮೋಟಿವೇಶನಲ್ ಆಗಿರುತ್ತವೆ.

ಗುರುರಾಜ ಕರ್ಜಗಿ ಅವರು ಮೋಟಿವೇಷನಲ್ ಸ್ಪೀಚ್ ಗಳ ಮೂಲಕ ಮತ್ತು ಭಾಷಣಗಳ ಮೂಲಕ ಜನರನ್ನು ರಂಜಿಸುತ್ತಾರೆ ಅಥವಾ ಗಮನ ಸೆಳೆಯುತ್ತಾರೆ ಎನ್ನುವುದೇನೋ ನಿಜ! ಆದರೆ ಅವರು ಉತ್ಪ್ರೇಕ್ಷಿತವಾದ ಮತ್ತು ಅರೆಬರೆ ವಾಸ್ತವ ಸಂಗತಿಗಳು ಅಥವಾ ಸೃಷ್ಟಿಸಿದ ಕಲ್ಪನೆಗಳ ಮೂಲಕವಾಗಿ ಭಾವನಾತ್ಮಕವಾಗಿ ಮಾತನಾಡಿ ಜನಸಾಮಾನ್ಯರನ್ನು ಮೂಢರನ್ನಾಗಿಸುತ್ತಾರೆ. ಮುಖ್ಯವಾಗಿ, ಅವರು ಸಂಘ ಪರಿವಾರದ ತಾತ್ವಿಕ ನೆಲೆಗೆ ಬದ್ಧವಾದವರು ಮತ್ತು ಸಂಘಟನಾತ್ಮಕವಾಗಿಯೂ ಸಂಬಂಧ ಇರಿಸಿಕೊಂಡವರು. ಶಿಕ್ಷಣದ ಕುರಿತಾಗಿ ಅವರ ಚಿಂತನೆಗಳು ಮೂಲತಃ ಸಂಘ ಪರಿವಾರದ ನಡೆಯಿಂದಲೇ ಬಂದಿರುವಂಥವು. ಸಮಾನತೆಯ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ವಿರುದ್ಧ ಮತ್ತು ಅಂದರೆ ಸಿದ್ಧಾಂತಕ್ಕೆ ಬದ್ಧವಾಗಿರುವುದು ಗುಟ್ಟೇನಲ್ಲ.

ಹೈದರಾಬಾದ್ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕದಲ್ಲಿ ಇಂದಿನ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಅದರ ಅಧೋಗತಿಗೆ ಕಾರಣವಾಗಿರುವ ಅಂಶಗಳ ಬಗ್ಗೆ ಅವರಿಗೆ ಯಾವ ನಿಲುವಿದೆ ಅವರು ಇಲ್ಲಿರುವ ಪ್ರಾದೇಶಿಕ ಅಸಮಾನತೆಯ ಮೂಲಗಳ ಬಗ್ಗೆ ಅರಿವಿದೆಯೇ? ಇಲ್ಲಿಯ ಆರ್ಥಿಕ ಅಸಮಾನತೆ ಬಗೆಗಾಗಲೀ, ಭೂಮಿ ಮುಂತಾದ ಆಸ್ತಿ ಪಾಲಿನಲ್ಲಿ ಅಗಾಧವಾದ, ಕಂದರವಿದೆ. ಇಲ್ಲಿ ಭೂಹೀನರೇ ಅತ್ಯಧಿಕವಾಗಿ ಇರುವುದು, ಆರ್ಥಿಕ ಬಡತನದ ಜೊತೆಯಲ್ಲಿ ಸಾಮಾಜಿಕ ಹಿಂದುಳಿದಿರುವೆ ಮತ್ತು ವಂಚಿತ ಸಮುದಾಯಗಳು ಮೇಲೇರಲಾಗದ ಸ್ಥಿತಿ, ಮೌಢ್ಯತೆ ಕಾರಣವಾಗಿರುತ್ತದೆ ಎನ್ನುವುದರ ನೆಲೆಯನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆಯೇ ಅಥವಾ ಒಪ್ಪುತ್ತಾರೆಯೇ? ಎಂದಾಗ ಖಂಡಿತವಾಗಲೂ ಈ ಚಿಂತನೆಗಳಿಗೆ ಭಿನ್ನವಾದಂತಹ ನಿಲುವು ಇರುತ್ತದೆ. ಇಂತಹ ತಿಳುವಳಿಕೆ ಇರುವ ಅವರು ಕೊಡಬಹುದಾದ ಪರಿಹಾರಗಳಾದರೂ ಎಂತಹವು? ಎನ್ನುವುದರ ಪರಿಕಲ್ಪನೆಯದರೂ ಕಾಂಗ್ರೆಸ್ಸಿನ ಸರ್ಕಾರಕ್ಕೆ ಇದೆಯೇ? ಇಂತಹ ಒಂದು ಸಮಿತಿಯನ್ನು ರಚಿಸುವಾಗ ಮತ್ತು ಅದರ ನೇತೃತ್ವವನ್ನು ನೀಡುವಾಗ ಸರಕಾರ ಅತಗಯಂತ ಗಂಭೀರವಾಗಿ ಯೋಚಿಸ ಬೇಡವೇ? ಇಲ್ಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯ ಅಡಿಯಲ್ಲಿ ಈ ಸಮಿತಿಯನ್ನು ರಚಿಸಲಾಗಿದ್ದು ಮಂಡಳಿಯ ಅಧ್ಯಕ್ಷ ಶಾಸಕ ಅಜಯ್ ಸಿಂಗ್ ಅವರು ಈ ನಿರ್ಧಾರ ಕೈಗೊಂಡಿರುವ ಕಾರಣವಾದರೂ ಏನು? ಇದು ಅವರ ವ್ಯಕ್ತಿಗತ ನಿರ್ಧಾರವಾಗಿರುತ್ತದೆ ಎಂದು ಭಾವಿಸಲಾಗುವುದಿಲ್ಲ ಉನ್ನತ ಮಟ್ಟದಲ್ಲಿ ಕನಿಷ್ಠ ಸಮಾಲೋಚನೆ ಇಲ್ಲದಿರಲು ಸಾಧ್ಯವೇ ಇಲ್ಲ.

ಇದೇ ಕರ್ನಾಟಕ ಸರ್ಕಾರ ಈ ವರ್ಷದ ಸಾಲಿನಲ್ಲಿ ನೀಡಬೇಕಿರುವ ಉತ್ತಮ ಶಿಕ್ಷಕ ಪ್ರಶಸ್ತಿಯ ಆಯ್ಕೆಯಲ್ಲಿ ಇಂತಹದೇ ಪ್ರಮಾದವನ್ನು ಎಸಗಿದ್ದನ್ನು ಇತ್ತೀಚಿಗೆ ಕಂಡಿದ್ದೇವೆ. ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ವಿದ್ಯಾರ್ಥಿಗಳ ನಡುವೆ ಕೋಮು ದ್ವೇಷದ ಭಾವನೆಗಳನ್ನ ಬಿತ್ತುವ ಮತ್ತು ವಿದ್ಯಾರ್ಥಿಗಳನ್ನ ಮತೀಯ ನೆಲೆಯಲ್ಲಿ ವಿಭಜಿಸುವ ಕೃತ್ಯಗಳಲ್ಲಿ ಸಕ್ರಿಯವಾಗಿರುವ, ಹಿಜಾಬ್ ವಿವಾದದ ದಲ್ಲಿ ಪ್ರಮುಖ ಪಾತ್ರ ವಹಿಸಿದ ಶಿಕ್ಷಕ ಬಿ.ಜಿ.ರಾಮಕೃಷ್ಣ ರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ತೀವ್ರ ಪ್ರತಿರೋಧದ ಒತ್ತಡದ ಹಿನ್ನೆಲೆಯಲ್ಲಿ ಕೊನೆಗೆ ಸರ್ಕಾರ ಅದನ್ನು ರದ್ದುಪಡಿಸಿತು ಎನ್ನುವುದು ಬೇರೆ ವಿಷಯ. ಇಲ್ಲಿ ಬರುವ ಪ್ರಶ್ನೆ ಎಂದರೆ ಇಂತಹ ನಿರ್ಧಾರಗಳನ್ನು ಕೈಗೊಳ್ಳುವಾಗ ಪೂರ್ವಾಪರವಾಗಿ ವಿವೇಚಿಸುವುದಿಲ್ಲವೇ? ಸೂಕ್ತವಾದ ರೀತಿಯಲ್ಲಿ ಪರಿಶೀಲನೆ ನಡೆಸುವುದಿಲ್ಲವೇ ಅಥವಾ ಗೊತ್ತಿದ್ದರೂ ಕೂಡ ಸಂಘ ಪರಿವಾರದವರನ್ನು ಮೆಚ್ಚಿಸಲು ಈ ಸರ್ಕಾರ ಪ್ರಯತ್ನಿಸುತ್ತಿದೆಯೇ ಎನ್ನುವ ಪ್ರಕಾರ ಶ್ನೆ ಸಹಜವಾಗಿ ಏಳುತ್ತದೆ. ಮುಖ್ಯ ಪ್ರಶ್ನೆ ಕಾಂಗ್ರೆಸ್ ಸರ್ಕಾರ ಅಥವಾ ಅದರ ಮುಖ್ಯಮಂತ್ರಿ ಅಥವಾ ಇನ್ನೂ ಒಬ್ಬಿಬ್ಬರು ಕೋಮುವಾದದ ವಿರುದ್ಧ ಮಾತನಾಡುತ್ತಾರೆ ಎನ್ನುವುದು ನಿಜ. ಆದರೆ ಅದು ಕೇವಲ ಮತ ಸೆಳೆಯುವ ಮಟ್ಟಕ್ಕೆ ಮಾತ್ರವೇ? ಅಥವಾ ಪ್ರಾಮಾಣಿಕವಾಗಿಯೂ ಸಮಾಜದಲ್ಲಿ ಮತ್ತು ಎಳೆಯ ಮನಸ್ಸುಗಳ ಮೇಲೆ ನಿರಂತರವಾಗಿ ಸಿಂಪಡಿಸುತ್ತಿರುವ ಕೋಮುವಾದದ ವಿಷವನ್ನು ತೆಗೆಯುವ, ತೊಲಗಿಸುವ ವಿಷಯದಲ್ಲಿ ಈ ಸರ್ಕಾರ ಬದ್ಧವಾಗಿರುತ್ತದೆಯೇ? ಕೋಮುವಾದದ ವಿರುದ್ಧ ಸೆಕ್ಯುಲರಿಸಂ ಬಗ್ಗೆ ಮಾನಾಡುತ್ತಲೇ ಕೋಮುವಾದಿಗಳನ್ನು ಓಲೈಸುವ ವರಸೆಯೂ ಕೂಡ ಜೊತೆ ಜೊತೆಯಲ್ಲೇ

ಪುಟ 15ಕ್ಕೆ

ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಪ್ರಕರಣವನ್ನು ಮುಕ್ತಾಯಗೊಳಿಸಿದ ಸಿಬಿಐ

ಮೋದಿ ಸರ್ಕಾರದಿಂದ ತನಿಖಾ ಸಂಸ್ಥೆಗಳ ದುರುಪಯೋಗದ ಇನ್ನೊಂದು ನಿದರ್ಶನ

ಎನ್‌ಡಿಟಿವಿಯ ಮಾಜಿ ಪ್ರವರ್ತಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ವಿರುದ್ಧ 2017ರಲ್ಲಿ ದಾಖಲಾಗಿದ್ದ ಪ್ರಕರಣವನ್ನು ಸಿಬಿಐ 2024ರ ಅಕ್ಟೋಬರ್ ಒಂದರಂದು ಮುಕ್ತಾಯಗೊಳಿಸಿದೆ. ಏಳು ವರ್ಷಗಳ ಸುದೀರ್ಘ ತನಿಖೆಯು ಯಾವುದೇ ಸಾಕ್ಷ್ಯಾಧಾರಗಳಿಲ್ಲದ ಕಾರಣ ಸಿಬಿಐಗೆ ಈ ಕ್ರಮವು ಅನಿವಾರ್ಯವಾಯಿತು. ಪ್ರಕರಣದ ಮುಕ್ತಾಯ ವರದಿಯಲ್ಲಿ ಸಿಬಿಐ ಅಧಿಕಾರಿಗಳು ಇದನ್ನೇ ಉಲ್ಲೇಖಿಸಿದ್ದಾರೆ. ಈ ಪ್ರಕರಣವು ಆಡಳಿತಾರೂಢ ಬಿಜೆಪಿಯು ತನಿಖಾ ಸಂಸ್ಥೆಗಳನ್ನು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬುದಕ್ಕೆ ಇತ್ತೀಚಿನ ಉದಾಹರಣೆಯಾಗಿದೆ. ನರೇಂದ್ರ ಮೋದಿ ಸರ್ಕಾರದ ಪಬ್ಲಿಕ್ ಟೆಲಿವಿಷನ್ ನೀತಿಗಳ ವಿರುದ್ಧ ಹರಿಹಾಯ್ದ ಎನ್‌ಡಿಟಿವಿಯನ್ನು ಗೌತಮ್ ಅದಾನಿ ಕೈಗೆತ್ತಿಕೊಂಡು, ಅದು ಸಂಪೂರ್ಣ ಮೌನವಾದ ನಂತರವೇ ಈ ಬೆಳವಣಿಗೆ ನಡೆದಿರುವುದು ಗಮನಾರ್ಹ.

ಏನಿದು ಪ್ರಕರಣ?

ಜೂನ್ 2017 ರಲ್ಲಿ, ಐಸಿಐಸಿಐ ಬ್ಯಾಂಕ್‌ಗೆ 48 ಕೋಟಿ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ ಎಂಬ ಆರೋಪ ಹೊರಿಸಿ ಸಿಬಿಐ ಎನ್ ಡಿಟಿವಿಯ ಮಾಜಿ ಪ್ರವರ್ತಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ವಿರುದ್ಧ ಎಫ್ ಐಆರ್ ದಾಖಲಿಸಿತು. 2009 ರಲ್ಲಿ ಸಾಲದ ಇತ್ಯರ್ಥದಲ್ಲಿ ಉದ್ದೇಶಪೂರ್ವಕವಾಗಿ ಮೋಸದ ನಡವಳಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ಇಬ್ಬರು ಬ್ಯಾಂಕ್ ಗೆ ಈ ನಷ್ಟವನ್ನು ಉಂಟುಮಾಡಿದರು ಎಂದು ಸಿಬಿಐ ಆರೋಪಿಸಿತ್ತು. ತನಗೆ ಇವರಿಂದ ನಷ್ಟವಾಗಿದೆ ಎಂದು ಐಸಿಐಸಿಐ ಬ್ಯಾಂಕ್ ಯಾವುದೇ ದೂರು ನೀಡಲಿಲ್ಲ, ಬದಲಾಗಿ ಖಾಸಗಿ ವ್ಯಕ್ತಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಸಿಬಿಐ ಈ ತನಿಖೆ ಆರಂಭಿಸಿತು ಎಂಬುದು ಗಮನಾರ್ಹ! ಈ ಕ್ರಮವನ್ನು ಮಾಜಿ ಸಿಬಿಐ ಅಧಿಕಾರಿಗಳು ಕೂಡ ತಪ್ಪಾಗಿ ಮಾಡಿದ್ದಾರೆ. ಆದರೆ, ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ನಿವಾಸಗಳು ಹಾಗೂ ಎನ್ಡಿಟಿವಿ ಕಚೇರಿಗಳ ಮೇಲೆ ಸಿಬಿಐ ದಾಳಿ ನಡೆಸಿ ಭೀತಿ ಸೃಷ್ಟಿಸಿತ್ತು. 2019 ರಲ್ಲಿ, 35ಕ್ಕೂ ಹೆಚ್ಚು ಶೆಲ್ ಕಂಪನಿಗಳಿವೆ ಎಂದು ಹೇಳಿಕೊಂಡು ಇವರ ಮೇಲೆ ಮತ್ತೊಂದು ಪ್ರಕರಣವನ್ನು ದಾಖಲಿಸಲಾಯಿತು.

ಸರ್ಕಾರದ ಈ ಕ್ರಮಗಳು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ದೇಶದಾದ್ಯಂತ ಪತ್ರಕರ್ತರು ದೂರಿದರು. ಪ್ರತಿಪಕ್ಷಗಳೂ ಅವರನ್ನು ಬೆಂಬಲಿಸಿದವು. ಆದರೆ, ಅಧಿಕಾರದಲ್ಲಿರುವವರಿಗೆ ಅತ್ಯಂತ ನಿಷ್ಠೆಯಿಂದ ನಡೆದುಕೊಳ್ಳುತ್ತಿರುವ ಸಿಬಿಐ ಇದಕ್ಕೆ ಕಿಂಚಿತ್ತೂ ತಲೆಕೆಡಿಸಿಕೊಳ್ಳಲಿಲ್ಲ. ಸಿಬಿಐ ಜತೆಗೆ ಇಡಿ, ಸಂಪರ್ಕ ಇಲಾಖೆಗಳೂ ಫೀಲ್ಡಿಗಿಳಿದವು. 2022ರಲ್ಲಿ, ಗೌತಮ್ ಅದಾನಿ ಗ್ರೂಪ್ NDTV ಅನ್ನು ಸ್ವಾಧೀನಪಡಿಸಿಕೊಂಡಿತು. ಸಿಬಿಐ ಯಾವುದೇ ಸಾಕ್ಷ್ಯಾಧಾರಗಳನ್ನು ತೋರಿಸದೆ ಈಗ ಪ್ರಕರಣವನ್ನು ಮುಚ್ಚಿಹಾಕಿದೆ. ಇದರಿಂದ, ಈ ಕಿರುಕುಳಗಳು ಯಾಕಾಗಿ ಮತ್ತು ಯಾರಿಗಾಗಿ ಮಾಡಲಾಗಿದೆ ಎಂಬುದೀಗ ಇಡೀ ದೇಶಕ್ಕೆ ಸ್ಪಷ್ಟವಾಗಿದೆ.



ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರ ಆಳ್ವಿಕೆಯಲ್ಲಿ ಎನ್ ಡಿಟಿವಿ ಸ್ವತಂತ್ರ ಮಾಧ್ಯಮ ಕಂಪನಿಯಾಗಿ ದೇಶಾದ್ಯಂತ ಗುರುತಿಸಲ್ಪಟ್ಟಿದೆ. ಇದು ಜನರನ್ನು ವಿಭಜಿಸುವ ಕೋಮು ನೀತಿಗಳ ವಿರುದ್ಧ ಮತ್ತು ರೈತರ ಆಂದೋಲನಗಳ ಮೂಲ ಕಾರಣಗಳ ಬಗ್ಗೆ ಅನೇಕ ಸುದ್ದಿಗಳನ್ನು ಪ್ರಸಾರ ಮಾಡಿದೆ. ಅದಾನಿಯವರು ಎನ್ ಡಿಟಿವಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಸ್ವತಂತ್ರ ಮಾಧ್ಯಮದ ಮೇಲಿನ ದೊಡ್ಡ ದಾಳಿ ಎಂದು ಹಲವರು ಟೀಕಿಸಿದ್ದಾರೆ. ತನಗಾಗದವರ ವಿರುದ್ಧ ಮೋದಿ ಸರ್ಕಾರ ಜಾರಿಗೆ ತಂದಿರುವ ಪಕ್ಷಪಾತದ ಕ್ರಮಗಳಿಗೆ ಇದು ಒಂದು ನಿದರ್ಶನವಾಗಿದೆ. ಇಂತಹ ಸುದ್ದಿಗಳನ್ನು ಬೆಳಕಿಗೆ ತಂದ ನ್ಯೂಸ್ ಕ್ಲಿಕ್ ಸಂಪಾದಕರಾದ 74 ವರ್ಷದ ಪ್ರಬೀರ್ ಪುರಕಾಯಸ್ಥ ಅವರ ಮೇಲೆ ಮೋದಿ ಸರ್ಕಾರ ಕಠಿಣ ಕ್ರಮ ಕೈಗೊಂಡಿತು. ವಿದೇಶದಿಂದ ಅಕ್ರಮವಾಗಿ ಹಣ ಪಡೆದ ಆರೋಪದಲ್ಲಿ ಅವರನ್ನು 225 ದಿನಗಳ ಕಾಲ ಜೈಲಿನಲ್ಲಿರಿಸಲಾಗಿತ್ತು. ಅವರ ಬಂಧನಕ್ಕೂ ಮುನ್ನ ಅವರ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಭಯದ ವಾತಾವರಣ ಸೃಷ್ಟಿಸಿದ್ದರು. ಅಂತಿಮವಾಗಿ, ದೇಶದ ಸುಪ್ರೀಂ ಕೋರ್ಟ್ ಪುರಕಾಯಸ್ಥ ಅವರ ಬಂಧನ ಮತ್ತು ವಿಚಾರಣೆ ಕಾನೂನು ವಿರೋಧಿ ಕ್ರಮ ಎಂದು ಘೋಷಿಸಿ ಅವರಿಗೆ ಜಾಮೀನು ನೀಡಿತು.

ಈ ರೀತಿ ಹೇಳುತ್ತಾ ಹೋದರೆ ಒಂದೇ, ಎರಡೇ... ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾಧ್ಯಮದ ಮೇಲೆ ಮೋದಿ ಸರಕಾರದ ದಾಳಿಗಳು ಹಲವು. ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವ ಉದ್ದೇಶದಿಂದ ಮೋದಿ ಸರ್ಕಾರವು ತಂದಿರುವ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ–1967 (ಯುಎಪಿಎ) ಅಡಿಯಲ್ಲಿ ದೇಶಾದ್ಯಂತ ಅನೇಕ ಬುದ್ಧಿಜೀವಿಗಳು, ಬರಹಗಾರರು ಮತ್ತು ಕಲಾವಿದರನ್ನು ಬಂಧಿಸಿದೆ. ದೇಶಾದ್ಯಂತ ಸಂಚಲನ ಮೂಡಿಸಿದ ಬಿಮಾಕೋರೆಗಾಂವ್ ಪ್ರಕರಣ ಇದಕ್ಕೊಂದು ಉದಾಹರಣೆ. 2018 ರಲ್ಲಿ ಪ್ರಾರಂಭವಾದ ಈ ಪ್ರಕರಣದಲ್ಲಿ, ವಿವಿಧ ಪ್ರದೇಶಗಳಿಗೆ ಸೇರಿದ 16 ಮಾನವ ಹಕ್ಕುಗಳ ಕಾರ್ಯಕರ್ತರನ್ನು ಮೋದಿ ಸರ್ಕಾರವು ಬಂಧಿಸಿ ಅವರನ್ನು ನಿರ್ಬಂದಿಸಿತು. ಈವರೆಗೆ ಯಾರೊಬ್ಬರ ವಿರುದ್ಧವೂ ಕೂಡಾ ಆರೋಪ ಸಾಬೀತಾಗಿಲ್ಲ. ಒಬ್ಬೊಬ್ಬರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗುತ್ತಿದ್ದಾರೆ. ಯುಎಪಿಎ ಪ್ರಕರಣಗಳಲ್ಲಿ ಕೇವಲ ಶೇ. 2.8 ರಷ್ಟು ಜನರ ಮೇಲೆ ಅಪರಾಧ ಸಾಬೀತಾಗಿ ಶಿಕ್ಷೆಯಾಗಿದೆ ಎಂದು ಒಂದು ಅಧ್ಯಯನದಿಂದ ತಿಳಿದುಬಂದಿದೆ. ಈ ರೀತಿಯ ದಮನಕಾರಿ ನೀತಿಗಳ ವಿರುದ್ಧ ಸಂಘಟಿತ ಹೋರಾಟ ಮಾಡುವುದು ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಿದೆ.

ಬಿಪಿಎಲ್ ಗೆ ಇರುವ ಮಾನದಂಡ........ ಪುಟ 2 ರಿಂದ

ಜನರ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ ಎಂದು ಹೇಳಿಕೊಳ್ಳುವ ಸರ್ಕಾರ, ಹಸಿವಿನ ಸೂಚ್ಯಂಕದಲ್ಲಿ ನಮ್ಮ ದೇಶದ ಸ್ಥಾನ ಏಕೆ ಕೆಳಗಿಳಿಯಿತು ಎಂಬುದನ್ನು ವಿವರಿಸಬಹುದಲ್ಲವೇ?

ಪಡಿತರ ವ್ಯವಸ್ಥೆ ಇಲ್ಲವಾಗಿಸಲು

1990 ದಶಕದಲ್ಲಿ ದೇಶದಲ್ಲಿ ಮುಕ್ತ ಆರ್ಥಿಕ ನೀತಿಗಳು ಜಾರಿಯಾದ ನಂತರ, ಸರಕು ಮತ್ತು ಸೇವೆ ಎಲ್ಲವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡುವ ಪ್ರಕ್ರಿಯೆ ನಡೆಯುತ್ತಿದೆ. ಸರಕಾರ ತನ್ನ ಸಾರ್ವಜನಿಕ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳಬೇಕು ಎಂಬುದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ(ಐಎಂಎಫ್)ಯ ಷರತ್ತುಗಳಲ್ಲಿ ಒಂದು. ಇದರ ಭಾಗವಾಗಿಯೇ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಇಲ್ಲವಾಗಿಸಲಾಯ್ತು. ಪೆಟ್ರೋಲಿಯಂ ಪದಾರ್ಥಗಳ ಬೆಲೆ ನಿಗದಿಯ ಮೇಲಿದ್ದ ಸರ್ಕಾರದ ನಿಯಂತ್ರಣವನ್ನು ಹಿಂಪಡೆದು, ತೈಲ ಸಂಸ್ಥೆಗಳೇ ಬೆಲೆ ನಿಗದಿ ಮಾಡಲು ಅವಕಾಶ ಮಾಡಿಕೊಡಲಾಯಿತು. ಮುಂದುವರಿದ ಭಾಗವಾಗಿ ಪಡಿತರ ವ್ಯವಸ್ಥೆಯನ್ನು ನಾಶಮಾಡಲು ಕೇಂದ್ರ ಸರ್ಕಾರ ಹಲವು ರೀತಿಯಲ್ಲಿ ಕಾರ್ಯತಂತ್ರಗಳನ್ನು ರೂಪಿಸುತ್ತಿದೆ. ಬಡತನ ರೇಖೆಯನ್ನು ಕೆಳಗೆ ತಳ್ಳುವ ಮೂಲಕ, ಪಡಿತರ ಚೀಟಿಗೆ ಆದಾರ್ ಜೋಡಣೆ ಮೂಲಕ, ಬಯೋಮೆಟ್ರಿಕ್ ವ್ಯವಸ್ಥೆ ತರುವ ಮೂಲಕ ಕೋಟ್ಯಾಂತರ ಬಡ ಕುಟುಂಬಗಳನ್ನು ಪಡಿತರದಿಂದ ವಂಚಿತರನ್ನಾಗಿಸಿದೆ. ಪಡಿತರ ಪದಾರ್ಥಗಳ ಬದಲಾಗಿ ಅದಕ್ಕೆ ಸರ್ಕಾರ ಮಾಡುವ ವೆಚ್ಚದ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಾಕುವ 'ನೇರನಗದು ಯೋಜನೆ'ಯ ಜಾರಿಗೆ ಸರ್ಕಾರ ಈಗ ಮುಂದಾಗಿದೆ. ಇದು ಕೇಂದ್ರಾಡಳಿತ ಪ್ರದೇಶಗಳಾದ ಪಾಂಡಿಚೇರಿ, ಲಕ್ಷದ್ವೀಪ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಬಾಗಶಃ ಜಾರಿಗೆ ಬಂದಿದೆ. ಕರ್ನಾಟಕದಲ್ಲಿಯೂ ಇಲ್ಲಿನ ಕಾಂಗ್ರೆಸ್ ಸರ್ಕಾರ ಐದು ಕೆಜಿ ಅಕ್ಕಿ ಬದಲು 170 ರೂ.ಗಳನ್ನು ನೇರನಗದು ಯೋಜನೆ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುತ್ತಿರುವುದು ಈ ತಂತ್ರದ ಭಾಗವೇ ಆಗಿದೆ. ಮೂರು ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಪ್ರಯತ್ನಿಸಿದ್ದು, ಕೃಷಿ ಉತ್ಪನ್ನಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಬೆಂಬಲ ಬೆಲೆ ನಿಗದಿ ಮಾಡದಿರುವುದು, ಸರ್ಕಾರದ ಆಹಾರ ಧಾನ್ಯಗಳ ಗೋದಾಮುಗಳನ್ನು (Food Corporation of India godown) ಖಾಸಗಿಯವರ ಬಳಕೆಗೆ ಅವಕಾಶ ಮಾಡಿಕೊಡಲು ಮುಂದಾಗಿರುವುದು ಇವೆಲ್ಲವೂ ಈ ತಂತ್ರದ ಭಾಗವೇ ಆಗಿವೆ.

ಬಡತನ ರೇಖೆಯ ಇಂದಿನ ಮಾನದಂಡವನ್ನು ಬದಲಾಯಿಸಬೇಕು ಎಂದು ಒತ್ತಾಯಿಸುವ ಮೂಲಕ ನಿಜವಾದ ಬಡವರು ಬಿಪಿಎಲ್ ಕಾರ್ಡ್ ಉಳಿಸಿಕೊಳ್ಳಬೇಕು. ಪಡಿತರ ವ್ಯವಸ್ಥೆಯ ಮೂಲಕ ಮತ್ತಷ್ಟು ಅಗತ್ಯ ವಸ್ತುಗಳನ್ನು ವಿತರಿಸಬೇಕು ಮತ್ತು ಪಡಿತರ ವ್ಯವಸ್ಥೆಯಲ್ಲಿ ನೇರನಗದು ಯೋಜನೆ ಇರಬಾರದು ಎಂದು ಒತ್ತಾಯಿಸಬೇಕು. ಇಷ್ಟು ಮಾತ್ರವಲ್ಲದೆ, ಪಡಿತರ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ನವ ಉದಾರವಾದಿ ನೀತಿಗಳ ವಿರುದ್ಧ ಧ್ವನಿಎತ್ತಿ ಹೋರಾಡಬೇಕಿದೆ.

–ಸಿ.ಸಿದ್ದಯ್ಯ

ಚುನಾವಣಾ ಬಾಂಡ್ ಕೇಸ್: ಅಪರಾಧಿಗಳಿಗೆ ಶಿಕ್ಷೆ ಆಗಬೇಕು...... ಪುಟ 3 ರಿಂದ

ಆರೋಪಗಳನ್ನು ನೋಡಿದರೆ 8,000 ಕೋಟಿ ರೂ. ಗಿಂತ ಹೆಚ್ಚು ಹಣವನ್ನು ಲೂಟಿ ಮಾಡಲು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಇ.ಡಿ.ಯನ್ನು ಸಾಧನವಾಗಿ ಬಳಸಿಕೊಂಡರು ಎಂದಾಗುತ್ತದೆ. ಇದು ಅಧಿಕಾರ ದುರುಪಯೋಗ. ಕ್ವಿಡ್ ಪ್ರೊ ಕ್ವೊ ರಾಜಕೀಯ ಭ್ರಷ್ಟಾಚಾರವಲ್ಲದೆ ಮತ್ತೇನೂ ಅಲ್ಲ.

2017 ರಲ್ಲಿ ಬಿಜೆಪಿ ಸರ್ಕಾರವು ಎಲೆಕ್ಟೋರಲ್ ಬಾಂಡ್ ಯೋಜನೆಯನ್ನು ಪರಿಚಯಿಸಿದಾಗ, ಪ್ರತಿಪಕ್ಷಗಳು ಈ ಯೋಜನೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದವು. ಸಿಪಿಐ(ಎಂ) ಮತ್ತು ಇತರ ಕೆಲವು ಪ್ರತಿಪಕ್ಷಗಳು ಬಲವಾಗಿ ವಿರೋಧಿಸಿದವು. ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ, ಮಾಹಿತಿ ಹಕ್ಕು ಕಾಯಿದೆಯ ಉಲ್ಲಂಘನೆ ಮತ್ತು ಕ್ವಿಡ್ ಪ್ರೊ ಕ್ವೊ ಗೆ ಕಾರಣವಾಗುತ್ತದೆ ಎಂದು ಪರಿಗಣಿಸಿ ಸುಪ್ರೀಂ ಕೋರ್ಟ್ ಈ ವರ್ಷ ಫೆಬ್ರವರಿ 15 ರಂದು ಈ ಯೋಜನೆಯನ್ನೇ ರದ್ದುಗೊಳಿಸಿತು. ಚುನಾವಣಾ ಬಾಂಡ್ ಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಬಹಿರಂಗ ಪಡಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತು. ಆದರೆ, ಸಾರ್ವತ್ರಿಕ ಚುನಾವಣೆ ಮುಗಿಯುವವರೆಗೆ ವಿವರಗಳನ್ನು ಬಹಿರಂಗಪಡಿಸದಂತೆ ಮೋದಿ ಸರ್ಕಾರ ಎಸ್.ಬಿ.ಐ ಮತ್ತು ಚುನಾವಣಾ ಆಯೋಗದ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂಬುದನ್ನು ಇಡೀ ದೇಶ ಗಮನಿಸಿದೆ. ಚುನಾವಣಾ ಬಾಂಡ್‌ಗಳ ಬಗ್ಗೆ ಸುಪ್ರೀಂ ಕೋರ್ಟ್ ಮತ್ತು ವಿರೋಧ ವ್ಯಕ್ತಪಡಿಸಿರುವ ಆತಂಕಗಳು ನಿಜವೆಂದು ಬೆಂಗಳೂರು ಪ್ರಕರಣದೊಂದಿಗೆ ಮತ್ತಷ್ಟು ಸ್ಪಷ್ಟವಾಗಿದೆ. ಎಸ್‌ಬಿಐ ಮತ್ತು ಚುನಾವಣಾ ಆಯೋಗದ ವಿವರಗಳ ಪ್ರಕಾರ, ಚುನಾವಣಾ ಬಾಂಡ್‌ಗಳ ಮಾರಾಟದ ಮೂಲಕ ರಾಜಕೀಯ ಪಕ್ಷಗಳು ಪಡೆದ 16 ಸಾವಿರ ಕೋಟಿ ರೂ. ದೇಣಿಗೆಗಳಲ್ಲಿ, ಸಿಂಹಪಾಲು ಬಿಜೆಪಿಗೆ ಸೇರಿದೆ. ಎಲೆಕ್ಟೋರಲ್ ಬಾಂಡ್ ಗಳು ಯಾರಿಗೆ ಉಪಯುಕ್ತವಾಗಿವೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ತಮ್ಮದು ಸ್ವಚ್ಛ, ಭ್ರಷ್ಟಾಚಾರ ರಹಿತ ಪಕ್ಷ ಮತ್ತು ಸರ್ಕಾರ ಎಂದು ಹೇಳಿಕೊಳ್ಳುವ ಬಿಜೆಪಿ ನಾಯಕರು ಮತ್ತು ಮೋದಿಗೆ ಬೆಂಗಳೂರು ಪ್ರಕರಣವು ತಪ್ಪಿಸಿಕೊಳ್ಳಲಾಗದ ಸವಾಲಾಗಿದೆ.

ಎಫ್‌ಐಆರ್ ನೊಂದಿಗೆ ಎಲ್ಲವೂ ಮುಗಿದಿಲ್ಲ. ನಿಷ್ಪಕ್ಷಪಾತ ತನಿಖೆ ನಡೆಸಿ, ಸತ್ಯಾಂಶಗಳನ್ನು ಬಯಲಿಗೆಳೆದು ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾದರೆ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ. ❑

ಕಬ್ಬು ಬೆಳೆಗಾರರಿಗೆ ಎಸ್.ಎ.ಪಿ. ನೀಡುವಂತೆ ಕರ್ನಾಟಕ ಕಬ್ಬು ಬೆಳೆಗಾರರ ರಾಜ್ಯ ಸಮ್ಮೇಳನದ ಆಗ್ರಹ



ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ನೀಡುತ್ತಿರುವ ಬೆಲೆ ತೀರ ಕಡಿಮೆ ಇದ್ದು, ರಾಜ್ಯ ಸಲಹಾ ಬೆಲೆ(ಎಸ್‌ಎಪಿ) ಯನ್ನು ಇದೇ ವರ್ಷದಿಂದ ಕಬ್ಬು ಬೆಳೆಗಾರರಿಗೆ ಜಾರಿ ಮಾಡಬೇಕೆಂದು ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಪ್ರಥಮ ರಾಜ್ಯ ಸಮ್ಮೇಳನ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಕಲ್ಬುರ್ಗಿ ನಗರದಲ್ಲಿ ಸೆಪ್ಟೆಂಬರ್ 29ರಂದು ನಡೆದ ಸಮ್ಮೇಳನದಲ್ಲಿ ಇದೂ ಸೇರಿದಂತೆ ಕಬ್ಬು ಬೆಳೆಗಾರರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದ ಮೇಲೆ ಒತ್ತಡ ತರಲು ಮತ್ತು ಅದಕ್ಕಾಗಿ ಹೋರಾಟ ನಡೆಸಲು ನಿರ್ಣಯಿಸಲಾಗಿದೆ.

ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ, ಮಾತನಾಡಿದ ಅಖಿಲ ಭಾರತ ಕಬ್ಬು ಬೆಳೆಗಾರರ ಸಂಘದ ರಾಷ್ಟ್ರಾಧ್ಯಕ್ಷ ಡಿ.ರವೀಂದ್ರನ್ ಅವರು, ಕರ್ನಾಟಕ ರಾಜ್ಯದಲ್ಲಿ 9.5 ಇಳುವರಿ ಇರುವ ಕಬ್ಬಿಗೆ ನ್ಯಾಯಯುತ ಹಾಗೂ ಲಾಭದಾಯಕ ಬೆಲೆ ಸಿಗುವಂತೆ ಕ್ವಿಂಟಲ್‌ಗೆ ಕೇಂದ್ರ ಸರ್ಕಾರದ ಎಫ್‌ಆರ್‌ಪಿ ಬೆಲೆಯನ್ನು 5500 ರೂ. ನಿಗದಿಪಡಿಸಬೇಕು. ಜೊತೆಗೆ ಇದರ ಉಪ ಉತ್ಪನ್ನಗಳ ಲಾಭದಲ್ಲಿ ಶೇ. 50ರಷ್ಟನ್ನು ರೈತರಿಗೆ ಕಡ್ಡಾಯವಾಗಿ ವಿತರಿಸುವಂತಾಗಬೇಕೆಂಬ ಕಾನೂನು ಜಾರಿ ಮಾಡಬೇಕು. ಪಂಜಾಬ್ ಮತ್ತು ಹರಿಯಾಣದಲ್ಲಿ ಎಸ್‌ಎಪಿಯನ್ನು ಕಡ್ಡಾಯ ಎಂದು ವಿಧಾನಸಭೆಯಲ್ಲಿ ತಿದ್ದುಪಡಿ ತಂದು ಕಾನೂನು ಜಾರಿ ಮಾಡಿದ್ದಾರೆ. ಇದನ್ನು ಕರ್ನಾಟಕದಲ್ಲಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಸಹಕಾರಿ ಸಕ್ಕರೆ ಕಾರ್ಖಾನೆಗಳು, ಸರ್ಕಾರಿ ಮತ್ತು ಸಾರ್ವಜನಿಕ ಸಕ್ಕರೆ ಕಾರ್ಖಾನೆಗಳ ಆಧುನಿಕರಣಕ್ಕಾಗಿ ಬಡ್ಡಿರಹಿತ ಸಾಲವನ್ನು ಒದಗಿಸಿ ಕೊಡಬೇಕು. ಕೇಂದ್ರದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿಯಿದ್ದು, ಇದರಲ್ಲಿ ಸಾವಿರಾರು ಕೋಟಿ ರೂಪಾಯಿ ಇದೆ. ಈ ನಿಧಿಯನ್ನು ಇದಕ್ಕಾಗಿ ಬಳಸಿಕೊಳ್ಳಬೇಕೆಂದು ಅವರು ಆಗ್ರಹಿಸಿದರು.

ಸಕ್ಕರೆ ನಿಯಂತ್ರಣ ಆದೇಶ 2024 ಕಾಯಿದೆ ಜಾರಿ ಬೇಡ

ಕೇಂದ್ರ ಸರ್ಕಾರ ಸಕ್ಕರೆ ನಿಯಂತ್ರಣ ಆದೇಶ 2024 ಕಾಯ್ದೆ ಜಾರಿ ಮಾಡಲು ಹೊರಟಿದೆ. ಇದು ರೈತ ವಿರೋಧಿ ಮತ್ತು ಕಾರ್ಮಿಕ ವಿರೋಧಿಯಾಗಿದೆ. ದೇಶದಲ್ಲಿರುವ 5 ಕೋಟಿ ಕಬ್ಬು ಬೆಳೆಗಾರರೊಂದಿಗೆ ಚರ್ಚಿಸದೆ, ದಕ್ಷಿಣ ಭಾರತದ ಸಕ್ಕರೆ ಮಾಲೀಕರೊಡನೆ ಚರ್ಚೆ ಮಾಡಿ ಇದನ್ನು ಜಾರಿ ಮಾಡಲು ಹೊರಟಿದೆ. ಇದು ಕಬ್ಬು ಬೆಳೆಗಾರರಿಗೆ ಅಪಾಯಕಾರಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಈ ಕಾಯ್ದೆಯಲ್ಲಿ ಕೇಂದ್ರದ ಅನುಮತಿ ಇಲ್ಲದೆ ಸಕ್ಕರೆಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಬಾರದು ಹಾಗೂ ಕಬ್ಬು ಸಾಗಿಸಿದ ರೈತರಿಗೆ 14 ದಿನದೊಳಗೆ ಹಣ ನೀಡಬೇಕೆಂಬ ನಿಯಮವನ್ನು ತೆಗೆದು ಹಾಕುತ್ತಿರುವುದು ರೈತ ವಿರೋಧಿಯಾಗಿದೆ. ಕೇಂದ್ರದ ಅನುಮತಿ ಪಡೆದು ಮಾರಾಟ ಮಾಡಬೇಕೆಂದರೆ ಸಕ್ಕರೆ ಕಾರ್ಖಾನೆಗಳ ಮೇಲೆ ನಿಯಂತ್ರಣ ಹೇರುವುದರ ಜೊತೆಗೆ ರೈತರಿಗೆ 14 ದಿನದೊಳಗೆ ಹಣ ದೊರಕಿಸದಿರುವುದು ಈ ಕಾಯ್ದೆಯ ಉದ್ದೇಶವಾಗಿದೆ. ಆದ್ದರಿಂದ ಇದನ್ನು ಜಾರಿ ಮಾಡಲೇಬಾರದು ಎಂದು ಅವರು ಒತ್ತಾಯಿಸಿದರು.

ಸಕ್ಕರೆ ನಿಯಂತ್ರಣ ಆದೇಶ ಕಾಯ್ದೆ ಬಲಪಡಿಸಬೇಕು

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ್ ಮಾತನಾಡಿ, ಕೇಂದ್ರ ಸರ್ಕಾರ ಸಕ್ಕರೆ ನಿಯಂತ್ರಣ ಆದೇಶ 2024 ಕಾಯ್ದೆ ಜಾರಿ ಮಾಡಲು ಹೊರಟಿದ್ದು, ಇದನ್ನು ಜಾರಿ ಮಾಡಲು ಬಿಡುವುದಿಲ್ಲ. 1966 ಸಕ್ಕರೆ ನಿಯಂತ್ರಣ ಆದೇಶ ಕಾಯ್ದೆ ಬಲಪಡಿಸಬೇಕು ಎಂದು ಒತ್ತಾಯಿಸಿದರು.

ಅವಲಂಬಿತ 5 ಕೋಟಿ ರೈತರು

ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ನೂತನ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಲ್.ಭರತ್ ರಾಜ್ ಅವರು ಸಮ್ಮೇಳನದ ವರದಿ ಮಂಡಿಸಿ ಮಾತನಾಡುತ್ತಾ, 'ದೇಶದ ಜನಸಂಖ್ಯೆಯಲ್ಲಿ ಶೇ. 65ರಷ್ಟು ಮಂದಿ ಕೃಷಿಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ದೇಶದಲ್ಲಿ ಸುಮಾರು 5 ಕೋಟಿ ರೈತರು ಅವಲಂಬಿಸಿರುವ ಕಬ್ಬು ಬೆಳೆಯು ಭತ್ತದ ನಂತರದ ಸ್ಥಾನದಲ್ಲಿದೆ. ಇದರ ಜೊತೆಗೆ 5 ಲಕ್ಷ ಕಾರ್ಮಿಕರಿದ್ದಾರೆ ಎಂದು ವಿವರಿಸಿದರು.



ಭಾರತದಲ್ಲಿ ಇರುವ 732 ಸಕ್ಕರೆ ಕಾರ್ಖಾನೆಗಳಲ್ಲಿ 530 ಸಕ್ಕರೆ ಕಾರ್ಖಾನೆಗಳು ಸಕ್ರಿಯವಾಗಿವೆ. ಬ್ರಿಜಿಲ್ ನಂತರ ಭಾರತ ಸಕ್ಕರೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಭಾರತೀಯ ಸಕ್ಕರೆ ಉದ್ಯಮದ ವಾರ್ಷಿಕ ಉತ್ಪಾದನೆ ಸರಿಸುಮಾರು ರೂ.80,000 ಕೋಟಿ. 2021ರಲ್ಲಿ 42 ಮಿಲಿಯನ್ ಮೆಟ್ರಿಕ್ ಟನ್(ಎಮ್‌ಎಮ್‌ಟಿ), 2023ರಲ್ಲಿ 37 ಎಮ್‌ಎಮ್‌ಟಿ ಸಕ್ಕರೆ ಉತ್ಪಾದನೆಯಾಗಿದೆ.

ಭಾರತದಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಉತ್ತರಪ್ರದೇಶ ಮೊದಲನೆಯ ಸ್ಥಾನದಲ್ಲಿದೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ನಂತರದ ಸ್ಥಾನದಲ್ಲಿವೆ. ಆಂಧ್ರ ಪ್ರದೇಶ ಸೇರಿದಂತೆ ಬಿಹಾರ ಗುಜರಾತ್, ಹರಿಯಾಣ, ಪಂಜಾಬ್, ಉತ್ತರಕಾಂಡ್ ರಾಜ್ಯಗಳಲ್ಲಿ ಕಬ್ಬು ಬೆಳೆಯುತ್ತಾರೆ.

1933ರಲ್ಲಿ ಮಂಡ್ಯ ನಗರದಲ್ಲಿ

ಸಾರ್ವಜನಿಕ ಸಕ್ಕರೆ ಕಾರ್ಖಾನೆ ಏಷ್ಯಾ ಖಂಡದಲ್ಲೇ 1933ರಲ್ಲಿ ಮಂಡ್ಯ ನಗರದಲ್ಲಿ 'ಮೈಸೂರು ಸಕ್ಕರೆ ಕಾರ್ಖಾನೆ' ಪ್ರಾರಂಭವಾಯಿತು. ಸಹಕಾರಿ ಸಕ್ಕರೆ ಕಾರ್ಖಾನೆ ಮೊಟ್ಟ ಮೊದಲು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ 1958ರಲ್ಲಿ ಪ್ರಾರಂಭವಾಯಿತು.

ಕರ್ನಾಟಕವು ದೇಶದ ಸಕ್ಕರೆ ಉತ್ಪಾದನೆಯಲ್ಲಿ ಶೇ. 16ರಷ್ಟನ್ನು ಉತ್ಪಾದಿಸುತ್ತದೆ. ಬೆಳಗಾವಿ 28, ಬಾಗಲಕೋಟೆ 12, ಬಿಜಾಪುರ 9, ಮಂಡ್ಯ, ಬೀದರ್, ಕಲಬುರಗಿ ತಲಾ 5, ಹಾವೇರಿ 3, ಮೈಸೂರು 2 ಮತ್ತು ಚಾಮರಾಜನಗರ, ಹಾಸನ, ಗದಗ್, ದಾವಣಗೆರೆ, ವಿಜಯಪುರ, ಯಾದಗಿರಿ ಉತ್ತರ ಕನ್ನಡ, ಬಳ್ಳಾರಿ ಜಿಲ್ಲೆಗಳಲ್ಲಿ ತಲಾ ಒಂದೊಂದು ಸಕ್ಕರೆ ಕಾರ್ಖಾನೆಗಳಿವೆ.

ಪುಟ 14 ಕ್ಕೆ

ಕಬ್ಬು ಬೆಳೆಗಾರರ ಸಂಘಟನೆಯಿಂದ ಹೋರಾಟ

ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಅದ್ವಿತೀಯ ಸಾಧನೆ ಮಾಡಿರುವ ರೈತ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮಾರ್ಗದರ್ಶನದಲ್ಲಿ ಅಖಿಲ ಭಾರತ ಕಬ್ಬು ಬೆಳೆಗಾರರ ಸಂಘ ಪ್ರಾರಂಭವಾಗಿ, ದೇಶದ ಕಬ್ಬು ಬೆಳೆಯುವ ರಾಜ್ಯಗಳಲ್ಲಿ ಕೆಲಸ ಮಾಡುತ್ತಿದೆ. ಅದರಂತೆ ಕರ್ನಾಟಕದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮಾರ್ಗದರ್ಶನದಲ್ಲಿ ಕರ್ನಾಟಕ ಕಬ್ಬು ಬೆಳೆಗಾರರ ಸಂಘ (ಕೆಎಸ್‌ಎಫ್) ಕಬ್ಬು ಬೆಳೆಗಾರರ ಮಧ್ಯೆ ಕೆಲಸ ಮಾಡಲು ಆರಂಭಿಸಿದೆ.

ಮಂಡ್ಯ ಜಿಲ್ಲೆಯ 5 ಸಕ್ಕರೆ ಕಾರ್ಖಾನೆಗಳ ಪೈಕಿ ಎರಡರಲ್ಲಿ ಕರ್ನಾಟಕ ಕಬ್ಬು ಬೆಳೆಗಾರರ ಸಂಘ ಕಾರ್ಖಾನೆ ವ್ಯಾಪ್ತಿಯ ಸಮಾವೇಶ ನಡೆಸಿ ಸಮಿತಿಗಳನ್ನು ರಚಿಸಿದೆ. ಹಾಗೂ ಸ್ಥಳೀಯ ಬೇಡಿಕೆಗಳ ಆಧಾರದ ಮೇಲೆ ಹೋರಾಟ ನಡೆಸಿದೆ. ಅಲ್ಲದೆ ಮೈಸೂರು ಸಕ್ಕರೆ ಕಾರ್ಖಾನೆ ರೋಗ ಗ್ರಸ್ತವಾಗಿ ಸ್ಥಗಿತವಾಗಿದ್ದಾಗ, ಪುನರ್ ಪ್ರಾರಂಭಕ್ಕಾಗಿ ನಿರಂತರ ಹೋರಾಟ ನಡೆಸಿ, ಮಳವಳ್ಳಿಯಿಂದ ಮಂಡ್ಯದವರೆಗೆ ಬೈಕ್ ರ್ಯಾಲಿ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಹಲವು ಪ್ರಯತ್ನಗಳ ನಂತರ ಮೈ ಶುಗರ್ ಕಾರ್ಖಾನೆ ಪ್ರಾರಂಭಿಸಲಾಯಿತು. ಇದು ರೈತರ ಹೋರಾಟಕ್ಕೆ ಸಿಕ್ಕ ಜಯವಾಗಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ಅಫಜಲಪುರದಲ್ಲಿ ರೇಣುಕಾ ಶುಗರ್ಸ್ ಮತ್ತು ಕೆಪಿಆರ್ ಶುಗರ್ಸ್ ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೆಚ್ಚಾಗಿ ಕಡಿತ ಮಾಡಿದ್ದರ ವಿರುದ್ಧ ನಿರಂತರ ಧರಣಿ ನಡೆಸಿ ರೇಣುಕಾ ಶುಗರ್ಸ್ ನವರು ರೈತರ ಖಾತೆಗೆ ಪ್ರತಿಟನ್‌ಗೆ 50 ರೂ.ಗಳನ್ನು ವಾಪಸ್ಸು ಹಾಕಿದ್ದಾರೆ.

ಮುಂದಿನ ದಿನಗಳಲ್ಲಿ ರಾಜ್ಯಮಟ್ಟದಲ್ಲಿ ರಾಜ್ಯ ಸರ್ಕಾರ ಎಸ್‌ಎಪಿ ನಿಗದಿಗಾಗಿ ಹಾಗೂ ಕಬ್ಬು ಬೆಳೆಗಾರರ ಸಮಸ್ಯೆಗಳ ಈಡೇರಿಕೆಗೆ ಹೋರಾಟವನ್ನು ದೃಢವಾಗಿ ಕಟ್ಟಲು ಸಮ್ಮೇಳನದಲ್ಲಿ ತೀರ್ಮಾನ ತೆಗೆದುಕೊಂಡಿದೆ.

13 ನಿರ್ಣಯಗಳ ಅಂಗೀಕಾರ

ಕರ್ನಾಟಕ ಕಬ್ಬು ಕಾಯ್ದೆ 2013 ರದ್ದುಪಡಿಸಿ ರಾಜ್ಯ ಸಲಹಾ ಬೆಲೆ ನೀತಿ ಎಸ್‌ಎಪಿ ಪುನರ್ ಸ್ಥಾಪಿಸಲು ಸರ್ಕಾರವನ್ನು ಅಗ್ರಹಿಸುವ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿದೆ. ಇದೂ ಸೇರಿದಂತೆ ಸಮ್ಮೇಳನದಲ್ಲಿ 13 ನಿರ್ಣಯಗಳನ್ನು ಅಂಗೀಕಾರ ಮಾಡಿ, ಅವುಗಳ ಜಾರಿಗಾಗಿ ಸರಕಾರಕ್ಕೆ ಒತ್ತಾಯಿಸಲಾಯಿತು.

ರೈತ ವಿರೋಧಿ ಸಹಕಾರಿ ಹಾಗೂ ಸಾರ್ವಜನಿಕ ರಂಗದ ಸಕ್ಕರೆ ಕಾರ್ಖಾನೆಗಳ ವಿರೋಧಿ ರಂಗರಾಜನ್ ಸಮಿತಿ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಸಕ್ಕರೆ ರಂಗವನ್ನು ಅನಿಯಮಿತ ರಾಜ್ಯ ಸಲಹಾ ಬೆಲೆ(ಎಸ್‌ಎಪಿ) ರದ್ದತಿಗಾಗಿ ತಂದಿರುವ ಕರ್ನಾಟಕ ಕಬ್ಬು(ಖರೀದಿ ಹಾಗೂ ಪೂರೈಕೆ ನಿಯಂತ್ರಣ) ಕಾಯ್ದೆ 2013 ರದ್ದುಗೊಳಿಸಬೇಕು. ಹಾಗೂ 2013ಕ್ಕಿಂತ ಮುಂಚೆ ಇದ್ದ ಎಸ್‌ಎಪಿ ಅನ್ನು ಪುನರ್ ಸ್ಥಾಪಿಸಬೇಕು.

2013ರಿಂದ ಈ ಕಾಯ್ದೆ ಜಾರಿಗೆ ಬಂದು 12 ವರ್ಷ ಕಳೆದಿದೆ. ಆದರೆ ಈ ಕಾಯ್ದೆ ಕಬ್ಬು ಬೆಳೆಗಾರರಿಗೆ ಯಾವುದೇ ರೀತಿಯಲ್ಲೂ ನೆರವಾಗಿಲ್ಲ. ಹಿಂದಿನ ವರ್ಷದ ಸರಾಸರಿ ಇಳುವರಿ ಆಧಾರದ ಮೇಲೆ ಕಬ್ಬು ಪೂರೈಸಿದ ತಕ್ಷಣ ಮೊದಲ ಹಂತದ ಹಣವನ್ನು ಪಾವತಿಸಬೇಕು. ನಂತರದ 14 ದಿನಗಳ ಒಳಗೆ ಈ ಕಾಯ್ದೆಯ ಸೆಕ್ಷನ್ 4(ಎ) ಪ್ರಕಾರ ಉಳಿದ ಹೆಚ್ಚುವರಿ ಹಣವನ್ನು ಪಾವತಿ ಮಾಡಬೇಕು.

9.5 ಇಳುವರಿ ಆಧಾರದಲ್ಲಿ 5500 ಎಫ್‌ಆರ್‌ಪಿ ನಿಗದಿಪಡಿಸಬೇಕು. ಕೇಂದ್ರದ ರೈತ ವಿರೋಧಿ 2024ರ ಸಕ್ಕರೆ ನಿಯಂತ್ರಣ ಮಂಡಳಿ ಆದೇಶವನ್ನು ವಾಪಸ್ ಪಡೆಯಬೇಕು.

ರಾಜ್ಯ ಸರ್ಕಾರ ಹರಿಯಾಣ ಪಂಜಾಬ್ ಮಾದರಿಯಲ್ಲಿ ಪ್ರತಿ ಟನ್‌ಗೆ 900 ರೂ.ಗಳ ಎಸ್‌ಎಪಿ ನಿಗದಿಪಡಿಸಬೇಕು. ರೆವಿನ್ಯೂ ಶೇರಿಂಗ್ ಫಾರ್ಮುಲವನ್ನು ರದ್ದುಪಡಿಸಬೇಕು.

ತೂಕವನ್ನು ಪರೀಕ್ಷಿಸಲು ಕಬ್ಬು ಬೆಳೆಗಾರರ ಮುಖಂಡರ ಒಳಗೊಂಡ ಸಮಿತಿ ರಚಿಸಬೇಕು. ಮತ್ತು ಮಾಹಿತಿ ನೀಡದೆ ಭೇಟಿ ನೀಡಿ ಪರೀಕ್ಷೆ ಮಾಡುವ ಅವಕಾಶ ಕಲ್ಪಿಸಬೇಕು .

ಕಬ್ಬಿನ ಉಪ ಉತ್ಪನ್ನಗಳ ಲಾಭಾಂಶದಲ್ಲಿ ಶೇ. 50ರಷ್ಟು ಪಾಲು ಕಬ್ಬು ಬೆಳೆಗಾರರಿಗೆ ನೀಡಬೇಕು. ಸಕ್ಕರೆ ಇಳುವರಿ ಘೋಷಣೆಯಲ್ಲಿ ಕಾರ್ಖಾನೆಯವರು ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆ ತೋರಿಸುತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು.

ಸಹಕಾರಿ ಮತ್ತು ಸಾರ್ವಜನಿಕ ಕಾರ್ಖಾನೆಗಳ ಪುನಶ್ಚೇತನಕ್ಕೆ ಕೇಂದ್ರ ಸಕ್ಕರೆ ಅಭಿವೃದ್ಧಿ ಮಂಡಳಿಯಿಂದ ಬಡ್ಡಿ ರಹಿತ ಸಾಲ ನೀಡಬೇಕು. ಹಾಗೂ 30-40 ವರ್ಷಗಳಿಗೆ ಗುತ್ತಿಗೆ ನೀಡುವ ಅಥವಾ ಮಾರಾಟ ಮಾಡುವ ಪ್ರವೃತ್ತಿಯನ್ನು ಕೈಬಿಡಬೇಕು.

ಕಬ್ಬು ಸರಬರಾಜು ಮಾಡಿದ 14 ದಿನದೊಳಗೆ ಹಣಪಾವತಿ ಮಾಡಬೇಕು. ಇಲ್ಲವಾದರೆ ಶೇ. 15ರಷ್ಟು ಬಡ್ಡಿ ಸೇರಿಸಿ ಹಣವನ್ನು ಕೊಡಬೇಕು. ಇಲ್ಲವಾದರೆ ಕಾರ್ಖಾನೆ ಆಡಳಿತ ಮಂಡಳಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಅವರ ಆಸ್ತಿಯನ್ನು ಮುಟ್ಟಗೋಲು ಹಾಕಿಕೊಳ್ಳಬೇಕು. ಈ ಎಲ್ಲಾ ಬೇಡಿಕೆಗಳ ಕುರಿತಂತೆ ಬೆಳಗಾವಿ ಅಧಿವೇಶನದಲ್ಲಿ ಕರ್ನಾಟಕ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟಿಸಲು ನಿರ್ಣಯಿಸಲಾಯಿತು.

ಸಮ್ಮೇಳನದಲ್ಲಿ ಅಖಿಲ ಭಾರತ ಕಬ್ಬು ಕರ್ನಾಟಕ ಪ್ರಾಂತ ರೈತ ಸಂಘದ ಶರಣಬಸಪ್ಪ ಮಮಶೆಟ್ಟಿ, ಅಣ್ಣಾರಾಯ ಈಳಿಗೇರ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎಮ್.ಬಿ.ಸಜ್ಜನ್, ಗೌರಮ್ಮ ಪಾಟೀಲ್, ಸುಧಾಮ್ ಧನ್ನಿ, ಭೀಮಶೆಟ್ಟಿ ಎಂಪಳ್ಳಿ ಇದ್ದರು.

ಅಕ್ಟೋಬರ್ 15–ನವೆಂಬರ್ 15 ಅವಧಿಯಲ್ಲಿ ಒಂದು ವಾರ ಪ್ರಚಾರಾಂದೋಲನ:

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ನವದೆಹಲಿಯಲ್ಲಿ ಸೆಪ್ಟೆಂಬರ್ 29–30, 2024 ರಂದು ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಈ ಕೆಳಗಿನ ವಿಷಯಗಳ ಕುರಿತು ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ:

* ‘ಒಂದು ರಾಷ್ಟ್ರ, ಒಂದು ಚುನಾವಣೆ’ ಪ್ರಸ್ತಾಪದ ವಿರುದ್ಧ.
* ಬೆಲೆ ಏರಿಕೆಯ ವಿರುದ್ಧ ಮತ್ತು ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಬೆಲೆಗಳಲ್ಲಿ ಇಳಿಕೆಗಾಗಿ.
* ನಿರುದ್ಯೋಗ ಮತ್ತು ಮೂಲ ಸೇವೆಗಳ ಖಾಸಗೀಕರಣದ ವಿರುದ್ಧ.
* ಮಹಿಳೆಯರ ವಿರುದ್ಧದ ಅಪರಾಧಗಳು ಮತ್ತು ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ನಿಗ್ರಹಿಸಲು ಕ್ರಮಗಳು.

ಅಕ್ಟೋಬರ್ 15 ರಿಂದ ನವೆಂಬರ್ 15, 2024 ರ ಅವಧಿಯಲ್ಲಿ ಪ್ರತಿ ರಾಜ್ಯದಲ್ಲಿ ಒಂದು ವಾರದ ಪ್ರಚಾರಾಂದೋಲನವನ್ನು ನಡೆಸಬೇಕೆಂದು ಕೇಂದ್ರ ಸಮಿತಿಯು ನಿರ್ಧರಿಸಿದೆ.

ಗಾಜಾದಲ್ಲಿ ಪ್ಯಾಲೆಸ್ತೀನಿಯನ್ ಜನರ ವಿರುದ್ಧ ಇಸ್ರೇಲ್ ನಡೆಸಿರುವ ನರಮೇಧದ ಯುದ್ಧದ ಮೊದಲ ವಾರ್ಷಿಕದಂದು ಅಕ್ಟೋಬರ್ 7 ಅನ್ನು ಪ್ರತಿಭಟನಾ ದಿನವಾಗಿ ಆಚರಿಸಲು ಎಡಪಕ್ಷಗಳ ಕರೆಗೆ ಸೇರಬೇಕೆಂದೂ ಕೇಂದ್ರ ಸಮಿತಿಯು ತನ್ನ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಇತ್ತೀಚಿನ ಅವಧಿಯಲ್ಲಿ ನಿಧನರಾದ ಕಾಮ್ರೇಡ್ ಸೀತಾರಾಮ್ ಯೆಚೂರಿ, ಕಾಮ್ರೇಡ್ ಬುದ್ಧದೇಬ್ ಭಟ್ಟಾಚಾರ್ಯ ಮತ್ತು ಇತರ ನಾಯಕರು ಮತ್ತು ಒಡನಾಡಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಂತಾಪ ಸೂಚಕ ನಿರ್ಣಯಗಳನ್ನು ಅಂಗೀಕರಿಸಿದ ಕೇಂದ್ರಸಮಿತಿ ನಡೆಸಿದ ಚರ್ಚೆಗಳ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ಈ ಕರೆಯನ್ನು ನೀಡಲಾಗಿದೆ. ಹೇಳಿಕೆಯ ಇತರ ಅಂಶಗಳು ಹೀಗಿವೆ:

‘ಒಂದು ರಾಷ್ಟ್ರ, ಒಂದು ಚುನಾವಣೆ’: ಪ್ರಜಾಪ್ರಭುತ್ವ ವಿರೋಧಿ, ಒಕ್ಕೂಟ ತತ್ವ ವಿರೋಧಿ ನಡೆ

ರಾಮ್‌ನಾಥ್ ಕೋವಿಂದ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಕೇಂದ್ರ ಸಚಿವ ಸಂಪುಟ ಅಂಗೀಕರಿಸಿರುವ ‘ಒಂದು ರಾಷ್ಟ್ರ ಒಂದು ಚುನಾವಣೆ’ ಪರಿಕಲ್ಪನೆಯನ್ನು ಕೇಂದ್ರ ಸಮಿತಿಯು ಬಲವಾಗಿ ವಿರೋಧಿಸಿದೆ. ಸಂಸತ್ತು, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಒಕ್ಕೂಟ ವ್ಯವಸ್ಥೆಯ ರಚನೆಯನ್ನು ದುರ್ಬಲಗೊಳಿಸುತ್ತವೆ. ಇದು ರಾಜ್ಯ ಶಾಸಕಾಂಗ ಮತ್ತು ಲೋಕಸಭೆಗೆ ಐದು ವರ್ಷಗಳ ಅವಧಿಯ ಸಾಂವಿಧಾನಿಕ ಯೋಜನೆಯನ್ನು ಉಲ್ಲಂಘಿಸುತ್ತದೆ. ಇದು ರಾಜ್ಯಗಳು ಮತ್ತು ಅವುಗಳ ಚುನಾಯಿತ ಶಾಸಕಾಂಗಗಳ ಹಕ್ಕುಗಳನ್ನು ತುಳಿಯುವ ಕೇಂದ್ರೀಕೃತ ಮತ್ತು ಏಕೀಕೃತ ವ್ಯವಸ್ಥೆಯನ್ನು ತರುತ್ತದೆ.

ಈ ಪ್ರಜಾಪ್ರಭುತ್ವ ವಿರೋಧಿ, ಒಕ್ಕೂಟ ತತ್ವ ವಿರೋಧಿ ನಡೆಯ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಅಣಿನೆರೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳನ್ನು ಇಳಿಸಿ

ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಯನ್ನು ಕೂಡಲೇ ಇಳಿಸಬೇಕೆಂದು ಕೇಂದ್ರ ಸಮಿತಿ ಆಗ್ರಹಿಸಿದೆ. ಈ ವರ್ಷದ ಏಪ್ರಿಲ್‌ನಿಂದ, ಕಚ್ಚಾ ತೈಲದ ಅಂತರರಾಷ್ಟ್ರೀಯ ಬೆಲೆ ಬ್ಯಾರೆಲ್‌ಗೆ 89.40 ಡಾಲರಿನಿಂದ 73.59 ಕ್ಕೆ ಇಳಿದಿದೆ, ಇದು ಸುಮಾರು 18 ಶೇಕಡಾ ಇಳಿಕೆಯಾಗಿದೆ. ಆದರೆ, ಮೋದಿ ಸರ್ಕಾರದ ನಿರ್ದೇಶನದ ಮೇರೆಗೆ ತೈಲ ಉತ್ಪಾದನಾ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್‌ನ ದೇಶೀಯ ಚಿಲ್ಲರೆ ಬೆಲೆಯನ್ನು ಕಡಿಮೆ ಮಾಡಿಲ್ಲ.

ಪೆಟ್ರೋಲ್ ಮತ್ತು ಡೀಸೆಲ್‌ನ ಹೆಚ್ಚಿನ ಬೆಲೆಗಳು ಹಣದುಬ್ಬರದ ಸುರುಳಿಗೆ ಮತ್ತು ತರಕಾರಿಗಳು, ಆಹಾರ ಧಾನ್ಯಗಳು ಮತ್ತು ಇತರ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳಕ್ಕೆ ಕಾರಣವಾಗಿವೆ.

ಕೇಂದ್ರ ಸಮಿತಿಯು ಬೆಲೆ ಏರಿಕೆ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಿದೆ ಮತ್ತು ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳನ್ನು ತಕ್ಷಣ ಕಡಿತಗೊಳಿಸುವಂತೆ ಒತ್ತಾಯಿಸಿದೆ.

ಮಣಿಪುರದಲ್ಲಿ ಪರಿಸ್ಥಿತಿ ಹದಗೆಡುತ್ತಿದೆ

ಮಣಿಪುರದಲ್ಲಿ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ಕೇಂದ್ರ ಸಮಿತಿ ತೀವ್ರ ಕಳವಳ ವ್ಯಕ್ತಪಡಿಸಿದೆ. ಕಣಿವೆ ಮತ್ತು ಬೆಟ್ಟದ ಜಿಲ್ಲೆಗಳ ಗಡಿ ಭಾಗದ ಪ್ರದೇಶಗಳಲ್ಲಿ ದಾಳಿಗಳು ನಡೆದಿವೆ. ಕೇಂದ್ರ ಸರ್ಕಾರ ಮತ್ತು ಬಿಜೆಪಿ ರಾಜ್ಯ ಸರ್ಕಾರವು ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹೀನಾಯವಾಗಿ ವಿಫಲವಾಗಿವೆ, ಇದು ಸಂಘರ್ಷಕ್ಕೆ ಕಾರಣವಾಯಿತು ಮತ್ತು ಜನಾಂಗೀಯ ವಿಭಜನೆಯ ಗಟ್ಟಿಯಾಗುತ್ತಿರುವ ಪರಿಸ್ಥಿತಿ ಉಂಟಾಗಲು ಅವಕಾಶ ಮಾಡಿಕೊಟ್ಟಿದೆ.

ಕಳೆದ ಹದಿನಾರು ತಿಂಗಳಿಂದ ಒಮ್ಮೆಯಾದರೂ ಮಣಿಪುರಕ್ಕೆ ಭೇಟಿ ನೀಡುವುದು ಸೂಕ್ತ ಎಂದು ಪ್ರಧಾನಿ ನರೇಂದ್ರ ಮೋದಿ ಭಾವಿಸದಿರುವುದು ಮಣಿಪುರ ಕುರಿತಂತೆ ಕೇಂದ್ರ ತನ್ನ ಜವಾಬ್ದಾರಿಯನ್ನು ಕೈಬಿಟ್ಟಿದೆ ಎಂಬುದನ್ನು ಇನ್ನಷ್ಟು ಕಟುವಾಗಿಸಿದೆ. ಮುಖ್ಯಮಂತ್ರಿ ಬಿರೇನ್ ಸಿಂಗ್ ರನ್ನು ತೆಗೆದು ಹಾಕುವುದು ರಾಜಕೀಯ ಮಾತುಕತೆ ಮತ್ತು ಇತ್ಯರ್ಥಕ್ಕೆ ಪರಿಸ್ಥಿತಿಗಳನ್ನು ಸೃಷ್ಟಿಸುವ ಮೊದಲ ಹೆಜ್ಜೆಯಾಗಬೇಕು ಎಂದು ಸಿಪಿಐ(ಎಂ) ಪುನರುಚ್ಚರಿಸಿದೆ.

ಎಲ್ಲಾ ಸಮುದಾಯಗಳ ನಾಗರಿಕರ ಹಕ್ಕುಗಳನ್ನು ಖಾತ್ರಿಪಡಿಸುವುದರ ಜೊತೆಗೆ ಶಾಂತಿ ಮತ್ತು ಸಹಜ ಸ್ಥಿತಿಗಾಗಿ ಪರಿಸ್ಥಿತಿಗಳನ್ನು ಸೃಷ್ಟಿಸಲು ಕೇಂದ್ರ ಸರ್ಕಾರವು ನೇರವಾಗಿ ಮಧ್ಯಪ್ರವೇಶಿಸಿ ಪ್ರಮುಖ ಜನಾಂಗೀಯ ಗುಂಪುಗಳೊಂದಿಗೆ ರಾಜಕೀಯ ಮಾತುಕತೆಗಳ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಪಶ್ಚಿಮ ಬಂಗಾಳ: ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಭೀಕರ ಅಪರಾಧ

ಪಶ್ಚಿಮ ಬಂಗಾಳದಲ್ಲಿ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮತ್ತು ಹತ್ಯೆಯ ವಿರುದ್ಧ ನಡೆಯುತ್ತಿರುವ ಜನಾಂದೋಲನಕ್ಕೆ ಕೇಂದ್ರ ಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ನೀಡಿದೆ. ಈ ಆಂದೋಲನ ರಾಜ್ಯದಲ್ಲಿ ಆರೋಗ್ಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳೆದು ಬರುತ್ತಿರುವ ಟಿಎಂಸಿ ಆಳುವ ಪಕ್ಷ–ಅಪರಾಧಿಗಳ ನಂಟಿನ ವಿರುದ್ಧವೂ ಆಗಿದೆ.

ಸಂಸತ್ತಿನಲ್ಲಿ ವೈದ್ಯಕೀಯ ಸಿಬ್ಬಂದಿಯ ಭದ್ರತೆ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಶಾಸನ ತರಬೇಕೆಂಬ ದೇಶವ್ಯಾಪಿ ವೈದ್ಯಕೀಯ ಸಮುದಾಯದ ಬೇಡಿಕೆಯನ್ನು ಕೇಂದ್ರ ಸಮಿತಿ ಬೆಂಬಲಿಸಿದೆ.

ಇತರ ಹಲವು ರಾಜ್ಯಗಳಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳ ಬಗ್ಗೆ ಕೇಂದ್ರ ಸಮಿತಿಯು ತೀವ್ರ ಕಳವಳ ವ್ಯಕ್ತಪಡಿಸಿದೆ.

ನಿರ್ಮಲಾ ಸೀತಾರಾಮನ್ ವಿರುದ್ಧ ಪ್ರಕರಣ

ಚುನಾವಣಾ ಬಾಂಡ್ ಯೋಜನೆ ಮೂಲಕ ಹಣ ಸುಲಿಗೆ ಮಾಡಿದ ದೂರುಗಳ ಮೇಲೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲು ಬೆಂಗಳೂರಿನ ವಿಶೇಷ ನ್ಯಾಯಾಲಯ ಆದೇಶಿಸಿದೆ ಎಂಬುದನ್ನು ಗಮನಿಸಿರುವ ಕೇಂದ್ರ ಸಮಿತಿ ಪ್ರಕರಣದ ಬಗ್ಗೆ ಸರಿಯಾಗಿ ತನಿಖೆ ನಡೆಸಿ ಹಣಕಾಸು ಸಚಿವರನ್ನು ಈ ಸಂಬಂಧ ವಿಚಾರಣೆ ನಡೆಸಬೇಕು ಎಂದು ಹೇಳಿದೆ.

ಮುಷ್ಕರ ಹೋರಾಟಗಳಿಗೆ ಬೆಂಬಲ

ತಮಿಳುನಾಡಿನ ಕಾಂಚೀಪುರಂನಲ್ಲಿರುವ ಸ್ಯಾಮ್ಸಂಗ್ ಸ್ಥಾವರದ ಮುಷ್ಕರ ನಿರತ ಕಾರ್ಮಿಕರಿಗೆ ಕೇಂದ್ರ ಸಮಿತಿಯು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಕಾರ್ಮಿಕರು ತಮ್ಮ ಸಂಘ ರಚಿಸಿಕೊಳ್ಳುವ ಹಕ್ಕನ್ನು ಚಲಾಯಿಸಲು ಮುಷ್ಕರ ನಡೆಸುತ್ತಿದ್ದಾರೆ. ಕಾರ್ಮಿಕರ ಆಯ್ಕೆಯ ಸಂಘ ಕಾರ್ಯನಿರ್ವಹಿಸಲು ಬಿಡುವುದಿಲ್ಲ ಎಂಬ ಬಹುರಾಷ್ಟ್ರೀಯ ಕಂಪನಿಯ ನಿಲುವನ್ನು ಒಪ್ಪಲು ಸಾಧ್ಯವಿಲ್ಲ. ಕಾರ್ಮಿಕ ಇಲಾಖೆ ಇದುವರೆಗೂ ಸಂಘದ ನೋಂದಣಿಗೆ ಅವಕಾಶ ನೀಡದಿರುವ ಬಗ್ಗೆ ಕೇಂದ್ರ ಸಮಿತಿ ವಿಷಾದ ವ್ಯಕ್ತಪಡಿಸಿದೆ.

ತಮಿಳುನಾಡು ರಾಜ್ಯ ಸರ್ಕಾರವು ಮಧ್ಯಪ್ರವೇಶಿಸಿ ಒಕ್ಕೂಟವನ್ನು ನೋಂದಾಯಿಸುವುದನ್ನು ಖಚಿತಪಡಿಸಬೇಕು ಎಂದು ಕೇಂದ್ರ ಸಮಿತಿಯು ಮನವಿ ಮಾಡಿದೆ.

ಸೆ.28ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿರುವ ಫೆರೋ ಸ್ಕ್ರ್ಯಾಪ್ ನಿಗಮ್ ಲಿಮಿಟೆಡ್ (ಎಫ್‌ಎಸ್‌ಎನ್‌ಎಲ್) ಕಾರ್ಮಿಕರಿಗೆ ಕೇಂದ್ರ ಸಮಿತಿ ಸೌಹಾರ್ದ ವ್ಯಕ್ತಡಿಸಿದೆ. ಲಾಭದಲ್ಲಿರುವ ಮಿನಿರತ್ನ ಎಫ್‌ಎಸ್‌ಎನ್‌ಎಲ್ ಅನ್ನು ಖಾಸಗೀಕರಣಗೊಳಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿ ನೌಕರರು ಮುಷ್ಕರಕ್ಕೆ ಇಳಿದಿದ್ದಾರೆ. ಈ ಕಂಪನಿಯನ್ನು ಜಪಾನಿನ ಒಂದು ಬಹುರಾಷ್ಟ್ರೀಯ ಕಂಪನಿಗೆ ಮಾರಾಟ ಮಾಡುವ ಯೋಜನೆ ಇದೆ. ಎಫ್‌ಎಸ್‌ಎನ್‌ಎಲ್ ದೇಶದ ಪ್ರಮುಖ ಉಕ್ಕು ಉದ್ಯಮದ ಭಾಗವಾಗಿರುವುದರಿಂದ ಇದು ಒಂದು ಸ್ವಯಂ–ಸೋಲಿನ ನಡೆಯಾಗಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಇಸ್ರೇಲ್‌ಗೆ ಲಜ್ಜೆಗೆಟ್ಟ ಬೆಂಬಲ

ಮೋದಿ ಸರ್ಕಾರವು ಪ್ಯಾಲೆಸ್ತೀನ್ ಧ್ಯೇಯಸಾಧನೆಗೆ ಬೆಂಬಲ ನೀಡುವ ಭಾರತದ ದೀರ್ಘಕಾಲದ ನೀತಿಯನ್ನು ಕೈಬಿಟ್ಟಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 12 ತಿಂಗಳೊಳಗೆ ಇಸ್ರೇಲ್ ಆಕ್ರಮಿತ ಪ್ರದೇಶಗಳಿಂದ ಹಿಂತೆಗೆದುಕೊಳ್ಳುವಂತೆ ನಿರ್ಣಯವನ್ನು ಮಂಡಿಸಿದಾಗ ಭಾರತವು ನಿರ್ಣಯಕ್ಕೆ ಮತ ಹಾಕಲಿಲ್ಲ, ಗೈರುಹಾಜರಾಯಿತು.

ಭಾರತದಲ್ಲಿ ತಯಾರಾಗುವ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಇಸ್ರೇಲ್‌ಗೆ ರಫ್ತು ಮಾಡಲು ಸರ್ಕಾರ ಅನುಮತಿ ನೀಡುತ್ತಿದೆ. ಈ ಶಸ್ತ್ರಾಸ್ತ್ರಗಳನ್ನು ಇಸ್ರೇಲಿ ಸಶಸ್ತ್ರ ಪಡೆಗಳು ಗಾಜಾದಲ್ಲಿ ಬಳಸುತ್ತಿವೆ. ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳ ರಫ್ತಿನ ಮೇಲೆ ತಕ್ಷಣ ನಿಷೇಧ ವಿಧಿಸಬೇಕು ಎಂದು ಕೇಂದ್ರ ಸಮಿತಿಯು ಆಗ್ರಹಿಸಿದೆ.

ಪ್ರಕಾಶ ಕಾರಟ್ ಸಂಯೋಜಕರಾಗಿರುತ್ತಾರೆ

ಪ್ರಸಕ್ತ ಪ್ರಧಾನ ಕಾರ್ಯದರ್ಶಿ ಕಾಂ.ಸೀತಾರಾಮ್ ಯೆಚೂರಿಯವರ ದುಃಖಕರ ಮತ್ತು ಹಠಾತ್ ನಿಧನದಿಂದಾಗಿ, ಒಂದು ಮಧ್ಯಂತರ ಕ್ರಮವಾಗಿ, ಏಪ್ರಿಲ್ 2025ರಲ್ಲಿ ಮಧುರೈನಲ್ಲಿ ನಡೆಯುವ ಪಕ್ಷದ 24ನೇ ಮಹಾಧಿವೇಶನದ ವರೆಗೆ ಕಾಂ.ಪ್ರಕಾಶ ಕಾರಟ್ ಪೊಲಿಟ್‌ಬ್ಯುರೊ ಮತ್ತು ಕೇಂದ್ರಸಮಿತಿಯ ನಡುವೆ ಸಂಯೋಜಕರಾಗಿರುತ್ತಾರೆ ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಜೈಲುಗಳಲ್ಲಿ ಜಾತಿ ತಾರತಮ್ಯದ ಆಚರಣೆಗಳ ವಿರುದ್ಧ ಸುಪ್ರೀಂ ಕೋರ್ಟಿನ ಮಹತ್ವದ ತೀರ್ಪು: ಸಿಪಿಐ(ಎಂ) ಸ್ವಾಗತ

ಕಾರಾಗೃಹ/ಜೈಲುಗಳಲ್ಲಿನ ಜಾತಿ ತಾರತಮ್ಯದ ಆಚರಣೆಗಳನ್ನು ಕುರಿತಂತೆ ಮುಖ್ಯ ನ್ಯಾಯಾಧೀಶರ ನೇತೃತ್ವದ ಮೂವರು ನ್ಯಾಯಾಧೀಶರ ಪೀಠವು ನೀಡಿದ ತೀರ್ಪು ಹೊಲಸು ಜಾತಿ ವ್ಯವಸ್ಥೆಯ ವಿರುದ್ಧದ ಅತ್ಯಂತ ಅಗತ್ಯವಾದ ಹೋರಾಟದಲ್ಲಿ ನ್ಯಾಯಾಂಗದ ಪ್ರಮುಖ ಮಧ್ಯಪ್ರವೇಶವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಅದು ಇಂತಹ ಆಚರಣೆಗಳನ್ನು ಕೊನೆಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.

‘ಘನತೆಯಿಂದ ಬದುಕುವ ಹಕ್ಕು’ ಸೆರೆಯಲ್ಲಿರುವವರಿಗೂ ವಿಸ್ತರಿಸುತ್ತದೆ ಮತ್ತು ವಿವಿಧ ಜೈಲು ಕೈಪಿಡಿಗಳು ಮತ್ತು ಕಾನೂನುಗಳಲ್ಲಿ ಜಾತಿ ಪಕ್ಷಪಾತ ಮತ್ತು ಪ್ರತ್ಯೇಕತೆಗೆ ಅವಕಾಶ ನೀಡುವ ನಿಬಂಧನೆಗಳು ಅಸಂವಿಧಾನಿಕವೆಂದು ನ್ಯಾಯಾಲಯವು ಘೋಷಿಸಿದೆ.

ಜಾತಿ ಪಕ್ಷಪಾತ ಮತ್ತು ಅಸ್ಪೃಶ್ಯತೆಯ ಕಲ್ಪನೆಗಳ ಆಧಾರದ ಮೇಲೆ ಕೈದಿಗಳನ್ನು ಕೆಲಸದ ನಿಯೋಜನೆ, ವಸತಿ ವ್ಯವಸ್ಥೆ ಮತ್ತು ಆಹಾರ ತಯಾರಿಕೆಗೆ ಒಳಪಡಿಸುವ ನಿಬಂಧನೆಗಳಿರುವುದನ್ನು ಎತ್ತಿ ತೋರಿಸಿ, ಅವೆಲ್ಲವನ್ನೂ ಜೈಲು ಕೈಪಿಡಿಗಳಿಂದ ತೆಗೆದುಹಾಕುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಜೈಲು ಜೀವನದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ತೊಡೆದುಹಾಕಲು ಎಲ್ಲಾ ಸರ್ಕಾರಗಳು ಮೂರು ತಿಂಗಳ ನಿಗದಿತ ಸಮಯದೊಳಗೆ ನ್ಯಾಯಾಲಯವು ಸೂಚಿಸಿದ ಕ್ರಮಗಳನ್ನು ಪ್ರಾರಂಭಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಪಶ್ಚಿಮ ಏಷ್ಯಾವನ್ನು ಬೆಂಕಿಯ ಕುಲುಮೆಗೆ ತಳ್ಳಿದ ಇಸ್ರೇಲ್



ಪ್ರಕಾಶ್ ಕಾರತ್

ಗಾಜಾ ಮೇಲೆ ಇಸ್ರೇಲ್ ಆಕ್ರಮಣ ಆರಂಭಿಸಿದ್ದಕ್ಕೆ ಇದೇ ಅಕ್ಟೋಬರ್ 7ಕ್ಕೆ ಒಂದು ವರ್ಷ ತುಂಬುತ್ತದೆ. ಹಮಾಸ್ ನಡೆಸಿದ ದಾಳಿಯನ್ನು ಇಸ್ರೇಲ್ ಒಂದು ನೆಪವಾಗಿ ಬಳಸಿ ಪ್ಯಾಲೆಸ್ಟೀನ್‌ನ ಗಾಜಾ ಮೇಲೆ ದುರಾಕ್ರಮಣ ನಡೆಸಿದೆ. ಹಮಾಸ್ ಅನ್ನು ನಿರ್ಮೂಲನೆ ಮಾಡುವುದು ಗಾಜಾ ಮೇಲಿನ ದಾಳಿಯ ತನ್ನ ಗುರಿಯಾಗಿದೆ ಎಂದು ಇಸ್ರೇಲ್ ಹೇಳಿಕೊಂಡಿದೆ. ತನ್ನ ಗುರಿ ಸಾಧಿಸುವಲ್ಲಿ ವಿಫಲವಾಗಿರುವ ಇಸ್ರೇಲ್ ಇಂದು ಲೆಬನಾನ್, ಇರಾನ್, ಸಿರಿಯಾ, ಯೆಮೆನ್ ಮತ್ತು ಇರಾಕ್ ಮೇಲೆ ಆಕ್ರಮಣ ನಡೆಸುವ ಮೂಲಕ ಇಡೀ ಪಶ್ಚಿಮ ಏಷ್ಯಾವನ್ನು ಬೆಂಕಿಯ ಕುಲುಮೆಗೆ ತಳ್ಳಿದೆ. ಇಸ್ರೇಲ್‌ನ ಪ್ರತಿಯೊಂದು ಆಕ್ರಮಣಕ್ಕೆ ಅಮೆರಿಕ ಬೆನ್ನೆಲುಬಾಗಿ ನಿಂತಿದೆ.

ಕಳೆದ 15 ದಿನಗಳಲ್ಲಿ ಲೆಬನಾನ್ ಮೇಲಿನ ಇಸ್ರೇಲಿ ಮಿಲಿಟರಿ ಆಕ್ರಮಣವು ಯುದ್ಧದ ಲಕ್ಷಣವನ್ನೇ ಸಂಪೂರ್ಣವಾಗಿ ಬದಲಾಯಿಸಿದೆ. ಯೋಜನಾಬದ್ಧ ಆಕ್ರಮಣದ ಭಾಗವಾಗಿ ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ತೀವ್ರ ರಾಕೆಟ್ ದಾಳಿ ಆರಂಭಿಸಿ ನಂತರ ಪೇಜರ್ ಮತ್ತಿತರ ಸಂಪರ್ಕ ಸಾಧನಗಳನ್ನು ಬಳಸಿ ಹಿಜ್ಬುಲ್ಲಾ ನಾಯಕರ ಹತ್ಯೆಗಳನ್ನು ನಡೆಸಿತು. ತನ್ನ ಸಂಸ್ಥೆಯ ಪ್ರಧಾನ ಕಾರ್ಯಾಲಯದಲ್ಲಿದ್ದ ಹಿಜ್ಬುಲ್ಲಾ ಮಹಾ ಕಾರ್ಯದರ್ಶಿ ಹಸನ್ ನಸ್ರಲ್ಲಾರನ್ನು ಬಂಕರ್ ಬಸ್ಟರ್ ಬಾಂಬ್ ಸ್ಫೋಟಿಸಿ ಹತ್ಯೆ ಮಾಡುವ ಮೂಲಕ ಯುದ್ಧ ಹೊಸ ಪರಾಕಾಷ್ಠೆ ತಲುಪಿತು. ದಕ್ಷಿಣ ಲೆಬನಾನ್‌ನಲ್ಲಿ 'ಸೀಮಿತ, ಸ್ಥಳೀಯ ಕೇಂದ್ರಿತ ಹಾಗೂ ಟಾರ್ಗೆಟೆಡ್' ಭೂ ದಾಳಿಯನ್ನು ಆರಂಭಿಸುವುದಾಗಿ ಇಸ್ರೇಲ್ ಅಕ್ಟೋಬರ್ 1ರಂದು ಪ್ರಕಟಿಸಿದೆ. ವಾಸ್ತವವಾಗಿ, ಪೂರ್ಣ ಪ್ರಮಾಣದ ಭೂ ಆಕ್ರಮಣ ನಡೆಸಲು ದೊಡ್ಡ ಪ್ರಮಾಣದಲ್ಲಿ ಪಡೆಗಳನ್ನು ಅದು ಲೆಬನಾನ್ ಗಡಿಯುದ್ದಕ್ಕೂ ಕಳಿಸಿದೆ.

ಇಸ್ರೇಲ್ ಪಶ್ಚಿಮ ಏಷ್ಯಾದ ಒಂದು ಕುತ್ಸಿತ ಪ್ರಭುತ್ವವಾಗಿದೆ. ಅದು ಎಲ್ಲ ಅಂತಾರಾಷ್ಟ್ರೀಯ ಕಾನೂನುಗಳು ಮತ್ತು ಒಡಂಬಡಿಕೆಗಳನ್ನು ಉಲ್ಲಂಘಿಸುತ್ತಿದೆ ಹಾಗೂ ವಿವಿಧ ರಾಷ್ಟ್ರಗಳಲ್ಲಿ ಟಾರ್ಗೆಟೆಡ್ ಹತ್ಯೆ ಮತ್ತು ದಾಳಿಗಳನ್ನು ನಡೆಸುತ್ತಿದೆ. ಕಳೆದ ಒಂದು ವರ್ಷದಲ್ಲಿ ಅದು ಇರಾನಿ ಪ್ರದೇಶದೊಳಗೆ ದಾಳಿಗಳನ್ನು ನಡೆಸಿ ಇರಾನ್‌ನ ಉನ್ನತ ಕಮಾಂಡರ್‌ಗಳನ್ನು ಟಾರ್ಗೆಟ್ ಹಾಗೂ ಹತ್ಯೆ ಮಾಡಿದೆ. ನೂತನವಾಗಿ ಆಯ್ಕೆಯಾದ ಇರಾನ್ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿದ್ದ ಹಮಾಸ್‌ನ ಪ್ರಧಾನ ಸಂಧಾನಕಾರ ಇಸ್ಮಾಯಿಲ್ ಹನಿಯೆಯನ್ನು ಹತ್ಯೆ ಮಾಡಲಾಯಿತು. ಅದರ ನಂತರ ಕೆಲ ದಿನಗಳ ಹಿಂದೆ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಟಾರ್ಗೆಟೆಡ್ ದಾಳಿಯಲ್ಲಿ ನಸ್ರಲ್ಲಾರನ್ನು ಕೊಲ್ಲಲಾಯಿತು.

ಹಿಜ್ಬುಲ್ಲಾ ಸಂಘಟನೆ ಸಂಪೂರ್ಣವಾಗಿ ನಾಶವಾಗಿದೆ ಎಂದು ನಸ್ರಲ್ಲಾರ ಹತ್ಯೆಯ ನಂತರ ಇಸ್ರೇಲ್ ಘೋಷಿಸಿದೆ. ಇಂಥ ಘೋಷಣೆಗಳು ವಾಸ್ತವತೆಯಿಂದ ದೂರವಾಗಿವೆ. 1992ರಲ್ಲಿ, ಹಿಜ್ಬುಲ್ಲಾದ ಸಹ-ಸಂಸ್ಥಾಪಕ ಮತ್ತು ದ್ವಿತೀಯ ಮಹಾ ಕಾರ್ಯದರ್ಶಿ ಅಬ್ಬಾಸ್ ಅಲ್-ಮೌಸವಿಯನ್ನು ಇಸ್ರೇಲ್ ಹತ್ಯೆ ಮಾಡಿತ್ತು. ಅವರ ಸ್ಥಾನಕ್ಕೆ ನಸ್ರಲ್ಲಾ ಆಯ್ಕೆಯಾಗಿದ್ದರು. ಇಸ್ರೇಲ್‌ನ ಆಕ್ರಮಣವನ್ನು ನಸ್ರಲ್ಲಾ ಎರಡು ಬಾರಿ ಪ್ರತಿರೋಧಿಸಿದ್ದರು. 2006ರಲ್ಲಿ ಹಿಜ್ಬುಲ್ಲಾ ಕೈಯಲ್ಲಿ ಸೋಲು ಅನುಭವಿಸಿದ ಹಿನ್ನೆಲೆಯಲ್ಲಿ ತನ್ನ ಉದ್ದೇಶದಲ್ಲಿ ವಿಫಲವಾಗಿರುವುದನ್ನು ಇಸ್ರೇಲ್ ಒಪ್ಪಿಕೊಂಡಿತ್ತು. ಹಿಂದಿನ ಸೋಲುಗಳಿಂದ ಇಸ್ರೇಲ್ ಯಾವುದೇ ಪಾಠ ಕಲಿತಂತೆ ಕಾಣುತ್ತಿಲ್ಲ.

ಪಶ್ಚಿಮ ಏಷ್ಯಾದಲ್ಲಿ ಅಮೆರಿಕ ಸಾಮ್ರಾಜ್ಯಶಾಹಿಯ ಮುಂದುವರಿದ ಹೊರ ಠಾಣೆಯಂತಿರುವ (ಔಟ್‌ಪೋಸ್ಟ್) ಇಸ್ರೇಲ್, ಅಮೆರಿಕದ ಭಾಷೆಯನ್ನು ಮಾತನಾಡುತ್ತಿದೆ. 'ತಗ್ಗಿಸಲು ತೀವ್ರಗೊಳಿಸು' (ಎಸ್ಕಲೇಟ್ ಟು ಡಿಎಸ್ಕಲೇಟ್) ಎನ್ನುವುದು ತನ್ನ ಮಿಲಿಟರಿ ಕಾರ್ಯತಂತ್ರ ಎಂದು ಇಸ್ರೇಲ್ ಘೋಷಿಸಿದೆ. ಇದೊಂದು ತಪ್ಪಾದ ತಿಳಿವಳಿಕೆಯಾಗಿದ್ದು ವಿಫಲ ಕಾರ್ಯತಂತ್ರವಾಗಿದೆ. ತೀವ್ರವಾದ ಮಿಲಿಟರಿ ಆಕ್ರಮಣದಿಂದ ವೈರಿ ಶರಣಾಗುತ್ತಾನೆ ಎನ್ನುವುದು ಇಂಥ ಕಾರ್ಯತಂತ್ರದ (ಸ್ಟ್ರಾಟಜಿ) ಭಾವನೆಯಾಗಿದೆ. ಈ ಸ್ಟ್ರಾಟಜಿಯು ಗೆಲವನ್ನು ಖಾತರಿಪಡಿಸುವುದಿಲ್ಲ ಎನ್ನುವುದಕ್ಕೆ ಇತಿಹಾಸದಲ್ಲಿ ವಿಪುಲ ಉದಾಹರಣೆಗಳು ಸಿಗುತ್ತವೆ. ಆಫ್ಘಾನಿಸ್ತಾನ, ಇರಾಕ್, ಸಿರಿಯಾ ಮತ್ತು ಲಿಬ್ಯಾದಲ್ಲಿ ಅಮೆರಿಕ ಭಾರಿ ವೈಫಲ್ಯ ಅನುಭವಿಸಿದ್ದನ್ನು ನಾವು ಕಂಡಿದ್ದೇವೆ. ಇಸ್ರೇಲ್‌ಗೂ ಅದೇ ಪುನರಾವರ್ತನೆ ಆಗಲಿದೆ.

ತನ್ನ ದಾಳಿಗಳಿಂದಾಗಿ ಹಿಜ್ಬುಲ್ಲಾ ಮತ್ತು ಹಮಾಸ್ ಸಂಘಟನೆಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ಇಸ್ರೇಲಿ ನಾಯಕರು ಭ್ರಮಿಸಿದ್ದಾರೆ. ಅಲ್ಲದೆ 'ಇರಾನ್‌ನ ಬಂಡವಾಳ ಬಯಲಾಗಿದ್ದು ಅದು ದುರ್ಬಲವಾಗಿದೆ' ಎನ್ನುವುದೂ ಇಸ್ರೇಲ್‌ನ ಭಾವನೆಯಾಗಿದೆ. ಇರಾನ್‌ನ ಪರಮಾಣು ಸ್ಥಾವರಗಳನ್ನೂ ಗುರಿ ಮಾಡಿದಂತೆ ಆ ದೇಶದ ಮೇಲೆ ಮಿಲಿಟರಿ ದಾಳಿಗಳನ್ನು ನಡೆಸುವಂತೆ ಇಸ್ರೇಲ್ ನಾಯಕರು ಕರೆ ಕೊಡುತ್ತಿದ್ದಾರೆ. 'ಇರಾನ್‌ನಲ್ಲಿ ಸರಕಾರವನ್ನೇ ಬದಲಾಯಿಸುವ ರೀತಿಯ ಒತ್ತಡ' ಹೇರುವ ಹಾಗೂ 'ಪಶ್ಚಿಮ ಏಷ್ಯಾದಲ್ಲಿ ರಾಜಕೀಯ ನಕಾಶೆಯನ್ನೇ ಬದಲಾಯಿಸುವ' ಮಾತನ್ನು ಪ್ರಧಾನಿ ಬೆಂಜಮಿನ್ ನೆತನ್ಯಾಹು ಆಡುತ್ತಿದ್ದಾರೆ. ಈ ಕುತ್ಸಿತ ಚಿಂತನೆಗಳಲ್ಲಿ ತೇಲಾಡುತ್ತಿರುವ ಇಸ್ರೇಲ್, ತನ್ನ ಪ್ರಾಬಲ್ಯ ಪ್ರದರ್ಶನಕ್ಕೆ ಲಂಗುಲಗಾಮಿಲ್ಲದೆ ವರ್ತಿಸುತ್ತಿದೆ. ಅದು ಅಮೆರಿಕದ ಹಿತಾಸಕ್ತಿಗೂ ಅನುಕೂಲಕರವಾಗಿದೆ.

ಇಸ್ರೇಲನ್ನು ತಡೆದು ತನ್ನ ಹಿತ ರಕ್ಷಣೆಗಾಗಿ ಇರಾನ್ ತನ್ನ ರಕ್ಷಣಾ ಹಕ್ಕನ್ನು ಪ್ರತಿಪಾದಿಸಿ ಈಗ ಇಸ್ರೇಲ್‌ನೊಳಗೆ 180ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಉಡಾಯಿಸಿದೆ. ತನ್ನ ಪ್ರದೇಶದ ಮೇಲೆ ಇಸ್ರೇಲ್ ದಾಳಿ ನಡೆಸಿದ್ದಕ್ಕೆ ಇರಾನ್ ಪ್ರತೀಕಾರ ತೀರಿಸಿಕೊಂಡ ಇಂಥ ಎರಡನೇ ಉದಾಹರಣೆ ಇದಾಗಿದೆ.

ಈ ವಲಯದಲ್ಲಿ ತಲೆ ತಿರುಕನಂತೆ ವರ್ತಿಸುವ ಇಸ್ರೇಲ್ ಆತ್ಮವಿಶ್ವಾಸಕ್ಕೆ ಅಮೆರಿಕ ಮತ್ತು ಬ್ರಿಟನ್ ಮುಂತಾದ ಅದರ ಮಿತ್ರ ದೇಶಗಳು ನೀಡುತ್ತಿರುವ ಬೇಷರತ್ ಬೆಂಬಲವೇ ಕಾರಣವಾಗಿದೆ. ಪ್ರಸ್ತುತ ಸಂಘರ್ಷ ತೀವ್ರಗೊಂಡ ಪ್ರತಿಯೊಂದು ಹಂತದಲ್ಲೂ ಅಮೆರಿಕವು ಇಸ್ರೇಲ್‌ಗೆ ಬೆಂಬಲ ಕೊಟ್ಟಿದ್ದನ್ನು ನಾವು ನೋಡುತ್ತೇವೆ. ದ್ವಿತೀಯ ವಿಶ್ವ ಯುದ್ಧದ ನಂತರ ಅಮೆರಿಕವು ಬೇರೆ ಯಾವುದೇ ದೇಶಕ್ಕಿಂತ ಹೆಚ್ಚಿನ ಮಿಲಿಟರಿ ನೆರವನ್ನು ಇಸ್ರೇಲ್‌ಗೆ ಒದಗಿಸಿದೆ. ಅದರ ಮೊತ್ತ 124 ಶತಕೋಟಿ ಡಾಲರ್‌ಗಿಂತ ಅಧಿಕವಾಗಿದೆ.


2016ರ ನಂತರ, ಇಸ್ರೇಲ್ ಪ್ರತಿ ವರ್ಷ ಅಮೆರಿಕದಿಂದ 10 ವರ್ಷ ಯೋಜನೆಯೊಂದರಡಿ 3.8 ಶತಕೋಟಿ ಡಾಲರ್ ಸಹಾಯವನ್ನು ಪಡೆಯುತ್ತಿದೆ. ಗಾಜಾ ವಿರುದ್ಧ ಇಸ್ರೇಲ್ ದಾಳಿ ಆರಂಭಿಸಿದ ದಿನ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಇಸ್ರೇಲ್‌ಗೆ ಹೆಚ್ಚು ಮಿಲಿಟರಿ ನೆರವನ್ನು ಘೋಷಿಸಿದರು. ಅದರಲ್ಲಿ ಮದ್ದುಗುಂಡು ಮತ್ತು ಐರೊನ್ ಡೋಮ್‌ಗೆ ಮರುಪೂರಣಕ್ಕೆ ಇಂಟರ್‌ಸೆಪ್ಟರ್‌ಗಳು ಕೂಡ ಸೇರಿವೆ. ಇಸ್ರೇಲಿ ರಕ್ಷಣಾ ಪಡೆಗಳು ಮಾನವ ಹಕ್ಕುಗಳ ಉಲ್ಲಂಘನೆ ಮಾಡುತ್ತಿದೆಯೆಂಬ ವ್ಯಾಪಕ ವರದಿಗಳನ್ನು ಅಮೆರಿಕ ನಿರ್ಲಕ್ಷಿಸಿದ್ದು ಅಮೆರಿಕ ನಿರ್ಮಿತ ಶಸ್ತ್ರಾಸ್ತ್ರಗಳು ಹಾಗೂ ಮಿಲಿಟರಿ ಸಲಕರಣೆಗಳ ಖರೀದಿಗೆ ಇಸ್ರೇಲ್‌ಗೆ ಆಗಸ್ಟ್‌ನಲ್ಲಿ ಹೆಚ್ಚುವರಿ 3.5 ಶತಕೋಟಿ ಡಾಲರ್ ನೆರವನ್ನು ಕಳಿಸಿತು. ಕಳೆದ ಒಂದು ವರ್ಷದಲ್ಲೇ ಇಸ್ರೇಲ್‌ನ ಮಿಲಿಟರಿ ಶಸ್ತ್ರಾಸ್ತ್ರಗಳ ಮರುಪೂರಣಕ್ಕೆ 14 ಶತಕೋಟಿ ಡಾಲರ್‌ಗಳನ್ನು ಅಮೆರಿಕ ಒದಗಿಸಿದೆ.

ಇವೆಲ್ಲದರ ಮೇಲೆ, ಇಸ್ರೇಲ್‌ಗೆ ಬೆಂಬಲವಾಗಿ ಅಮೆರಿಕ ತನ್ನ ವಿಮಾನ ಮತ್ತು ಬ್ಯಾಲಿಸ್ಟಿಕ್ ಮಿಸೈಲ್ ರಕ್ಷಣಾ ನಾಶಕಗಳನ್ನು ಕಳಿಸಿಕೊಟ್ಟಿದೆ. ಇರಾನ್‌ನ ಕ್ಷಿಪಣಿ ದಾಳಿಗಳನ್ನು ಹಿಮ್ಮೆಟ್ಟಿಸಲು 'ನಿಖರ ಯೋಜನೆ' ರೂಪಿಸುವಲ್ಲಿ ತನ್ನ ಮಿಲಿಟರಿಯ ಪಾಲು ಇದೆ ಎಂದು ಅಮೆರಿಕ ಪ್ರಕಟಿಸಿದೆ. ಬ್ರಿಟನ್ ಕೂಡ ಇದೇ ರೀತಿಯ ಹೇಳಿಕೆಗಳನ್ನು ನೀಡಿದೆ. ಇಸ್ರೇಲ್‌ಗೆ ಅಮೆರಿಕ ಭೌತಿಕ ಮತ್ತು ಆರ್ಥಿಕ ಬೆಂಬಲ ಒದಗಿಸುತ್ತಿರುವುದರಿಂದ, ಕದನ ವಿರಾಮಕ್ಕೆ ಪ್ರಯತ್ನಿಸುವ ಹಾಗೂ ಯುದ್ಧ ತೀವ್ರಗೊಳ್ಳುವುದನ್ನು ತಡೆಯುವ ಕುರಿತಾದ ಅದರ ಮಾತುಗಳು ಕೇವಲ ಬೊಗಳೆ ಹಾಗೂ ಮೂರ್ಖತನವಲ್ಲದೆ ಬೇರೇನೂ ಅಲ್ಲ.

ಅಮೆರಿಕ ಮತ್ತು ಇಸ್ರೇಲ್ ಈ ಎರಡೂ ದೇಶಗಳ ವ್ಯೂಹಾತ್ಮಕ ಪಾಲುದಾರನಾಗಿರುವ ಭಾರತ ಸರಕಾರವು, ಪ್ಯಾಲೆಸ್ಟೀನ್‌ಗೆ ಸೌಹಾರ್ದತೆ ಸೂಚಿಸುವ ನೀತಿಯಿಂದ ದೂರ ಸರಿದಿದೆ. ಆಕ್ರಮಣ ಮಾಡಿರುವ ಎಲ್ಲಾ ಪ್ರದೇಶಗಳಿಂದ ವಾಪಸ್ ಹೋಗುವಂತೆ ಇಸ್ರೇಲನ್ನು ಒತ್ತಾಯಿಸುವ ವಿಶ್ವ ಸಂಸ್ಥೆ ಗೊತ್ತುವಳಿ ಮೇಲಿನ ಮತದಾನದಿಂದ ಭಾರತ ಗೈರಾಗಿತ್ತು. ಇಸ್ರೇಲ್ ನಡೆಸುತ್ತಿರುವ ಟಾರ್ಗೆಟೆಡ್ ಹತ್ಯೆಗಳನ್ನು ಖಂಡಿಸುವ ಬದಲು, ಭಾರತ ಸರಕಾರ ಮೌನವಾಗಿ ಉಳಿದಿತ್ತು. ನೆತನ್ಯಾಹು ಜತೆ ದೂರವಾಣಿ ಸಂಭಾಷಣೆ ನಡೆಸಿದ ಭಾರತದ ಪ್ರಧಾನಿಗೆ ಭಯೋತ್ಪಾದನೆಯನ್ನು ಖಂಡಿಸಲು ಸಮಯ ಸಿಕ್ಕಿತ್ತು. ಆದರೆ, ಗಾಜಾ ಮತ್ತು ಲೆಬನಾನ್ ಮೇಲಿನ ಇಸ್ರೇಲ್‌ನ ಜನಾಂಗಹತ್ಯಾ ಆಕ್ರಮಣವನ್ನು ಖಂಡಿಸುವ ಧೈರ್ಯ ಅವರಿಗೆ ಇರಲಿಲ್ಲ.

ಇಸ್ರೇಲ್‌ನ ಪೇಜರ್ ಬಾಂಬ್‌ಗಳು ಒಂದು 'ಮಾಸ್ಟರ್ ಸ್ಟ್ರೋಕ್' ಎಂದು ಭಾರತದ ಭೂ ಸೇನೆ ಮುಖ್ಯಸ್ಥರು ವರ್ಣಿಸಿದರು. ಅಂಥ ದಾಳಿಗಳನ್ನು ಖಂಡಿಸುವ ಬದಲು ಅವರು ಅದಕ್ಕೆ ಉತ್ತೇಜನ ನೀಡಿದರು. ಇನ್ನು ನಾಚಿಕೆಯಿಲ್ಲದ ರೀತಿಯಲ್ಲಿ ಭಾರತ ಸರಕಾರ ಭಾರತದಲ್ಲಿ ತಯಾರಾದ ಶಸ್ತ್ರಾಸ್ತ್ರಗಳ ಭಾಗಗಳು ಮತ್ತು ಡ್ರೋನ್‌ಗಳನ್ನು ಪ್ಯಾಲೆಸ್ಟೀನಿಯರ ವಿರುದ್ಧ ಬಳಸಲು ರಫ್ತು ಮಾಡಿದೆ. ಬಿಜೆಪಿ-ನೇತೃತ್ವದ ಎನ್‌ಡಿಎ ಸರಕಾರವು, ಆಕ್ರಮಿತ ದೇಶಗಳ ಹಕ್ಕುಗಳ ಪರವಾಗಿ ನಿಲ್ಲುವ ನಮ್ಮ ವಿದೇಶಾಂಗ ನೀತಿಯಿಂದ ದೂರ ಸರಿದು ಆಕ್ರಮಣ ನಡೆಸಿದ ಪಡೆಗಳ ಪರವಾಗಿ ನಿಲ್ಲುವ ಮಟ್ಟಕ್ಕೆ ಹೋಗಿದೆ.

ಇಸ್ರೇಲ್‌ನ ಆಕ್ರಮಣವು ವಿಶ್ವ ಶಾಂತಿಗೆ ಭಂಗ ತರುವ ನಿರ್ಣಾಯಕ ಹಂತಕ್ಕೆ ಬಂದಿದೆ. ಇನ್ನೂ ಹೆಚ್ಚು ತೀವ್ರಗೊಂಡರೆ ಅದರ ಪರಿಣಾಮ ಅನಾಹುತಕಾರಿಯಾಗುತ್ತದೆ. ಜಗತ್ತಿನಾದ್ಯಂತ ಜನರು ಇಸ್ರೇಲ್ ವಿರುದ್ಧ ದನಿಯೆತ್ತಿ ತಕ್ಷಣವೇ ಕದನ ವಿರಾಮ ಏರ್ಪಡಬೇಕೆಂದು ಆಗ್ರಹಿಸುತ್ತಿದ್ದಾರೆ. ಶಸ್ತ್ರಾಸ್ತ್ರಗಳನ್ನು ಲೋಡ್ ಮಾಡಲು ಅಥವಾ ಶಸ್ತ್ರಾಸ್ತ್ರಗಳಿರುವ ಹಡಗುಗಳು ಲಂಗರು ಹಾಕಲು ಕಾರ್ಮಿಕರು ನಿರಾಕರಿಸುತ್ತಿದ್ದಾರೆ. ಇಸ್ರೇಲಿ ವಿಶ್ವವಿದ್ಯಾಲಯಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳನ್ನು ರದ್ದುಪಡಿಸುವಂತೆ ವಿದ್ಯಾರ್ಥಿಗಳು ತಮ್ಮ ತಮ್ಮ ಯುನಿವರ್ಸಿಟಿಗಳನ್ನು ಒತ್ತಾಯಿಸುತ್ತಿದ್ದಾರೆ. ಇಂಥ ಪ್ರತಿರೋಧಾತ್ಮಕ ಚಟುವಟಿಕೆಗಳು ನಮ್ಮ ದೇಶದಲ್ಲಿ ಕೂಡ ಬಲಗೊಳ್ಳಬೇಕು, ಆ ಮೂಲಕ ಇಸ್ರೇಲ್‌ಗೆ ಶಸ್ತ್ರಾಸ್ತ್ರ ಸರಬರಾಜು ಮಾಡದಂತೆ ನಮ್ಮ ಸರಕಾರದ ಮೇಲೆ ಒತ್ತಡ ಹೇರಬೇಕು ಮತ್ತು ಪ್ಯಾಲೆಸ್ಟೀನ್‌ಗೆ ಬೆಂಬಲವಾಗಿ ನಿಲ್ಲಬೇಕು.



ಅನು: ವಿಶ್ವ

ಚೀನಾ ಕ್ರಾಂತಿಗೆ 75 ವರ್ಷಗಳು

ಜಿ.ಎನ್.ನಾಗರಾಜ್



ಇಂದು ಚೀನಾ ಕ್ರಾಂತಿಯ 75ನೇ ವರ್ಷದ ಆಚರಣೆಗಳ ಉದ್ಘಾಟನೆ. ವಿಶ್ವದ ಚರಿತ್ರೆಯಲ್ಲಿ ಹೊಸ ದಾಖಲೆಯ ನಿರ್ಮಾಣ. ರಷ್ಯಾದ ಕ್ರಾಂತಿಯ ನಂತರ ರೂಪುಗೊಂಡ ಸೋವಿಯತ್ ದೇಶ 74 ವರ್ಷಗಳ ಕಾಲ ಸಾಮ್ರಾಜ್ಯಶಾಹಿಗಳ ಧಾಳಿಯನ್ನು ತಡೆದುಕೊಂಡು ಉಳಿದಿತ್ತು. ಚೀನಾ ಅದನ್ನು ದಾಟಿ ಯಶಸ್ವಿ 75 ವರ್ಷದತ್ತ ಕಾಲಿಟ್ಟಿದೆ. ವಿಶ್ವದ ಚರಿತ್ರೆಯಲ್ಲಿ ಹೊಸ ಸಮಾಜವಾದಿ ಯುಗದ ಮತ್ತೊಂದು ಮಹತ್ವದ ಕ್ರಾಂತಿಯ ನೆನಪು.

ಚೀನಾವನ್ನು ಹತ್ತೂ ದಿಕ್ಕುಗಳಿಂದ ಸುತ್ತುವರಿಯಲು, ತೈವಾನ್, ಫಿಲಿಪೈನ್ಸ್, ಭಾರತ, ಕೊರಿಯಾ ದೇಶಗಳನ್ನು ಬಳಸುತ್ತಿವೆ. ಪೆಸಿಫಿಕ್ ಸಾಗರದಲ್ಲಿ ಮಿಲಿಟರಿ ಶಕ್ತಿಯನ್ನು ಹಲವು ಪಟ್ಟು ವೃದ್ಧಿಸಿವೆ. ಹಲವು ಜಂಟಿ ಸಮರಾಭ್ಯಾಸ ನಡೆಸಿವೆ. ಕ್ವಾಡ್ ಎಂಬ ದುಷ್ಟ ಕೂಟವನ್ನು ರಚಿಸಿವೆ.

ಜೊತೆಗೆ ಅಮೆರಿಕ, ಯುರೋಪ್ ಒಕ್ಕೂಟ ಹಲವು ವಿಧದ ಆರ್ಥಿಕ ನಿಷೇಧಗಳ ಮೂಲಕ ಸಾಮ್ರಾಜ್ಯಶಾಹಿ ದೇಶಗಳು ಆರ್ಥಿಕ ಯುದ್ಧ ಸಾರಿವೆ. ಜೊತೆಗೆ ಭಾರತ, ಯುಎಇ ದಂತಹ ದೇಶಗಳೂ ಈ ಆರ್ಥಿಕ ಯುದ್ಧದ ಭಾಗೀದಾರರಾಗಲು ಒತ್ತಾಯಿಸುತ್ತಿವೆ. ಇತ್ತೀಚೆಗೆ ಬಾಂಗ್ಲಾದೇಶದ ಗೊಂದಲವನ್ನು ಕೂಡಾ ಚೀನಾ ವಿರುದ್ಧ ದುರ್ಬಳಕೆ ಮಾಡಿಕೊಳ್ಳಲು, ಅಲ್ಲೊಂದು ಮಿಲಿಟರಿ ನೆಲೆ ಸ್ಥಾಪಿಸುವ ಮತ್ತೊಂದು ಅಪಾಯಕಾರಿ ಸಂಚು ನಡೆದಿದೆ. ಬಾಂಗ್ಲಾಕ್ಕೆ ಯಥೇಚ್ಛ ಆರ್ಥಿಕ ನೆರವಿನ ಹೊಳೆ ಹರಿಸಲಾಗುತ್ತಿದೆ. ಚೀನಾದ ಮತ್ತೊಂದು ಮಗ್ಗುಲಲ್ಲಿ ಮ್ಯಾನ್ಮಾರ್ (ಬರ್ಮಾ)ನಲ್ಲಿ ಮಿಲಿಟರಿ ದಂಗೆಗಳ ಗೊಂದಲದಲ್ಲಿ ಅಮೆರಿಕ ಕೈವಾಡವಿದೆ. ಚೀನಾ ಆರ್ಥಿಕವಾಗಿ ಕುಸಿಯುತ್ತಿದೆ ಎಂಬ ಬೃಹತ್ ಅಪಪ್ರಚಾರ ನಡೆಸಲಾಗುತ್ತಿದೆ.

ಚೀನಾ ಇಂತಹ ಬೃಹತ್ ಸವಾಲುಗಳನ್ನು ಎದರಿಸುತ್ತಾ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ತಾಂತ್ರಿಕ, ವಿಶ್ವ ರಾಜಕೀಯ ರಂಗದಲ್ಲಿ ಮುನ್ನಡೆಯುತ್ತಿದೆ. ಚೀನಾವನ್ನು 1949 ರಲ್ಲಿ ಮಾವೋರವರು ಮೊತ್ತ ಮೊದಲು ಐದು ನಕ್ಷತ್ರಗಳ ಕೆಂಬಾವುಟವನ್ನು ಮೇಲೇರಿಸಿದ ತಿಯನ್‌ಮನ್ ವೃತ್ತ, ಚೀನಾದ ಜನತಾ ಸಭಾ ಭವನ, ಮಾವೋರವರ ಶರೀರವನ್ನು ಕಾಪಿಟ್ಟಿರುವ ಈ ವೃತ್ತದಲ್ಲಿ ಕೆಂಬಾವುಟ ಏರಿಸುವುದರ ಮೂಲಕ ಉದ್ಘಾಟನೆಯಾಗಿದೆ.

ಚೀನಾದ ಕ್ರಾಂತಿಯೇ ಒಂದು ಅಪೂರ್ವ ಮಾನವ ಚಿಂತನೆ, ಕ್ರಿಯೆಗಳ ಸಂಗಮದ ಮತ್ತು ಹಲವು ಸಾವಿರ ಸಂಗಾತಿಗಳ ಬಲಿದಾನದ ಸಾಹಸಗಾಥೆ.

ಕ್ರಾಂತಿಯ ನಂತರ ಕ್ರಾಂತಿಕಾರಿ ಭೂಸುಧಾರಣೆ, ನೈಜ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದು ಒಂದು ದೊಡ್ಡ ಸಾಧನೆ.

1957ರಲ್ಲೊಮ್ಮೆ, 1966ರಿಂದ 1976ರವರೆಗಿನ ಮಹಾ ಅತಿ ಕ್ರಾಂತಿಕಾರಿ ಪ್ರಮಾದಗಳನ್ನು, ಲಿಯುಶಾವೋಕಿಯಂಥಹ ಮಹಾ



ನಾಯಕರುಗಳನ್ನು ಬಲಿ ಕೊಟ್ಟ, ಡೆಂಗ್ ಜಿಯಾವೋ ಪಿಂಗರಂತಹ ಹಲವು ಉನ್ನತ ನಾಯಕರನ್ನು ಹಳ್ಳಿಗಳಲ್ಲಿ ಕಠಿಣ ಶ್ರಮದ ಬದುಕಿಗೆ ದೂಡಿದ, ಲಕ್ಷಾಂತರ ಜನರು ಉಪವಾಸ, ದಬ್ಬಾಳಿಕೆಗಳನ್ನು ಅನುಭವಿಸಿದ ಸಂಕಟಕರ ಪರಿಸ್ಥಿತಿಯನ್ನು ನಿವಾರಿಸಿಕೊಂಡು ಮರಳಿ ಆರೋಗ್ಯಕರವಾಗಿ ಹೊರಬಂದದ್ದೇ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗೆ ಒಂದು ಮಹಾನ್ ಕೊಡುಗೆ. ತಪ್ಪುಗಳನ್ನು, ಪ್ರಮಾದಗಳ ಮೂಲವನ್ನು ಸರಿಯಾಗಿ ಗುರುತಿಸುವುದು, ಮಾವೋರವರ ಐತಿಹಾಸಿಕ ಕ್ರಾಂತಿಕಾರಿ ಪಾತ್ರಕ್ಕೆ ಮನ್ನಣೆ ನೀಡುತ್ತಲೇ ಅವರ ದೋಷಗಳನ್ನು ಸರಿಯಾಗಿ ಗುರುತಿಸಿದ್ದು ಈ ಸಾಧನೆ. ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸದ ಬಗ್ಗೆ 'ಚೀನಾ ಕಮ್ಯುನಿಸ್ಟ್ ಪಕ್ಷದ ನಿರ್ಣಯ' ಎಂಬ ಒಂದು ಕಿರು ದಸ್ತಾವೇಜು ಈ ಸಂದರ್ಭದಲ್ಲಿ ಅವರಿಗೆ ಮಾತ್ರವಲ್ಲ, ವಿಶ್ವದ ಕಮ್ಯುನಿಸ್ಟ್ ಪಕ್ಷಗಳಿಗೆ ಬೆಳಕು ತೋರಿತು. ಕ್ರುಶ್ಚೇವ್ ನೇತೃತ್ವದ ರಷ್ಯಾದ ಕಮ್ಯುನಿಸ್ಟ್ ಪಕ್ಷ ಮತ್ತು ಜಗತ್ತಿನ ಹಲವು ಕಮ್ಯುನಿಸ್ಟ್ ಪಕ್ಷಗಳು ಇಂತಹ ಕ್ರಾಂತಿಕಾರಿ ಹೊಣೆಯನ್ನು ನಿರ್ವಹಿಸುವುದರಲ್ಲಿ ವಿಫಲವಾದವು ಎಂಬ ಪ್ರಸಂಗ ಚೀನಾದ ಕಮ್ಯುನಿಸ್ಟ್ ಪಕ್ಷದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಕ್ರಾಂತಿ ಯಶಸ್ವಿಯಾದ ಮೇಲೆ, ವಿಶ್ವದ ಮೇಲೆ ಸಾಮ್ರಾಜ್ಯಶಾಹಿ ಬಿಗಿ ಹಿಡಿತ ಬಲವಾಗಿರುವಾಗ ಸಮಾಜವಾದಿ ಆರ್ಥಿಕತೆ, ಸಮಾಜದ ನಿರ್ಮಾಣ ಹೇಗೆ ಎಂಬುದು ಒಂದು ವಿಶ್ವ ಮಹತ್ವದ ಸವಾಲು. ಈ ಸವಾಲಿನ ಆರಂಭ ಘಟ್ಟದಲ್ಲಿ ಸರಿಯಾದ ಮಾರ್ಗದರ್ಶನ ನೀಡಿದ ಲೆನಿನ್, ಈ ಪಥದ ಮುಂದಿನ ಬೆಳವಣಿಗೆ, ಕ್ಲಿಷ್ಟ ಸಂದರ್ಭಗಳಲ್ಲಿ ದಾರಿ ತೋರಲು ನಾಲ್ಕು ಬಾರಿ ಗುಂಡಿನ ಧಾಳಿಗೊಳಗಾಗಿ ಅನಾರೋಗ್ಯ ಪೀಡಿತರಾಗಿ ಜೀವಂತ ಉಳಿಯಲಿಲ್ಲ. ಸ್ಟಾಲಿನ್ ರವರು ಹಿಟ್ಲರನ ಕ್ರೌರ್ಯ, ಫ್ಯಾಸಿಸ್ಟ್ ಯುದ್ಧವನ್ನು ಎದುರಿಸಲು ನೇತೃತ್ವ ನೀಡಿದರು ಮತ್ತು ವಿಶ್ವಸಂಸ್ಥೆ ಮತ್ತು ಯುದ್ಧಾನಂತರದ ರಕ್ಷಣಾ ಒಪ್ಪಂದಗಳಲ್ಲಿ ಚಾಣಾಕ್ಷತೆ ತೋರಿದರು. ಆದರೆ ರಷ್ಯಾ ಅನುಸರಿಸಬೇಕಾದ ಸಮಾಜವಾದಿ ಆರ್ಥಿಕ ಪಥದ ವಿಷಯದಲ್ಲಿ ಸರಿಯಾದ ದಾರಿ ಅನುಸರಿಸಲಿಲ್ಲ ಎಂದು ಸಿಪಿಎಂ ವಿಮರ್ಶಿಸಿದೆ. ಮಾವೋರವರಂತೂ ಮೇಲೆ ಹೇಳಿದಂತೆ ಅತಿ ಕ್ರಾಂತಿಕಾರಿ ಕ್ರಮಗಳನ್ನು ಅನುಸರಿಸಿದರು.

ಲಿಯುಶಾ ವೋಕಿ, ಚೆನ್ ಯುನ್, ಡೆಂಗ್ ಜಿಯಾವೋ ಪಿಂಗ್ ಮೊದಲಾದ ನಾಯಕರು 1958ರಲ್ಲಿಯೇ ಸೂಚಿಸಿದ ಆರ್ಥಿಕ ಪಥ– ಚೀನಾದ ಅತ್ಯಂತ ಉತ್ಪಾದನಾ ಶಕ್ತಿಗಳಿಗೆ ತಕ್ಕಂತಹ ಉತ್ಪಾದನಾ ಸಂಬಂಧಗಳ ದಾರಿಯನ್ನು ನಿರಾಕರಿಸಿದರು. ಆರ್ಥಿಕ ಬೆಳವಣಿಗೆಯ ದಾರಿಯ ಬಗ್ಗೆ ಅಂದಿನಿಂದ ಅಂತರಿಕ ಸಂಘರ್ಷ ನಡೆಯುತ್ತಾ ಬಂದಿತು. ಇದೇ ಸಂದರ್ಭದಲ್ಲೇ ಮೇಲೆ ಹೇಳಿದ ಎರಡು ಪ್ರಮಾದಗಳು ಜರುಗಿದ್ದು.

ನಂತರ ಆರೋಗ್ಯ ಮರಳಿ ಪಡೆದ ಚೀನಾ ಕಮ್ಯುನಿಸ್ಟ್ ಪಕ್ಷ ಜಗತ್ತಿನ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಎರಡು ಮುಖ್ಯ ಕೊಡುಗೆಗಳನ್ನು ನೀಡಿದೆ.

ಒಂದನೆಯದು– ಸಮಾಜವಾದಿ ಸಮಾಜ ಕಮ್ಯುನಿಸ್ಟ್ ಸಮಾಜವಾಗುವುದು ಬಹಳ ದೀರ್ಘ ಹಾದಿ. ಈ ಹಾದಿ ಹಲವು ಮೈಲುಗಲ್ಲುಗಳನ್ನು– ಹಂತಗಳನ್ನು ಹಾದು ಬರುತ್ತದೆ. ಈಗ ಚೀನಾದ ಹಂತ ಪ್ರಾಥಮಿಕ ಸಮಾಜವಾದದ ಹಂತ. ಪ್ರೈಮರಿ ಸ್ಟೇಜ್ ಆಫ್ ಸೋಷಿಯಲಿಸಂ. ಅದಕ್ಕೆ ತಕ್ಕಂತೆ ನಮ್ಮ ಎಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿ, ನಿರ್ಧಾರಗಳು, ಅವುಗಳ ಜಾರಿ ಆದಾಗ ಮಾತ್ರ ಸಮಾಜವಾದ ಬೆಳವಣಿಗೆ ಹೊಂದುತ್ತದೆ.



ಎರಡನೆಯದು, ಸಮಾಜವಾದಿ ಮಾರುಕಟ್ಟೆ, (ಕೇಂದ್ರೀಕೃತ ಯೋಜನೆಗಳ ಅಡಿಯಲ್ಲಿ, ಸಾರ್ವಜನಿಕ ರಂಗದ ಪ್ರಾಧಾನ್ಯತೆಯೊಂದಿಗೆ ಮಾರುಕಟ್ಟೆಯ ಜೋಡಣೆ)

ಈ ಪರಿಕಲ್ಪನೆಯ ಅನುಸಾರವಾಗಿ ಕೃಷಿ ಕಮ್ಯೂನ್ ಎಂಬ ಸಾಮೂಹಿಕ ಕೃಷಿ ಪಾರಂಗಳನ್ನು ಒಡೆಯಲಾಯಿತು. ಭೂಮಿ ಸರ್ಕಾರದ ಒಡೆತನದಲ್ಲಿಯೇ ಮುಂದುವರೆಯುವುದು, ಆದರೆ ಕೃಷಿ ಉತ್ಪಾದನೆಯನ್ನು ಕಟುಂಬ ಕೇಂದ್ರಿತವಾಗಿಸುವುದು. ಅಂದರೆ ಭೂಮಿಯನ್ನು ಕೃಷಿ ಮಾಡಬಯಸುವ ಕಟುಂಬಗಳಿಗೆ ಹಂಚಿ ಅವುಗಳಲ್ಲಿಯ ಉತ್ಪಾದನೆ, ಅದರ ಫಲಗಳನ್ನು ಅವರೇ ಪಡೆಯಲು ಹಕ್ಕುದಾರರನ್ನಾಗಿ ಮಾಡುವುದು, ಹಾಗೆಯೇ ಸಣ್ಣ ಅಂಗಡಿ, ಹೋಟೆಲ್ ಮುಂತಾದವನ್ನು ಕುಟುಂಬಗಳು ನಿರ್ವಹಣೆ ಮಾಡಲು ಅವಕಾಶ. ಸಣ್ಣ ಕೈಗಾರಿಕೆ ಇತ್ಯಾದಿಗಳನ್ನು ಸಹಕಾರಿ ರಂಗದಲ್ಲಿ ಇತ್ಯಾದಿ ಸುಧಾರಣೆಗಳು ಜಾರಿಯಾದವು. ಬಂಡವಾಳದ ಕೊರತೆಯನ್ನು ಹಾಗೂ ತಂತ್ರಜ್ಞಾನದ ಹಿಂದುಳಿಯುವಿಕೆಯನ್ನು ನೀಗಿಸಲು ಕೆಲ ಆಯ್ದ ಪ್ರದೇಶಗಳಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ರೂಪಿಸುವುದು. ಅಲ್ಲಿ ಮಾತ್ರ ಅವುಗಳಿಗೆ ಆಹ್ವಾನ.

ಅವುಗಳ ಉತ್ಪಾದನೆಯ ಶೇ. 20ರಷ್ಟು ಭಾಗ ಮಾತ್ರ ಚೀನಾದೊಳಗಡೆ ಮಾರಾಟ, ಉಳಿದುದು ವಿದೇಶಗಳಿಗೆ ರಫ್ತಾಗಿ ಡಾಲರ್ ಆದಾಯ ದೊರೆಯಬೇಕು.



ಈ ವಿಧಾನದಿಂದ ಕೈಗಾರಿಕಾ ಬೆಳವಣಿಗೆಗೆ ಬೇಕಾದ ಬಂಡವಾಳ ಹಾಗೂ ಉನ್ನತ ತಂತ್ರಜ್ಞಾನ ದೊರೆಯಿತು.

ಈಗ ವಿಶ್ವದಲ್ಲೇ ಅತ್ಯಂತ ವ್ಯಾಪಕ ಸಾರ್ವಜನಿಕ ಉನ್ನತ ಶಿಕ್ಷಣ, ಅತ್ಯುತ್ತಮ ಸಂಶೋಧನಾ ಸಂಸ್ಥೆಗಳ ಜಾಲ ಸ್ಥಾಪಿಸಿ ಸಾಮ್ರಾಜ್ಯಶಾಹಿ ದೇಶಗಳಿಗೆ ಸೆಡ್ಡು ಹೊಡೆಯುತ್ತಿದೆ. ಆ ರಾಷ್ಟ್ರಗಳಿಗೆ, ಹಲವು ಬೃಹತ್ ಕಾರ್ಪೊರೇಟ್‌ಗಳಿಗೆ ಭಯ ಆವರಿಸುವಂತಾಗಿದೆ. 2008ರ ಮಹಾ ಮತ್ತು ದೀರ್ಘ ಆರ್ಥಿಕ ಬಿಕ್ಕಟ್ಟನ್ನು ದಾಟಿ, ಕೋವಿಡ್ ಸವಾಲನ್ನು ಎದುರಿಸಿ ಮುನ್ನಡೆಯುತ್ತಿದೆ.

ಚೀನಾದ ಕಮ್ಯೂನಿಸ್ಟ್ ಪಕ್ಷ ರೂಪಿಸಿದ ಸಮಾಜವಾದಿ ಬೆಳವಣಿಗೆಯ ಹೊಸ ಪರಿಕಲ್ಪನೆಗಳನ್ನು ವಿಯೆಟ್ನಾಂ, ಕ್ಯೂಬಾಗಳು ಕೂಡ ಅಳವಡಿಸಿಕೊಂಡಿವೆ. ಹೀಗೆ ಇದು ವಿಶ್ವದ ಕಮ್ಯುನಿಸ್ಟ್ ದಾರಿಗೆ ಹೊಸ ಸೈದ್ಧಾಂತಿಕ ಬೆಳವಣಿಗೆಯ ಕೊಡುಗೆಯಾಗಿದೆ.

ಸಮಾಜವಾದದತ್ತ ಮುನ್ನಡೆಯುತ್ತಿರುವ ಚೀನಾದ ಜನತೆಗೆ ಹಾಗೂ 75 ವರ್ಷಗಳಿಂದ ಹಲವು ಒಳಗಿನ ಹಾಗೂ ಸಾಮ್ರಾಜ್ಯಶಾಹಿಗಳು ಹರಿಬಿಟ್ಟ ಎಲ್ಲ ಬಿಕ್ಕಟ್ಟು ಹಾಗೂ ದಾಳಿಗಳನ್ನು ಸಮರ್ಥವಾಗಿ ಎದುರಿಸುತ್ತಾ ಚೀನಾವನ್ನು ಕ್ರಾಂತಿಕಾರಿ ಪಥದಲ್ಲಿ ಮುನ್ನಡೆಸುತ್ತಿರುವ ಚೈನಾ ಕಮ್ಯೂನಿಸ್ಟ್ ಪಕ್ಷಕ್ಕೆ ಅದರ ನಾಯಕತ್ವಕ್ಕೆ ಅದರ 10 ಕೋಟಿಗೂ ಅಧಿಕ ಸದಸ್ಯರಿಗೆ ಕ್ರಾಂತಿಕಾರಿ ಶುಭಾಶಯಗಳು. ಚೀನಾದ ಸಮಾಜವಾದಿ ಜನತಾ ಪ್ರಜಾಪ್ರಭುತ್ವ ಮುನ್ನಡೆಯಲಿ. ಬೆಳೆಯಲಿ. ಚೀನಾದ ಜನತೆಗೆ ನಮ್ಮೆಲ್ಲರ, ವಿಶ್ವದ ದುಡಿಯುವ ಜನರೆಲ್ಲರ ಅಭಿನಂದನೆಗಳು, ಸೌಹಾರ್ದ ಬೆಂಬಲವಿರುತ್ತದೆ.







ಶಿಕ್ಷಣ-ಆರೋಗ್ಯ-ವಿಜ್ಞಾನ-ಬಡತನ ನಿವಾರಣೆ

ಮಾನವ ಅಭಿವೃದ್ಧಿ ಸೂಚಿ ಜಗತ್ತನ್ನು ನಿಬ್ಬೆರಗಾಗಿಸಿದ ಚೀನಾದ ಸಾಧನೆಗಳು

ಸುಮಾರು 141 ಕೋಟಿ ಜನಸಂಖ್ಯೆ ಇರುವ ಚೀನಾ ದೇಶವು ಆರ್ಥಿಕ-ಸಾಮಾಜಿಕ-ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಾಗೆಯೇ ವಿಜ್ಞಾನ-ತಂತ್ರಜ್ಞಾನ ರಂಗದಲ್ಲಿ ಅಗಾಧವಾದ ಪ್ರಗತಿಯನ್ನು ಸಾಧಿಸಿದೆ. ಚೀನಾ ದಾಪುಗಾಲಿಟ್ಟು ಸಾಧಿಸಿರುವ ಈ ಪ್ರಗತಿಯನ್ನು ಜಗತ್ತು ಇಂದು ವಿಶೇಷವಾದ ಕುತೂಹಲದೊಂದಿಗೆ ಗಮನಿಸುತ್ತಿದೆ. ಅಕ್ಟೋಬರ್ 1, 1949ರಂದು ಚೀನಾ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ 'ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ' ಸ್ಥಾಪನೆಯಾಯಿತು. ಕಳೆದ ಈ 75 ವರ್ಷಗಳಲ್ಲಿ ಚೀನಾ ಸಾಧಿಸಿರುವುದೇನು ಎಂದು ಇಲ್ಲಿನ ಅಂಕಿ ಅಂಶಗಳ ಮೂಲಕ ಗಮನಿಸಬಹುದು.

ಆರ್. ರಾಮಕೃಷ್ಣ

ಶಿಕ್ಷಣ-ಸಾಕ್ಷರತೆ

ಚೀನಾ ದೇಶದ ಸಾಕ್ಷರತೆಯ ಪ್ರಮಾಣ 1949ರಲ್ಲಿ ಕೇವಲ ಶೇ. 20ರಷ್ಟಿತ್ತು. 1982ರಲ್ಲಿ ಇದು ಶೇ. 66ರಷ್ಟಕ್ಕೆ ಏರಿತ್ತು. 15 ವಯಸ್ಸು ಮೇಲ್ಪಟ್ಟ ಜನರ ಸಾಕ್ಷರತೆಯ ಪ್ರಮಾಣ 2020ರಲ್ಲಿ ಶೇ.97 ಇತ್ತು ಎನ್ನುತ್ತವೆ ವರದಿಗಳು. 2021ರಲ್ಲಿ ಈ ಅಂಕಿ-ಸಂಖ್ಯೆಯು 99.83ಕ್ಕೆ ಏರಿದೆ. 15 ರಿಂದ 24 ವರ್ಷದ ನಡುವಿನ ಯುವಜನರ ಸಾಕ್ಷರತೆಯ ಪ್ರಮಾಣವು ಚೀನಾದಲ್ಲಿ ಶೇ. 100ರಷ್ಟಿದೆ. ಚೀನಾ 2010ರಲ್ಲಿಯೇ ಸಂಪೂರ್ಣ ಯುವಜನರ ಸಾಕ್ಷರತೆಯನ್ನು ಸಾಧಿಸಿತ್ತು. ಭಾರತವು 1947ರಲ್ಲಿ ಸ್ವಾತಂತ್ರ್ಯ ಗಳಿಸಿದಾಗ ಸಾಕ್ಷರತೆಯ ಪ್ರಮಾಣ ಕೇವಲ 16 ಇತ್ತು. 2011ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆ ಶೇ.74. ನಂತರದ ವರ್ಷಗಳಲ್ಲಿ ಜನಗಣತಿ ನಡೆದಿಲ್ಲ, 2023ರಲ್ಲಿ ಈ ಪ್ರಮಾಣ ಶೇ. 77.7 ಎಂದು ಹೇಳಲಾಗಿದೆ.

ದೇಶದ ಒಟ್ಟು ಮಕ್ಕಳಲ್ಲಿ ಶಾಲೆಗೆ ದಾಖಲಾಗುವವರ ಪ್ರಮಾಣ ಚೀನಾದಲ್ಲಿ 2017 ರಲ್ಲಿಯೇ ಶೇ.100 ತಲುಪಿದೆ. ಅಂದರೆ ಚೀನಾದಲ್ಲಿ ಈಗ ಶಾಲೆಯಿಂದ ಯಾವ ಮಕ್ಕಳೂ ಹೊರಗೆ ಉಳಿಯುತ್ತಿಲ್ಲ. ಎಲ್ಲ ಮಕ್ಕಳೂ ಶಾಲೆಗೆ ದಾಖಲಾಗುತ್ತಾರೆ.

2011ರ ಜನಗಣತಿಯಂತೆ ಭಾರತದಲ್ಲಿ 5 ರಿಂದ 14ರ ವಯಸ್ಸಿನ 1.01 ಕೋಟಿ ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದರು. 2024ರ ಅಂಕಿ ಸಂಖ್ಯೆಗಳ ಪ್ರಕಾರ ಭಾರತದಲ್ಲಿ ಬಾಲಕಾರ್ಮಿಕರ ಪ್ರಮಾಣ 1.26 ಕೋಟಿ.

ಇನ್ನು ಉನ್ನತ ಶಿಕ್ಷಣದ ವಿಷಯಕ್ಕೆ ಬಂದರೆ



ಚೀನಾದಲ್ಲಿ 2023ರಲ್ಲಿ ಸುಮಾರು 18 ರಿಂದ 22 ವಯಸ್ಸಿನ ಪದವಿ ವಿದ್ಯಾರ್ಥಿಗಳು ಮತ್ತು ನಂತರದ ಸ್ನಾತಕೋತ್ತರ ಶಿಕ್ಷಣ ಸೇರಿದಂತೆ ಒಟ್ಟಾರೆ ಉನ್ನತ ಶಿಕ್ಷಣ ಪಡೆದುಕೊಳ್ಳುವವರ ಪ್ರಮಾಣ ಶೇ.60.2 ಇದೆ. ಭಾರತದಲ್ಲಿ ಉನ್ನತ ಶಿಕ್ಷಣದಲ್ಲಿನ ವಿದ್ಯಾರ್ಥಿಗಳ ಪ್ರಮಾಣ(ಜಿಇಆರ್) 2021-22 ರಲ್ಲಿ ಶೇ.28.4 ಎನ್ನುತ್ತವೆ ಅಧ್ಯಯನಗಳು.

2023ರ ಅಂಕಿಸಂಖ್ಯೆಯಂತೆ ಜಾಗತಿಕ ವಿಶ್ವವಿದ್ಯಾಲಯ ರ್‍ಯಾಂಕಿಂಗ್‌ನಲ್ಲಿ ಜಗತ್ತಿನ 100 ಅತ್ಯುತ್ತಮ ವಿಶ್ವವಿದ್ಯಾಲಯಗಳ ಪೈಕಿ ಚೀನಾದ 7 ವಿಶ್ವವಿದ್ಯಾಲಯಗಳು ಸ್ಥಾನ ಪಡೆದಿವೆ. 2019ರ ಪಟ್ಟಿಯಂತೆ ಜಗತ್ತಿನ ಅತ್ಯುತ್ತಮವಾದ 500 ವಿಶ್ವವಿದ್ಯಾಲಯಗಳಲ್ಲಿ ಚೀನಾದ 38 ವಿಶ್ವವಿದ್ಯಾಲಯಗಳು ಸ್ಥಾನ ಗಳಿಸಿದ್ದವು.

ಜಗತ್ತಿನ ಅತ್ಯುತ್ತಮ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಯಾವುದೇ ವಿಶ್ವವಿದ್ಯಾಲಯ ಸ್ಥಾನ ಪಡೆದಿಲ್ಲ. ಐಐಎಸ್‌ಸಿ-ಬೆಂಗಳೂರು, ಐಐಎಂ, ಜೆಎನ್‌ಯು ಮುಂತಾದ ಹಲವಾರು ವಿಶ್ವವಿದ್ಯಾಲಯಗಳು ಜಾಗತಿಕವಾಗಿ ತಮ್ಮ ತಮ್ಮ ವಿಭಾಗಗಗಳಲ್ಲಿ ಉತ್ತಮ ಸ್ಥಾನ ಪಡೆದಿದ್ದರೂ ಅವುಗಳು ಸಹ ವಿಶ್ವದ ಅತ್ಯುತ್ತಮ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿಲ್ಲ.

ವಿಜ್ಞಾನ-ತಂತ್ರಜ್ಞಾನದ ಪ್ರಗತಿ

ಚೀನಾ ದೇಶವು ವಿಜ್ಞಾನ ಮತ್ತು ಸಂಶೋಧನೆಗಾಗಿ ತನ್ನ ಜಿಡಿಪಿಯಲ್ಲಿ ಶೇ. 2.6ರಷ್ಟನ್ನು ವೆಚ್ಚ ಮಾಡುತ್ತಿದೆ. ಅಮೆರಿಕವು 3.6ರಷ್ಟನ್ನು ಖರ್ಚು ಮಾಡುತ್ತಿದೆ. ಜಾಗತಿಕ ಸರಾಸರಿಯು 1.8ರಷ್ಟಿದೆ. ಭಾರತವು 2022ರಲ್ಲಿ ಈ ಉದ್ದೇಶಕ್ಕೆ 0.65ರಷ್ಟನ್ನು ಮಾತ್ರ ಖರ್ಚು ಮಾಡಿದೆ. ಅಂದರೆ ಶೇ. 1ರಷ್ಟು ಸಹ ಇಲ್ಲ.

ಪರಿಣಾಮವಾಗಿ ಚೀನಾ ದೇಶ ಇಂದು ಇಡೀ ಜಗತ್ತಿನಲ್ಲಿ ಅತಿ ಹೆಚ್ಚು ವೈಜ್ಞಾನಿಕ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸುತ್ತಿರುವ ದೇಶವಾಗಿದೆ. 2020ರಲ್ಲಿ ಚೀನಾ ದೇಶವು 7.44 ಲಕ್ಷ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿತ್ತು. ಆ ವರ್ಷ ಅಮೆರಿಕವು 6.24 ಲಕ್ಷ ಪ್ರಬಂಧಗಳನ್ನು, ಬ್ರಿಟನ್ 1.98 ಲಕ್ಷ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದವು. 2022ರಲ್ಲಿ ಚೀನಾ 21.5 ಲಕ್ಷ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿ ವಿಜ್ಞಾನ-ತಂತ್ರಜ್ಞಾನದ ಪ್ರಗತಿಯಲ್ಲಿ ದೊಡ್ಡ ನೆಗೆತ ಸಾಧಿಸಿದೆ. ಚೀನಾದಲ್ಲಿ ಪೂರ್ಣಾವಧಿ ವಿಜ್ಞಾನ ಸಂಶೋಧನೆಯಲ್ಲಿ ನಿರತರಾದ ವಿಜ್ಞಾನಿಗಳ ಸಂಖ್ಯೆ 2012ರಲ್ಲಿ 32.47 ಲಕ್ಷ ಇದ್ದದ್ದು, 2022ರಲ್ಲಿ ಅದು 63.54 ಲಕ್ಷಕ್ಕೇರಿದೆ.

ಬಡತನ ನಿವಾರಣೆ

ಅಮೋಘ ಸಾಧನೆ

ಚೀನಾ ದೇಶ ಬಡತನಕ್ಕೆ ಕುಖ್ಯಾತವಾಗಿದ್ದ ಒಂದು ದೇಶ. 1949ರಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಬಹುಪಾಲು ಜನರು ಕಡುಬಡತನದ ಕೂಪದಲ್ಲಿದ್ದರು. ತಲಾ ಆದಾಯದ ಲೆಕ್ಕದಲ್ಲಿ ಆಗ ಜಗತ್ತಿನಲ್ಲಿ ಚೀನಾಕ್ಕಿಂತ ಕೇವಲ 10 ದೇಶಗಳು



ಮಾತ್ರ ಹಿಂದೆ ಇದ್ದವು. ಇಂತಹ ಹಿನ್ನೆಲೆಯ ಚೀನಾ ದೇಶವು 2021ರಲ್ಲಿ ತಾನು ದೇಶದಲ್ಲಿ ಕಡುಬಡತನವನ್ನು ಸಂಪೂರ್ಣವಾಗಿ ನಿವಾರಣೆ ಮಾಡಿರುವುದಾಗಿ ಘೋಷಿಸಿತು. ವಿಶ್ವ ಸಂಸ್ಥೆಯು ಈ ಕುರಿತು ಹೇಳಿದ ಮಾತು ಅತ್ಯಂತ ಗಮನಾರ್ಹ. "1981ರ ನಂತರದ ಸುಮಾರು 40 ವರ್ಷಗಳಲ್ಲಿ ಚೀನಾ ದೇಶವು ಸುಮಾರು 80 ಕೋಟಿಗೂ ಹೆಚ್ಚು ಜನರನ್ನು ಬಡತನ ರೇಖೆಯಿಂದ ಮೇಲೆ ತಂದಿದೆ. ಇಡೀ ಮನುಕುಲದ ಇತಿಹಾಸದಲ್ಲಿಯೇ ಇಂತಹ ಉದಾಹರಣೆ ಮತ್ತೊಂದಿಲ್ಲ" ಎಂದು ವಿಶ್ವಸಂಸ್ಥೆಯು ಈ ಸಾಧನೆಯನ್ನು ಮುಕ್ತಕಂಠದಿಂದ ಬಣ್ಣಿಸಿತು. ಚೀನಾ ಸರಕಾರದ ಪ್ರಕಾರ ಈ ಅವಧಿಯಲ್ಲಿ ಬಡತನ ರೇಖೆಯಿಂದ ಮೇಲೆ ಬಂದವರ ಸಂಖ್ಯೆ 85.3 ಕೋಟಿ.

ಶಿಶು ಮರಣ ದರ

1949ರಲ್ಲಿ ಚೀನಾದಲ್ಲಿ ಶಿಶು ಮರಣ ದರ 1000ಕ್ಕೆ 200 ಇತ್ತು. ಅಂದರೆ ಹುಟ್ಟಿದ ಸಾವಿರ ಮಕ್ಕಳಲ್ಲಿ 200 ಮಕ್ಕಳು ಸಾಯುತ್ತಿದ್ದವು. 1980ರ ಹೊತ್ತಿಗೆ ಈ ಪ್ರಮಾಣವು 50ಕ್ಕೆ ಇಳಿಯಿತು. ಆರೋಗ್ಯ ವ್ಯವಸ್ಥೆಯ ಸುಧಾರಣೆ, ಜನರಿಗೆ ಆಹಾರ



ಮತ್ತು ಪೌಷ್ಟಿಕಾಂಶ ದೊರೆಯುವ ಪ್ರಮಾಣದಲ್ಲಿ ಸುಧಾರಣೆಯಾದ್ದರಿಂದ ಇದು ಸಾಧ್ಯವಾಯಿತು. 2022 ಚೀನಾದ ಶಿಶು ಮರಣ ದರ 1000ಕ್ಕೆ 4.8 ಇದೆ. ಭಾರತದಲ್ಲಿ ಈ ಶಿಶು ಮರಣ ದರವು 2022ರಲ್ಲಿ 1000ಕ್ಕೆ 27.69 ಇದೆ.

ಮಾತೃ ಮರಣ

1949ರಲ್ಲಿ ಚೀನಾದಲ್ಲಿ ಹೆರಿಗೆ ಸಂದರ್ಭದಲ್ಲಿ ತಾಯಿಯು ಸಾಯುವ ಪ್ರಮಾಣವು 1 ಲಕ್ಷ ಹೆರಿಗೆಗೆ 1,500ರಷ್ಟಿತ್ತು. ಈ ಪ್ರಮಾಣ ಭಾರತದಲ್ಲಿ 1947ರಲ್ಲಿ 2,000 ಇತ್ತು. ಪ್ರಸ್ತುತ ಮಾತೃ ಮರಣದ ಪ್ರಮಾಣ ಚೀನಾದಲ್ಲಿ 1 ಲಕ್ಷ ಹೆರಿಗೆ ಪ್ರಕರಣಗಳಲ್ಲಿ 18.3ಕ್ಕೆ ಇಳಿದಿದೆ. ಭಾರತಕ್ಕೆ ಸಂಬಂಧಿಸಿದಂತೆ ಈ ಪ್ರಮಾಣ 2020ರಲ್ಲಿ 99ರಷ್ಟಿದೆ. 2021-22ರಲ್ಲಿ ಭಾರತದ ಆಸ್ಪತ್ರೆಗಳಲ್ಲಿ ಹೆರಿಗೆ ಆಗುತ್ತಿರುವ ಪ್ರಮಾಣ 95.5 ಮಾತ್ರ. ಅಂದರೆ ಸುಮಾರು 4.5ರಷ್ಟು ಪ್ರಸಂಗಗಳಲ್ಲಿ ಇನ್ನೂ ಮನೆಯಲ್ಲೇ ಹೆರಿಗೆ ಆಗುತ್ತಿದೆ. ತಾಯಿ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಇದು ಅತ್ಯಂತ ಅಪಾಯಕಾರಿ.

ಜನಸಂಖ್ಯೆ ಹಾಗೂ ವೈದ್ಯರ ಅನುಪಾತ



ಚೀನಾ ದೇಶದಲ್ಲಿ ಪ್ರತಿ 1000 ಜನರಿಗೆ 3.15 ವೈದ್ಯರು ಇದ್ದಾರೆ. ಭಾರತದಲ್ಲಿ ಪ್ರತಿ 834 ಜನರಿಗೆ ಒಬ್ಬರು ವೈದ್ಯರು ಇದ್ದಾರೆಂದು ಅಂಕಿ ಸಂಖ್ಯೆಗಳು ಹೇಳುತ್ತವೆ. ಕ್ಯೂಬಾದಲ್ಲಿ 1,000 ಜನರಿಗೆ ಸರಾಸರಿ 8.4 ವೈದ್ಯರು ಇರುವುದು ಜಗತ್ತಿನಲ್ಲೇ ಅತ್ಯುತ್ತಮ ಜನರು ಮತ್ತು ವೈದ್ಯರ ಅನುಪಾತವಾಗಿದೆ.

ಜೀವಿತಾವಧಿ

ಚೀನಾದ ಜನರ ಸರಾಸರಿ ಜೀವಿತಾವಧಿ 1949ರಲ್ಲಿ 36 ವರ್ಷ. 2021ರಲ್ಲಿ ಇದು 78.21 ವರ್ಷಕ್ಕೆ ಏರಿದೆ. ಅದೇ ವರ್ಷ ಅಮೆರಿಕದಲ್ಲಿ ಸರಾಸರಿ ಜನರ ಜೀವಿತಾವಧಿ 76.33 ವರ್ಷ. ಭಾರತದಲ್ಲಿ 2021ರಲ್ಲಿ ಜನರ ಜೀವಿತಾವಧಿ 67.24 ವರ್ಷ. ಭಾರತದಲ್ಲಿ 2024ಕ್ಕೆ ಜೀವಿತಾವಧಿಯು 70.26 ವರ್ಷಕ್ಕೆ ಏರಬಹುದು ಎಂದು ಅಂದಾಜಿಸಲಾಗಿದೆ. ವೈದ್ಯಕೀಯ ಸೌಲಭ್ಯಗಳ ಸುಧಾರಣೆ ಮುಂತಾದ ಹಲವು ಅಂಶಗಳ ಜೊತೆಗೆ ಚೀನಾದಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ, ಒಳಚರಂಡಿ ಮುಂತಾದ ಸ್ವಚ್ಛತೆಯ ವ್ಯವಸ್ಥೆಯಲ್ಲಿ ಸುಧಾರಣೆ, ಗಾಳಿಯ ಗುಣಮಟ್ಟದಲ್ಲಿ ಇತ್ತೀಚಿನ ವರ್ಷಗಳಲ್ಲಿ

ಪುಟ 14 ಕ್ಕೆ

ಉತ್ತಮ ಜಗತ್ತಿಗಾಗಿ ಶ್ರಮಿಸಿದ ಮುಂದಾಳು: ಸೀತಾರಾಂ ಯೆಚೂರಿ ನೆನಪು

ಸೆಪ್ಟೆಂಬರ್ 28 ರಂದು, ನವದೆಹಲಿಯ ತಲ್ಕಟೊರ ಸ್ಟೇಡಿಯಂ ಕಿಕ್ಕಿರಿದು ತುಂಬಿತ್ತು. ತಮ್ಮ ನಲ್ಮೆಯ ನಾಯಕ ಕಾಮ್ರೇಡ್ ಸೀತಾರಾಂ ಯೆಚೂರಿಯವರ ಸ್ಮರಣಾರ್ಥ ಸಭೆಯಲ್ಲಿ ಭಾಗವಹಿಸಲು ಸಾವಿರಾರು ಮಂದಿ ಸೇರಿದ್ದರು. ಅವರು ನಿಜವಾಗಿಯೂ ಇನ್ನಿಲ್ಲವೇ ಎಂಬ ಸಂದೇಹ ಬಹಳಷ್ಟು ಮಂದಿಯ ಮುಖಗಳಲ್ಲಿ ಕಾಣುತ್ತಿತ್ತು.

ಜನಂ (ಜನನಾಟ್ಯ ಮಂಚ್) ಮತ್ತು ಪರ್ಚಂನ ನಾಲ್ಕು ಕ್ರಾಂತಿ ಹಾಡುಗಳೊಂದಿಗೆ ಸಭೆ ಆರಂಭವಾಯಿತು. ಅವುಗಳಲ್ಲಿ ಪ್ರಮುಖವಾದ್ದು ಯೆಚೂರಿಯವರ ಬಹುಮೆಚ್ಚಿನ ಹಾಡು:

"ತೂ ಜಿಂದಾ ಹೈ ತೋ, ಜಿಂದಗಿ ಕಿ ಜೀತ್ ಮೇ ಯಕೀನ್ ಕರ್,

ಅಗರ್ ಕಹೀಂ ಹೈ ಸ್ವರ್ಗ ತೋ, ಉತಾರ್‌ಲಾ ಜಮೀನ್ ಪರ್"

(ನೀನು ಜೀವಂತವಾಗಿದ್ದರೆ, ಜೀವನದ ವಿಜಯವನ್ನು ನಂಬು; ಸ್ವರ್ಗ ಎಂಬುದಿದ್ದರೆ, ಅದನ್ನ ಭೂಮಿಗೆಳೆದು ತಾ).

ಯೆಚೂರಿಯವರ ಬದುಕಿನ ವಿವಿಧ ಆಯಾಮಗಳನ್ನು ಬಿಂಬಿಸುವ ಬೃಹತ್ ಪರದೆಯ ಹಿನ್ನೆಲೆಯಿದ್ದ ವೇದಿಕೆಯ ಮೇಲೆ ಸಿಪಿಐ(ಎಂ) ಪೊಲಿಟ್‌ಬ್ಯುರೊದ ಸದಸ್ಯರಲ್ಲದೆ, ವಿವಿಧ ಎಡ, ಜಾತ್ಯತೀತ, ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಮುಖಂಡರು, ಹಾಗೆಯೇ ಅನೇಕ ಪ್ರಸಿದ್ಧ ಸಾರ್ವಜನಿಕ ವ್ಯಕ್ತಿಗಳು ಇದ್ದರು.

ಯೆಚೂರಿಯವರ ಅರ್ಧಶತಮಾನದ ಒಡನಾಡಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಅಧ್ಯಕ್ಷತೆ ವಹಿಸಿದ್ದರು.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್, ಭಾರವಾದ ಹೃದಯದಿಂದ, ಸಂತಾಪ ನಿರ್ಣಯವನ್ನು ಮಂಡಿಸಿದರು. ನಂತರ ಸಭೆ ಮೌನ ಶ್ರದ್ಧಾಂಜಲಿ ಅರ್ಪಿಸಿತು.


ಪ್ರಕಾಶ್ ಕಾರಟ್‌ರವರ ದನಿ ಗದ್ಗದಿತವಾಗಿತ್ತು, ಯೆಚೂರಿಯವರ ಬಗ್ಗೆ ಭೂತಕಾಲದಲ್ಲಿ ಮಾತಾಡಬೇಕಾಗಿರುವ ಬಗ್ಗೆ ದುಃಖ ವ್ಯಕ್ತಪಡಿಸುತ್ತ ಅವರು 32 ವರ್ಷಗಳ ಕಾಲ ಅವರೊಂದಿಗೆ ಪೊಲಿಟ್‌ಬ್ಯುರೊದಲ್ಲಿ ಕೆಲಸ ಮಾಡಿದ್ದನ್ನು ಸ್ಮರಿಸಿ ಕೊಂಡರು. ತಮ್ಮ ಎಲ್ಲ ಭಾಷಣಗಳು, ಲೇಖನಗಳಲ್ಲಿ ಒಂದು ಉತ್ತಮ ಭಾರತ ನಿರ್ಮಿಸಲು ಕರೆ ನೀಡುತ್ತಿದ್ದ "ಸೀತಾರಾಮ್ ತನ್ನ ಕೊನೆಯುಸಿರಿನ ವರೆಗೆ ಒಂದು ಉತ್ತಮ ಭಾರತಕ್ಕಾಗಿ ಅವಿರತವಾಗಿ ಹೋರಾಡಿದರು" ಎಂದರು.

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಯೆಚೂರಿ ಅವರನ್ನು ತನ್ನ ಗೆಳೆಯ ಎಂದು ನೆನಪಿಸಿಕೊಂಡರು. "ನನ್ನ ರಾಜಕೀಯ ಪ್ರಯಾಣದ ಆರಂಭದಿಂದಲೂ, ನಾನವರನ್ನು ಗಮನಿಸಿದ್ದೇನೆ ಮತ್ತು ಹತ್ತಿರದಿಂದ ಅರ್ಥಮಾಡಿಕೊಂಡಿದ್ದೇನೆ. ಅವರು ಸೈದ್ಧಾಂತಿಕವಾಗಿ ವಿರುದ್ಧವಾದ ಪಾಳೆಯದಿಂದ ಬಂದಿದ್ದರೂ, ನಾವು ಎಲ್ಲಿಂದ ಬಂದಿದ್ದೇವೆ ಎಂದು ಅರ್ಥಮಾಡಿಕೊಂಡು, ಅವರ ಕಣ್ಣೋಟವನ್ನೂ ಅರ್ಥಮಾಡಿಕೊಳ್ಳಲು ಅವಕಾಶ ನೀಡುತ್ತಿದ್ದರು. ಅವರು ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷ ಮತ್ತು ಇಂಡಿಯಾ ಬ್ಲಾಕ್‌ನ ಇತರ ಪಕ್ಷಗಳ ನಡುವೆ ಸೇತುವೆಯಾಗಿದ್ದರು" ಎಂದ ಅವರು ಇಂಡಿಯಾ ಮೈತ್ರಿಯನ್ನು ಮತ್ತು ಈ ಮೊದಲು ಯುಪಿಎ ಮೈತ್ರಿಯನ್ನು ಬೆಸೆದ ವ್ಯಕ್ತಿ ಅವರು ಎಂದರು. ಮುಂದುವರೆದು, ದೇಶಕ್ಕೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಒಂದು ಅಪಾಯ ಎಂದು ಹೇಳುತ್ತಿದ್ದ ಅವರಿಗೆ, ಅವುಗಳ ಕುರಿತ ನಿಲುವಿನಲ್ಲಿ ಅವರಲ್ಲಿ ತುಂಬಾ ಸ್ಪಷ್ಟತೆ ಇತ್ತು ಎಂದು ರಾಹುಲ್ ಗಾಂಧಿ ಹೇಳಿದರು.

ಯೆಚೂರಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಇಂಡಿಯಾ ಮೈತ್ರಿಗೆ ಅವರ ಕೊಡುಗೆ ಅಪಾರ. ಮನರೇಗ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ಯೆಚೂರಿಯವರ ಪ್ರಯತ್ನಗಳನ್ನು ಒತ್ತಿ ಹೇಳಿದ ಖರ್ಗೆ, ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿತ್ತು, ಬಡವರ ಒಳಿತಿಗಾಗಿ ದುಡಿದರು ಎಂದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ನ್ಯಾಷನಲ್ ಕಾನ್ಫರೆನ್ಸಿನ ಮುಖಂಡ ಫಾರುಕ್ ಅಬ್ದುಲ್ಲ, ಅದರ ನಡುವೆಯೇ ಈ ಸಭೆಯಲ್ಲಿ ಭಾಗವಹಿಸಲೆಂದೇ ಆಗಮಿಸಿದ್ದರು. ಯೆಚೂರಿಯವರು ಸದಾ ಭಾರತವನ್ನು ಒಂದಾಗಿಡಲು, ಸುರಕ್ಷಿತವಾಗಿಡಲು ಕೆಲಸ ಮಾಡಿದವರು, "ಶತ್ರುಗಳನ್ನೂ ಅವರು ಪ್ರೀತಿಯಿಂದ ಭೇಟಿಯಾಗುತ್ತಿದ್ದರು" ಎಂದರು.

ಡಿಎಂಕೆ ಸಂಸದೆ ಕನಿಮೊಳಿ, ರಾಜ್ಯಸಭೆಯಲ್ಲಿ ಜತೆಗಿದ್ದಾಗ ಯೆಚೂರಿಯವರ ಸಹಕಾರ, ಕೊಡುಗೆಗಳು, ಮತ್ತು ಮಾರ್ಗದರ್ಶನವನ್ನು ನೆನಪಿಸಿಕೊಂಡರು. ತಮ್ಮ ತಂದೆ ಕರುಣಾನಿಧಿಯವರೊಂದಿಗೆ ಅವರ ಆಳವಾದ ಬಂಧವನ್ನು ನೆನಪಿಸಿಕೊಳ್ಳುತ್ತ, ಕೊಯಮತ್ತೂರಿನಲ್ಲಿ ವಿಶ್ವ ತಮಿಳು ಸಮ್ಮೇಳನದಲ್ಲಿ ಯೆಚೂರಿಯವರು ಭಾಗವಹಿಸಿ, ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಅವರ ಒಳನೋಟಗಳಿಂದ ತುಂಬಿದ ಮಾತುಗಳನ್ನು ಜನ ಕೇಳುವಂತೆ ಮಾಡಬೇಕೆಂದು ವಿಶೇಷ ಮುತುವರ್ಜಿ ವಹಿಸಿದರು ಎಂಬುದನ್ನು ಸ್ಮರಿಸಿಕೊಂಡರು.



ಕಾಮ್ರೇಡ್ ಸೀತಾರಾಮ್ ರವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಬದಲಾಗುತ್ತಿರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ಪಕ್ಷದ ರಾಜಕೀಯ ಮತ್ತು ಕಾರ್ಯವ್ಯೂಹವನ್ನು ರೂಪಿಸುವಲ್ಲಿ ಅವರು ನೇತೃತ್ವದ ಪಾತ್ರ ವಹಿಸಿದರು ಎಂದರು. ಅಸಾಧಾರಣ ಓದಿನ, ಬಹುಭಾಷಾ ಪ್ರವೀಣರಾಗಿದ್ದ ಅವರ ಭಾರತೀಯ ಇತಿಹಾಸ, ಸಮಾಜ, ಸಂಸ್ಕೃತಿ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಆಳವಾದ ತಿಳುವಳಿಕೆ ಅವರನ್ನೊಬ್ಬ ಮೌಲ್ಯಯುತ ಮುಖಂಡನನ್ನಾಗಿಸಿದವು ಎನ್ನುತ್ತ, "ಅವರೊಬ್ಬ 'ಜನರ ಸಂಸದ', ಬಡವರು ಮತ್ತು ಕಾರ್ಮಿಕ ವರ್ಗದ ಮೇಲೆ ಪರಿಣಾಮ ಬೀರುವ ಪ್ರಶ್ನೆಗಳನ್ನು ನಿರಂತರವಾಗಿ ಎತ್ತಿದವರು, ಭಾರತೀಯ ಪ್ರಜಾಪ್ರಭುತ್ವದ ಉಳಿವಿಗಾಗಿ, ಅದರ ಜಾತ್ಯತೀತ ಮತ್ತು ಒಕ್ಕೂಟ ಸ್ವರೂಪವನ್ನು ಕಾಪಾಡಿಕೊಳ್ಳಬೇಕು ಎಂಬುದು ಯೆಚೂರಿಗೆ ಚೆನ್ನಾಗಿ ಗೊತ್ತಿತ್ತು" ಎಂದು ವಿಜಯನ್ ಹೇಳಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ, ವಿದ್ಯಾರ್ಥಿ ದೆಸೆಯಿಂದ ಹಿಡಿದು, ಯುಪಿಎ ರಚನೆ, ಅದರ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಸೃಷ್ಟಿ ಮತ್ತು ನಂತರ, ಸಮನ್ವಯ ಸಮಿತಿಯಲ್ಲಿ ಒಟ್ಟಿಗೆ ಕೆಲಸ ಮಾಡಿದ್ದರ ಬಗ್ಗೆ, ಎರಡು ಎಡ ಪಕ್ಷಗಳ ಪ್ರಧಾನ ಕಾರ್ಯದರ್ಶಿಗಳಾಗಿ ಎಡ ಐಕ್ಯತೆಯನ್ನು ಬಲಪಡಿಸುವ ಪ್ರಯತ್ನಗಳ ಬಗ್ಗೆ ಹೇಳಿದರು. "ಒಬ್ಬ ವ್ಯಕ್ತಿ ಆತ ಬಿಟ್ಟು ಹೋಗುವ ಪರಂಪರೆಗಾಗಿ ಸದಾ ನೆನಪಿನಲ್ಲಿ ಇರುತ್ತಾರೆ" ಎಂಬ ತಮಿಳು ಕವಿ ತಿರುವಳ್ಳುವರ್ ಉಕ್ತಿಯನ್ನು ಉಲ್ಲೇಖಿಸುತ್ತ, ಯೆಚೂರಿ ಒಂದು ಬಹುಶ್ರೀಮಂತ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ ಎಂದರು.

ಆರ್‌ಜೆಡಿ ನಾಯಕ ಮತ್ತು ಸಂಸದ ಮನೋಜ್ ಝಾ ಸಭೆಯನ್ನುದ್ದೇಶಿಸಿ ಬಹಳ ಭಾವುಕರಾಗಿ ಮಾತನಾಡಿದರು. ಚುನಾವಣೆಯ ನಂತರ ಭೇಟಿಯಾದಾಗ, ಯೆಚೂರಿ "ನಾವು ಚುನಾವಣೆಯಲ್ಲಿ ಸೋತಿರಬಹುದು, ಆದರೆ ನಮ್ಮ ಚೈತನ್ಯವನ್ನು ಕಳೆದುಕೊಂಡಿಲ್ಲ" ಎಂದು ಹುರಿದುಂಬಿಸಿದ್ದನ್ನು ನೆನಪಿಸಿಕೊಂಡರು.

ಸಮಾಜವಾದಿ ಪಕ್ಷದ ನಾಯಕ ಮತ್ತು ರಾಜ್ಯಸಭಾ ಸಂಸದ ರಾಮಗೋಪಾಲ್ ಯಾದವ್ ತಾವು ರಾಜ್ಯಸಭೆಯಲ್ಲಿ ಒಟ್ಟಿಗೆ ಕುಳಿತುಕೊಳ್ಳುತ್ತಿದ್ದುದನ್ನು ನೆನಪಿಸಿಕೊಳ್ಳುತ್ತ ತನ್ನ ಅಭಿಪ್ರಾಯದ ಬಗ್ಗೆ ಇತರರಿಗೆ ಮನವರಿಕೆಯಾಗುವಂತೆ ಮಾಡುವ ವಿಶೇಷ ಸಾಮರ್ಥ್ಯವನ್ನು ಅವರು ಹೊಂದಿದ್ದರು ಎಂದರು. 'ಕಮ್ಯೂನಿಸ್ಟ್ ನಾಯಕರಿಂದ ಕಲಿಯಬೇಕಾದ್ದು ಬಹಳ ಇದೆ' ಎಂದ ಅವರು ತಮ್ಮ ಆಂದೋಲನವನ್ನು ಎಂದೂ ದುರ್ಬಲಗೊಳ್ಳಲು ಬಿಡಬೇಡಿ ಎಂದು ಆಗ್ರಹಪಡಿಸಿದರು. ವಯಸ್ಸಿನಲ್ಲಿ ಯೆಚೂರಿಗಿಂತ ಹಿರಿಯರಾಗಿರುವ ಯಾದವ್ "ಹಿರಿ ವಯಸ್ಸಿನ ಒಬ್ಬ ತನಗಿಂತ ಕಿರಿ ವಯಸ್ಸಿನ ವ್ಯಕ್ತಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾಗಿ ಬಂದಿರುವುದು ದುರದೃಷ್ಟಕರ" ಎಂದು ದುಃಖ ವ್ಯಕ್ತಪಡಿಸಿದರು.

ಎನ್‌ಸಿಪಿ (ಶರದ್ ಪವಾರ್) ರಾಷ್ಟ್ರೀಯ ಕಾರ್ಯಾಧ್ಯಕರು ಮತ್ತು ರಾಜ್ಯಸಭೆ ಸಂಸದೆ ಸುಪ್ರಿಯಾ ಸುಳೆ ಶ್ರದ್ಧಾಂಜಲಿ ಅರ್ಪಿಸುತ್ತ, ಯೆಚೂರಿ ಸೈದ್ಧಾಂತಿಕವಾಗಿ ಗಟ್ಟಿಯಾಗಿರುತ್ತಲೇ, ಬೇರೆಯವರು ಸಿಕ್ಕಿಕೊಂಡಿರುತ್ತಿದ್ದ ಪ್ರಶ್ನೆಗಳಿಗೆ ಸದಾ ಪರಿಹಾರಗಳನ್ನು ಕಂಡುಕೊಳ್ಳುತ್ತಿದ್ದರು, ಕ್ಲಿಷ್ಟ ಪ್ರಶ್ನೆಗಳಿದ್ದಾಗ ಪ್ರತಿಯೊಬ್ಬರೂ ಯೆಚೂರಿಯವರ ಬಗ್ಗೆ ಯೋಚಿಸುತ್ತಿದ್ದರು ಎಂದರು.

ಯೆಚೂರಿ ಜೊತೆಗಿನ ಒಡನಾಟವನ್ನು ನೆನಪಿಸಿಕೊಳ್ಳುತ್ತ ದಿಲ್ಲಿಯ ಎಎಪಿ ನಾಯಕ ಮತ್ತು ದಿಲ್ಲಿ ಸರಕಾರದ ಸಚಿವ ಗೋಪಾಲ್ ರೈ ಅವರು 'ಅರವಿಂದ್ ಕೇಜ್ರಿವಾಲ್‌ರನ್ನು ಬಂಧಿಸಿದಾಗ ಆ ಸಮಯದಲ್ಲಿ ನೆನಪಾದ ವ್ಯಕ್ತಿ ಯೆಚೂರಿ, ಅವರನ್ನು ಭೇಟಿಯಾದಾಗ ಹೋರಾಟ ಮಾಡೋಣ, ಪ್ರತಿಯೊಬ್ಬರನ್ನು ಒಟ್ಟುಗೂಡಿಸೋಣ ಎಂದು ಹುರಿದುಂಬಿಸಿದರು, ಅದರಂತೆಯೇ ಪ್ರತಿಯೊಬ್ಬರನ್ನೂ ಸಮರಕ್ಕೆ ಒಂದುಗೂಡಿಸಿದರು' ಎಂದರು. ಅವರು ಕೇಜ್ರಿವಾಲ್ ರವರ ಸಂತಾಪ ಸಂದೇಶವನ್ನು ಓದಿ ಹೇಳಿದರು.

ಸಿಪಿಐ(ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ ಭಟ್ಟಾಚಾರ್ಯ ಮಾತನಾಡುತ್ತ, ಯೆಚೂರಿಯವರ ನಗುವ ಮುಖ ಇನ್ನು ಮುಂದೆ ನಮ್ಮ ನಡುವೆ ಇರುವುದಿಲ್ಲ ಎಂದು ನಂಬಲು ಸಾಧ್ಯವಾಗುತ್ತಿಲ್ಲ ಎಂದರು. ಭಾರತೀಯ ಸಂವಿಧಾನದ ವಿರುದ್ಧ ಒಂದು ಯುದ್ಧ ನಡೆಯುತ್ತಿದೆ, ಅದನ್ನು ಉಳಿಸಿಕೊಳ್ಳಲು ಎಲ್ಲರೂ ಒಟ್ಟಾಗಿ ಹೋರಾಡಬೇಕು ಎಂಬ ಯೆಚೂರಿಯವರ ನಂಬಿಕೆಯನ್ನು ಒತ್ತಿ ಹೇಳಿದರು.

ಜಾರ್ಖಂಡ್ ಮುಕ್ತಿ ಮೋರ್ಚಾ ನಾಯಕಿ ಮತ್ತು ಸಂಸದೆ ಮಹುವಾ ಮಾಜಿ ಅವರು ಯೆಚೂರಿಯವರನ್ನು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುತ್ತ, ಅವರೊಂದಿಗೆ ಕೆಲಸ ಮಾಡಿದ ಅನಿಸಿಕೆಗಳನ್ನು ಹಂಚಿಕೊಂಡರು, ಯೆಚೂರಿ ಹೇಗೆ ತಮ್ಮ ಪಕ್ಷದ ಹೋರಾಟಗಳನ್ನು ಬೆಂಬಲಿಸಿದರು ಎಂದು ನೆನಪಿಸಿಕೊಂಡರು.

ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ, ಬಿಜೆಪಿ ಮತ್ತು ಆರೆಸ್ಸೆಸ್ ವಿರುದ್ಧ ಹೋರಾಟದಲ್ಲಿ ಎಲ್ಲ ಎಡಪಕ್ಷಗಳನ್ನು ಇತರ ಜಾತ್ಯತೀತ ಪಕ್ಷಗಳೊಂದಿಗೆ ಒಂದುಗೂಡಿಸಿದರು ಎಂಬುದನ್ನು ನೆನಪಿಸಿಕೊಂಡರು.

ಫಾರ್ವರ್ಡ್ ಬ್ಲಾಕ್ ಮುಖಂಡ ದೇವರಾಜನ್ ಅವರು ಮಾತನಾಡಿ, ಯೆಚೂರಿಯವರ ಬರಹಗಳು ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರದ ಹತಾಶೆಯ ಸಮಯದಲ್ಲಿ ಮತ್ತು ನಂತರ ಹಿಂದುತ್ವ ಸಿದ್ಧಾಂತವನ್ನು ಬಯಲಿಗೆಳೆಯುವಲ್ಲಿ ಎಡಪಂಥೀಯರಿಗೆ ಸ್ಫೂರ್ತಿದಾಯಕವಾಗಿರುತ್ತಿದ್ದವು ಎಂದರು.

ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ನಿವೃತ್ತ ಜೆಎನ್‌ಯು ಪ್ರಾಧ್ಯಾಪಕ ಪ್ರಭಾತ್ ಪಟ್ನಾಯಕ್ ಅವರು, ಜೆಎನ್‌ಯುನಲ್ಲಿ ಅರ್ಥಶಾಸ್ತ್ರ ವಿದ್ಯಾರ್ಥಿಯಾಗಿ ಯೆಚೂರಿ ಅವರ ದಿನಗಳನ್ನು ಮೆಲುಕು ಹಾಕಿದರು. ಜೆಎನ್‌ಯುನ ಆರಂಭಿಕ ಬ್ಯಾಚ್‌ಗಳಲ್ಲಿ ಅವರೊಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು ಎಂದರು.

ಹಿರಿಯ ಪತ್ರಕರ್ತ ಮತ್ತು 'ದಿ ಹಿಂದೂ' ದೈನಿಕದ ಮಾಜಿ ಸಂಪಾದಕ ಎನ್ ರಾಮ್ ಯೆಚೂರಿಯವರೊಂದಿಗೆ ತಮ್ಮ ಐವತ್ತು ವರ್ಷಗಳ ಗೆಳೆತನವನ್ನು ನೆನಪಿಸಿಕೊಳ್ಳುತ್ತ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಯೆಚೂರಿಯವರ ನಿರಂತರ ಹೋರಾಟ ಮತ್ತು ಮಾಧ್ಯಮಗಳ ಮೇಲಿನ ದಾಳಿಗೆ ಅವರ ಪ್ರತಿರೋಧದ ಬಗ್ಗೆ ಒತ್ತಿ ಹೇಳಿದರು.

ಖ್ಯಾತ ಪತ್ರಕರ್ತೆ ಮತ್ತು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್, ಶ್ರದ್ಧಾಂಜಲಿ ಅರ್ಪಿಸುತ್ತ, 2002ರ ಗುಜರಾತ್ ಗಲಭೆಗಳ ವೇಳೆಯಲ್ಲಿ ಆ ಉದ್ವೇಗಭರಿತ ಪ್ರದೇಶದಲ್ಲಿ ಕಾಲಿಟ್ಟ ಮತ್ತು ನ್ಯಾಯವನ್ನು ಆಗ್ರಹಿಸಿದ ಮೊದಲ ವ್ಯಕ್ತಿ ಅವರು ಎಂದರು.

ಅಗಲಿದ ಸಂಗಾತಿಗೆ ಶ್ರದ್ಧಾಂಜಲಿಯಾಗಿ ಒಂದು ಉತ್ತಮ ಮತ್ತು ನ್ಯಾಯಯುತ ಸಮಾಜಕ್ಕಾಗಿ ಹೋರಾಟವನ್ನು ಮುಂದುವರೆಸುವ ಪ್ರತಿಜ್ಞೆಯೊಂದಿಗೆ ಸಂಸ್ಮರಣಾ ಸಭೆ ಮುಕ್ತಾಯವಾಯಿತು.

ದ್ವೇಷ ರಾಜಕಾರಣಕ್ಕೆ ಪಾಠ ಕಲಿಸುವರೆ ಕಣಿವೆಯ ಜನ

ಕಣಿವೆ ರಾಜ್ಯ ಜಮ್ಮು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ಮುಕ್ತಾಯವಾಗಿದೆ. ಒಟ್ಟು ಮೂರು ಹಂತದಲ್ಲಿ ನಡೆದ ಚುನಾವಣೆಯೂ ಶಾಂತಿಯುತವಾಗಿಯೂ, ಉತ್ಸಾಹದಾಯಕವಾಗಿಯೂ ನಡೆಯುವ ಮೂಲಕ ಸಾಂವಿಧಾನಿಕ ಮೌಲ್ಯಗಳೇ ಕಾಶ್ಮೀರದಲ್ಲಿನ ಜನತೆಯ ಹಕ್ಕುಗಳನ್ನು ರಕ್ಷಿಸುವಲ್ಲಿ ಪ್ರಮುಖಪಾತ್ರ ವಹಿಸಲಿದೆ ಎಂಬುದನ್ನು ಈ ಚುನಾವಣೆ ತೋರಲಿದೆ.

ಗುರುರಾಜ ದೇಸಾಯಿ

2019ರ ಆಗಸ್ಟ್ ನಲ್ಲಿ, ಸಂವಿಧಾನದ 370ನೇ ವಿಧಿ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ ರದ್ದುಪಡಿಸಿದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಮೂರು ಹಂತಗಳಲ್ಲಿ ನಡೆದ ಮತದಾನ ಬಹುತೇಕ ಶಾಂತಿಯುತವಾಗಿ ಮುಗಿದಿದ್ದು, ಒಟ್ಟಾರೆ ಶೇಕಡಾ 63.88 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗದ ಅಂಕಿ– ಅಂಶಗಳು ತಿಳಿಸಿವೆ. ಸೆಪ್ಟೆಂಬರ್ 18 ರಂದು ನಡೆದ ಮೊದಲ ಹಂತದಲ್ಲಿ ಶೇ.61.38 ಹಾಗೂ ಸೆಪ್ಟೆಂಬರ್ 25 ರಂದು ನಡೆದ ಎರಡನೇ ಹಂತದಲ್ಲಿ ಶೇ.57.31ರಷ್ಟು ಮತದಾನವಾಗಿತ್ತು. ಅಕ್ಟೋಬರ್ 1 ರಂದು ನಡೆದ ಮೂರನೇ ಮತ್ತು ಅಂತಿಮ ಹಂತದ ಚುನಾವಣೆಯಲ್ಲಿ ಶೇ. 69.65ರಷ್ಟು ಮತದಾನವಾಗಿದೆ. ಒಟ್ಟಾರೆ ಶೇ.63.88ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕೇಂದ್ರ ಸರ್ಕಾರ, ಜಮ್ಮು ಮತ್ತು ಕಾಶ್ಮೀರಕ್ಕಿದ್ದ ರಾಜ್ಯದ ವಿಶೇಷ ಸ್ಥಾನಮಾನ ತೆಗೆದುಹಾಕಿ ಅದನ್ನು ವಿಧಾನಸಭೆಯುಳ್ಳ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿತು. ಅದರ ಭಾಗವಾಗಿದ್ದ ಲಡಾಖ್ ಅನ್ನೂ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿತು.

ಸದ್ಯದ ಮಟ್ಟಿಗೆ ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶವಾಗಿದ್ದರೂ ವಿಧಾನಸಭೆ ಹೊಂದುವ ಅವಕಾಶ ಹೊಂದಿದೆ. ಆದರೆ, ಲಡಾಖ್‌ಗೆ ಆ ಸೌಲಭ್ಯ ಇಲ್ಲ. ಲಡಾಖ್ ನಲ್ಲಿ ಸ್ಥಳೀಯ ಸ್ವಾಯತ್ತ ಸಂಸ್ಥೆಗಳು ಕೇಂದ್ರ ಸರ್ಕಾರದ ಕಣ್ಗಾವಲಿನಲ್ಲಿ ಕೆಲಸ ಮಾಡಬೇಕಿದೆ. ಆರ್ಟಿಕಲ್ 370 ರದ್ದತಿ ಬಳಿಕ ಜಮ್ಮು ಮತ್ತು ಕಾಶ್ಮೀರದಲ್ಲಿ ತ್ವರಿತವಾಗಿ ಚುನಾವಣೆ ನಡೆಸಬೇಕೆಂದು ಕಾಂಗ್ರೆಸ್, ಪಿಡಿಪಿ, ಎನ್.ಸಿ., ಸಿಪಿಐ(ಎಂ) ಸೇರಿದಂತೆ ವಿವಿಧ ಪಕ್ಷಗಳು ಹಾಗೂ ವಿವಿಧ ವಲಯಗಳು ಆಗ್ರಹಿಸುತ್ತಾ ಬಂದಿದ್ದವು.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೊನೆಯ ಬಾರಿಗೆ ವಿಧಾನಸಭೆ ಚುನಾವಣೆ ನಡೆದಿದ್ದು 2014ರಲ್ಲಿ. ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ), 28 ಸ್ಥಾನಗಳಲ್ಲಿ ಜಯಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ನಂತರ 25 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚನೆ ಮಾಡಿತ್ತು. ಪಿಡಿಪಿ ನಾಯಕ ಮುಫ್ತಿ ಮಹಮ್ಮದ್ ಸಯೀದ್ ಮುಖ್ಯಮಂತ್ರಿ ಆಗಿದ್ದರು. ಅವರು 2015ರಲ್ಲಿ ನಿಧನರಾದ ನಂತರ ಅವರ ಮಗಳು ಮೆಹಬೂಬ ಮುಫ್ತಿ ಮುಖ್ಯಮಂತ್ರಿ ಗಾದಿಗೇರಿದ್ದರು. 2018ರಲ್ಲಿ ಬಿಜೆಪಿಯು ಪಿಡಿಪಿಗೆ ನೀಡಿದ್ದ ಬೆಂಬಲ ವಾಪಸ್ ಪಡೆಯುವುದರೊಂದಿಗೆ ಸರ್ಕಾರ ಪತನಗೊಂಡಿತ್ತು. ಅಂದಿನಿಂದಲೂ ಚುನಾಯಿತ ಸರ್ಕಾರ ಅಲ್ಲಿ ಇರಲಿಲ್ಲ. 2024ರ ಸೆಪ್ಟೆಂಬರ್ 30 ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ ನಂತರ ಅಲ್ಲಿ ಚುನಾವಣೆ ನಡೆಯುತ್ತಿದೆ.

ಹಿಂದಿನ ಚುನಾವಣೆಯ ಲೆಕ್ಕಾಚಾರ

2014 ರಲ್ಲಿ ನಡೆದ ಚುನಾವಣೆಯಲ್ಲಿ ಪಿಡಿಪಿ ಪಕ್ಷ 84 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇ.22.67 ಮತಗಳೊಂದಿಗೆ 28 ಸ್ಥಾನಗಳನ್ನು ಪಡೆದಿತ್ತು. ಬಿಜೆಪಿ 75 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇ.22.98 ಮತಗಳನ್ನು ಪಡೆದು 25 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು 85 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇ.20.77 ಮತಗಳನ್ನು ಪಡೆದು 15 ಸೀಟುಗಳಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ ಪಕ್ಷವು 86 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇ.18.01 ಮತಗಳನ್ನು ಪಡೆದು 12 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಸಿಪಿಐ(ಎಂ) 3 ಸ್ಥಾನಗಳಲ್ಲಿ ಸ್ಪರ್ಧಿಸಿ, ಶೇ.1 ಮತ ಮತಗಳನ್ನು ಪಡೆದು ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿತ್ತು.

2008 ರಲ್ಲಿ ನಡೆದ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು 28 ಸ್ಥಾನಗಳನ್ನು ಪಡೆದಿತ್ತು, ಪಿಡಿಪಿ21 ರಲ್ಲಿ ಗೆದ್ದರೆ, ಬಿಜೆಪಿ 11 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ 12 ಸ್ಥಾನಗಳಲ್ಲಿ, ಸಿಪಿಐ(ಎಂ) ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಓಮರ್ ಅಬ್ದುಲ್ಲಾ ಮುಖ್ಯಮಂತ್ರಿಯಾದರು.

ಲೋಕಸಭಾ ಚುನಾವಣೆಯ ಅಂಕಿಅಂಶಗಳನ್ನು ನೋಡುವುದಾದರೆ 2019 ರಲ್ಲಿ ಐದು ಕ್ಷೇತ್ರಗಳ ಪೈಕಿ ಬಿಜೆಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ತಲಾ ಎರಡು ಸ್ಥಾನಗಳನ್ನು ಗೆದ್ದಿದ್ದರೆ, ಒಂದು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.



3 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ, ಶೇ.24.36 ಮತ ಗಳಿಕೆಯ ಮೂಲಕ ಜಮ್ಮು ಭಾಗದಲ್ಲಿರುವ ಉಧಂಪುರ ಮತ್ತು ಜಮ್ಮು ಕ್ಷೇತ್ರದಲ್ಲಿ ಗೆಲುವು ಸಾಧಿಸಿತ್ತು. ನ್ಯಾಷನಲ್ ಕಾನ್ಫರೆನ್ಸ್ 3 ರಲ್ಲಿ ಸ್ಪರ್ಧಿಸಿ ಶೇ.22.3 ಮತ ಗಳಿಕೆಯ ಮೂಲಕ ಕಾಶ್ಮೀರ ವಿಭಾಗದಲ್ಲಿ ಬರುವ ಶ್ರೀನಗರ, ಅನಂತನಾಗ್ ರಾಜೌರೀ ಕ್ಷೇತ್ರಗಳನ್ನು ನ್ಯಾಷನಲ್ ಕಾನ್ಫರೆನ್ಸ್ ತನ್ನದಾಗಿಸಿಕೊಂಡಿತ್ತು. ಬಾರಾಮುಲ್ಲಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿದ್ದ ಅಬ್ದುಲ್ ರಶೀದ್ ಶೇಖ್ ಅವರು ಜಯಭೇರಿ ಬಾರಿಸಿದ್ದರು. ಪಿಡಿಪಿ 3ರಲ್ಲಿ ಸ್ಪರ್ಧೆಸಿ ಶೇ.8.48 ಮತ ಗಳಿಸಿದ್ದರೆ, ಕಾಂಗ್ರೆಸ್ 2ರಲ್ಲಿ ಸ್ಪರ್ಧೆಸಿ ಶೇ.19.38 ಮತ ಪಡೆದಿತ್ತು. ಆದರೆ ಯಾವುದೆ ಸ್ಥಾನಗಳು ದೊರೆತಿರಲಿಲ್ಲ.

2019ರಲ್ಲಿ ಬಿಜೆಪಿ ಶೇ.46.24 ಮತಗಳೊಂದಿಗೆ 3 ಲೋಕಸಭಾ ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಶೇ.7.87 ರೊಂದಿಗೆ 2 ಸ್ಥಾನದಲ್ಲಿ ಗೆಲುವು ಸಾಧಿಸಿತು. ಕಾಂಗ್ರೆಸ್ ಶೇ.28.38, ಪಿಡಿಪಿ ಶೇ.3.38 ಮತ ಪಡೆದರೂ ಯಾವುದೇ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ.

ಪಕ್ಷಗಳ ಬಲಾಬಲ ಹೇಗಿದೆ?

ಒಟ್ಟು 90 ಕ್ಷೇತ್ರಗಳಲ್ಲಿ 22 ಸ್ಥಾನಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ಸುಲಭವಾಗಿ ಗೆಲ್ಲಲಿದೆ ಎಂದು ಹೇಳಲಾಗುತ್ತಿದೆ. ಈ 22 ಕ್ಷೇತ್ರಗಳಲ್ಲಿ ಕಳೆದು ಮೂರು ವರ್ಷಗಳಿಂದ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ಗೆಲ್ಲುತ್ತಿದೆ. ಅದೇ ರೀತಿ ಪಿಡಿಪಿ 21, ಕಾಂಗ್ರೆಸ್ ಮತ್ತು ಬಿಜೆಪಿ ತಲಾ 12 ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದೆ. ಸಿಪಿಐಎಂ 1 ಸ್ಥಾನವನ್ನು ಸುಲಭವಾಗಿ ಗೆಲ್ಲಲಿದೆ.

ಕಳೆದ ಮೂರು ಚುನಾವಣೆಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ 43 ಸ್ಥಾನಗಳಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ. ಪಿಡಿಪಿ 51, ಕಾಂಗ್ರೆಸ್ 52 ಮತ್ತು ಬಿಜೆಪಿ 61 ಸ್ಥಾನಗಳಲ್ಲಿ ಗೆಲುವು ಸಾಧಿಸಿಲ್ಲ. ಕಾಶ್ಮೀರದಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ಪ್ರಭಲವಾಗಿದ್ದರೆ, ಜಮ್ಮುವಿನಲ್ಲಿ ಬಿಜೆಪಿ ಪ್ರಭಲವಾಗಿದೆ. ಕಾಶ್ಮೀರದಲ್ಲಿ ಕಾಂಗ್ರೆಸ್ ಗೆಲುವು ಕ್ಷವಾಗಿದ್ದು, ಜಮ್ಮುವಿನಲ್ಲಿ 50:50 ಲೆಕ್ಕಾಚಾರದಲ್ಲಿ ಒಂದಿಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂದು ಹೇಳಲಾಗುತ್ತಿದೆ.

ಇಂಡಿಯಾ ಕೂಟ

ಇದೆಲ್ಲವನ್ನು ಅರ್ಥಮಾಡಿಕೊಂಡಿರುವ ವಿಪಕ್ಷಗಳ ಕೂಟ ಇಂಡಿಯಾ ಕೂಟ ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತಿದೆ. ಮೈತ್ರಿ ಒಪ್ಪಂದದ ಪ್ರಕಾರ ಕಾಂಗ್ರೆಸ್ 32 ಸ್ಥಾನಗಳಲ್ಲಿ ಸ್ಪರ್ಧಿಸಿದೆ. ಎನ್‌ಸಿ 51 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮತ್ತು ಪ್ಯಾಂಥರ್ಸ್ ಪಾರ್ಟಿ ತಲಾ ಒಂದು ಸ್ಥಾನಕ್ಕೆ ಸ್ಪರ್ಧಿಸಿವೆ.

ಕಾಶ್ಮೀರ ಕಣಿವೆಯಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಪ್ರಭಾವ ಮತ್ತು ಜಮ್ಮು ಪ್ರದೇಶದಲ್ಲಿ ಕಾಂಗ್ರೆಸ್ ಪ್ರಭಾವ ಒಟ್ಟು ಸೇರಿದರೆ 53 ಸ್ಥಾನಗಳಲ್ಲಿ ಗೆಲ್ಲಬಹುದು ಎಂದು ಹೇಳಲಾಗುತ್ತಿದೆ. ಹಾಗಾಗಿ ಇಂಡಿಯಾ ಕೂಟ ಒಟ್ಟಾರೆ 65ಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲಿದೆ ಎಂಬುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರವಾಗಿದೆ.

ಬಿಜೆಪಿ ಮತ್ತು ಮಿತ್ರಪಕ್ಷ ಗೆಲ್ಲಬಹುದೆ?

ಬಿಜೆಪಿ ಗೆಲ್ಲಬಹುದೇ? ಕ್ಷೇತ್ರ ವಿಂಗಡಣೆಯ ನಂತರ ಬಿಜೆಪಿ ಹೆಚ್ಚಿನ ಸ್ಥಾನ ಗೆಲ್ಲಬಹುದು ಎಂಬ ನಿರೀಕ್ಷೆಯಲ್ಲಿದೆ. ಆದರೆ ಅಂಕಿಅಂಶಗಳು ಬೇರೆಯದನ್ನೆ ಹೇಳುತ್ತವೆ. ಜಮ್ಮುವಿನಲ್ಲಿ ಬಿಜೆಪಿ ಪ್ರಭಲವಾಗಿದ್ದರೂ 43 ಸ್ಥಾನಗಳಲ್ಲಿ 12 ಸ್ಥಾನಗಳಲ್ಲಿ ಮಾತ್ರ ಗೆಲ್ಲಬಹುದು ಎಂದು ಹೇಳಲಾಗುತ್ತಿದೆ. ಕಾಶ್ಮೀರದಲ್ಲಿ ಸಣ್ಣ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಿದ್ದರೂ ಗೆಲುವು ಸಾಧ್ಯವಿಲ್ಲ ಎಂದು ಹೇಳಲಾಗುತ್ತಿದೆ.

ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಸಂಸದ ಅಬ್ದುಲ್ ರಶೀದ್ ಶೇಖ್ (ಎಂಜಿನಿಯರ್ ರಶೀದ್) ಬಿಜೆಪಿಗೆ ಬೆಂಬಲವನ್ನು ಸೂಚಿಸಿದ್ದಾರೆ. 370 ವಿಧಿ ವಾಪಸ್ಸಾತಿಯ ಬಗ್ಗೆ ಇವರು ಇಲ್ಲಿಯವರೆಗೆ ಸ್ಪಷ್ಟ ನಿಲುವನ್ನು ಹೊಂದಿಲ್ಲ. ಹಾಗಾಗಿ ಇವರ ಪ್ರಭಾವ ಬಿಜೆಪಿಗೆ ಹೆಚ್ಚು ಲಾಭವನ್ನು ತಂದು ಕೊಡುವುದಿಲ್ಲ ಎಂದು ಹೇಳಲಾಗುತ್ತಿದೆ.

ಅತಂತ್ರ ವಿಧಾನಸಭೆ ನಿರ್ಮಾಣ ಆಗಬೇಕು ಎಂದು ಬಿಜೆಪಿ ಬಯಸುತ್ತಿದೆ. ಆ ಕಾರಣಕ್ಕಾಗಿಯೇ ಕಾಶ್ಮೀರವನ್ನು ಆಕ್ರಮಿತ ಪ್ರದೇಶ ಎಂದು ಪದೇ ಪದೇ ಸುಳ್ಳು ಹೇಳುತ್ತಾ ಬರುತ್ತಲೇ ಇದೆ. ಜಮ್ಮು ಕಾಶ್ಮೀರದ ಸೌಹಾರ್ದತೆಯನ್ನು ಹಾಳು ಮಾಡಿ ಹಿಂದೂತ್ವದ ಅಜೆಂಡಾವನ್ನು ಜಾರಿ ಮಾಡಲು ಈ ಚುನಾವಣೆಯನ್ನು ಬಿಜೆಪಿ ಬಳಸಿಕೊಂಡಿದೆ ಎಂದು ರಾಜಕೀಯ ವಿಶ್ಲೇಷಕರು ಆರೋಪ ಮಾಡುತ್ತಿದ್ದಾರೆ.

ಸಿಪಿಐಎಂ ನಿರ್ಣಾಯಕ ಪಾತ್ರ

ಜಮ್ಮು ಕಾಶ್ಮೀರದ ಜನರ ಹಕ್ಕುಗಳನ್ನು ಕಾಪಾಡಲು ಸಿಪಿಐ(ಎಂ) ಮಹತ್ವದ ಪಾತ್ರವಹಿಸುತ್ತಿದೆ. 370ನೇ ವಿಧಿ ರದ್ದತಿ ವಿರುದ್ಧ ಇತ್ತೀಚೆಗೆ ನಿಧನರಾದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹಾಗೂ ಮಾಜಿ ಶಾಸಕ ಮೊಹಮ್ಮದ್ ಯುಸೂಫ್ ತರೀಗಾಮಿ ಮಹತ್ವದ ಹೋರಾಟ ನಡೆಸುತ್ತಾ ಬಂದಿದ್ದಾರೆ. ಅಲ್ಲಿ ಹೇರಿದ್ದ ನಿರ್ಬಂದಗಳ ವಿರುದ್ಧ ಕಾನೂನಾತ್ಮಕ ಹೋರಾಟಗಳನ್ನು ನಡೆಸಿದ್ದರು.

ಬಿಜೆಪಿಯ ಆಟವನ್ನು ಚನ್ನಾಗಿ ಅರಿತಿರುವ ಮೊಹಮ್ಮದ್ ಯುಸೂಫ್ ತರೀಗಾಮಿ, ಈ ಚುನಾವಣೆಯಲ್ಲಿ ಬಿಜೆಪಿಯ ವಿರುದ್ಧ ಮೈತ್ರಿಕೂಟವನ್ನು ರಚಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು.

ಬಿಜೆಪಿಯ ಹಿಂದುತ್ವ ಪ್ರಯೋಗ ಶಾಲೆ

ಜಮ್ಮು ಪ್ರದೇಶವು 'ದೇವಾಲಯಗಳ ನಗರ' ಎಂದೇ ಪ್ರಸಿದ್ಧವಾಗಿದೆ. ಅಯೋಧ್ಯೆಯಲ್ಲಿನ ರಾಮ ಮಂದಿರ ನಿರ್ಮಾಣವೇ ಜಮ್ಮು ಪ್ರದೇಶದ ಲೋಕಸಭಾ ಕ್ಷೇತ್ರಗಳ ಮುಖ್ಯ ಚುನಾವಣಾ ವಿಷಯವಾಗಿತ್ತು. ಜಮ್ಮುವಿನ ಎರಡು ಕ್ಷೇತ್ರಗಳಿಗೆ ಈಗಾಗಲೇ ಮತದಾನ ಮುಗಿದಿದೆ. ಬೀದಿ ಬೀದಿಗಳಲ್ಲಿ ರಾಮ ಮಂದಿರದ ವಿಚಾರಗಳನ್ನೇ ಇಟ್ಟುಕೊಂಡು ಬಿಜೆಪಿಯು ಮತಯಾಚನೆ ಮಾಡಿ ಅಲ್ಲಿ ಗೆಲುವು ಸಾಧಿಸಿತ್ತು.

ಮನೆಗಳಿಗೆ ಅಳವಡಿಸಲಾದ ಸ್ಮಾರ್ಟ್ ವಿದ್ಯುತ್ ಮೀಟರ್‌ನಲ್ಲಿನ ತಾಂತ್ರಿಕ ಸಮಸ್ಯೆಯು ಜನರನ್ನು ಹೈರಾಣು ಮಾಡಿತ್ತು. ದೊಡ್ಡ ಮೊತ್ತದ ಬಿಲ್‌ಗಳು ಜನರನ್ನು ಕಾಡಿದವು. ಇದಕ್ಕಾಗಿ ಜನರು ಬೀದಿಗಿಳಿದು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದ್ದರು. ಇದು ಚುನಾವಣೆಯ ಪ್ರಮುಖ ವಿಚಾರವಾಯಿತು. ಇದರ ಜೊತೆಯಲ್ಲಿಯೇ ನಿರುದ್ಯೋಗ ಸಮಸ್ಯೆಯು ತಾರಕಕ್ಕೇರಿತ್ತು. ಇದು ಕೂಡ ಪ್ರಮುಖ ವಿಷಯವಾಯಿತು. ಈ ವಿಚಾರಗಳನ್ನು ಮರೆಸಲು, ಬಿಜೆಪಿಯು ಹಿಂದುತ್ವದ ಮೊರೆ ಹೋಯಿತು. ಸುಳ್ಳು ಕಾರಣ ನೀಡಿ ಏಕಾಏಕಿ ಅಮರನಾಥ ಯಾತ್ರೆಯನ್ನು ನಿಲ್ಲಿಸಿ ಅದನ್ನು ಮುಸ್ಲಿಂರ ವಿರುದ್ಧ ತಿರುಗಿಸುವ ಪ್ರಯತ್ನ ಮಾಡಿತು.

ಕಾಶ್ಮೀರದ ಜನಸಂಖ್ಯಾ ರಚನೆಯನ್ನೇ ಬದಲಾವಣೆ ಮಾಡಲು ಈ ಚುನಾವಣೆಯನ್ನು ಬಿಜೆಪಿ ಬಳಸಿಕೊಂಡಿದೆ ಎಂಬ ಆರೋಪ ಕೇಳಿ ಬಂದಿದೆ. ಹಿಂದೂ ವಲಸಿಗರನ್ನು ಕರೆತಂದು ಇಲ್ಲಿ ನೆಲೆಸುವಂತೆ ಮಾಡುವ ಮೂಲಕ ಮುಸ್ಲಿಂರ ಜನಸಂಖ್ಯೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿದೆ. ಅದಕ್ಕಾಗಿ ಚುನಾವಣಾ ಆಯೋಗವನ್ನು ಬಳಸಿಕೊಂಡಿದೆ ಎಂದು ನ್ಯಾಶನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ ಆರೋಪಿಸಿದ್ದಾರೆ.

ಪ್ರಸ್ತುತತೆಗಾಗಿ ಹೋರಾಡುತ್ತಿರುವ ಪ್ರದೇಶ

ಜಮ್ಮು ಮತ್ತು ಕಾಶ್ಮೀರಕ್ಕೆ ರಾಜಕೀಯ

ಪುಟ 13 ಕ್ಕೆ



ಸಾಮ್ರಾಜ್ಯಶಾಹಿಯ ವಿರುದ್ಧ ಪಶ್ಚಿಮ ಆಫ್ರಿಕಾದ ಪ್ರತಿರೋಧ ಭಾರತ ಸರಕಾರ ಗಮನಿಸಬೇಕು

ಭಾರತದಲ್ಲಿ, ನಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ಯಶಸ್ವಿ ಹೋರಾಟದ ನಂತರ, "ಆರ್ಥಿಕ ನಿರ್ವಸಾಹತೀಕರಣ"ಕ್ಕಾಗಿ ನಡೆದ ಹೋರಾಟವು ಬಹುಶಃ ರಾಜಕೀಯ ನಿರ್ವಸಾಹತೀಕರಣದ ಹೋರಾಟಕ್ಕಿಂತಲೂ ಹೆಚ್ಚು ಪ್ರಯಾಸದಾಯಕವಾಗಿತ್ತು. ಸೋವಿಯತ್ ಒಕ್ಕೂಟದ ಸಹಾಯದಿಂದಾಗಿ ಈ ಹೋರಾಟವೂ ಯಶಸ್ವಿಯಾಯಿತು. ಆದರೆ ನವ-ಉದಾರವಾದವನ್ನು ಅಪ್ಪಿಕೊಳ್ಳುವ ಮೂಲಕ ನಾವು ಸಂಪಾದಿಸಿದ ಭಾಗ್ಯವನ್ನು ಮತ್ತೊಮ್ಮೆ ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದೇವೆ. ಅತ್ತ ಫ್ರೆಂಚ್ ವಸಾಹತುಗಳಾಗಿದ್ದ ಪಶ್ಚಿಮ ಆಫ್ರಿಕಾದ ನೈಜರ್, ಮಾಲಿ ಮತ್ತು ಬುರ್ಕಿನಾ ಫಾಸೊ, ಈ ಪ್ರತಿಯೊಂದೂ ದೇಶದಲ್ಲೂ ಇತ್ತೀಚೆಗೆ ಅಧಿಕಾರವನ್ನು ವಶಪಡಿಸಿಕೊಂಡ ಮಿಲಿಟರಿ ನಾಯಕರು ಫ್ರೆಂಚ್ ಪಡೆಗಳು ನಿರ್ಗಮಿಸುವಂತೆ ಹೇಳುತ್ತಿದ್ದಾರೆ. ನೈಸರ್ಗಿಕ ಸಂಪನ್ಮೂಗಳನ್ನು ರಾಷ್ಟ್ರೀಕರಿಸಲು ಮುಂದಾಗಿವೆ. ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ನಿಟ್ಟಿನಲ್ಲಿ ಪಶ್ಚಿಮ ಆಫ್ರಿಕಾದ ದೇಶಗಳ ಈ ಪ್ರಯತ್ನಗಳು, ನಮ್ಮ ಸರ್ಕಾರವು ನೈಸರ್ಗಿಕ ಸಂಪನ್ಮೂಲಗಳ ಕ್ಷೇತ್ರದಲ್ಲಿಯೂ ಸಹ ಸಾರ್ವಜನಿಕ ವಲಯವನ್ನು ಹಿಂದಕ್ಕೆ ತಳ್ಳುತ್ತಿರುವ ತನ್ನ ಪ್ರಸ್ತುತ ನೀತಿಯನ್ನು ಗಂಭೀರವಾಗಿ ಮರುಪರಿಶೀಲಿಸುವಂತೆ ಮಾಡಬೇಕು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಫ್ರೆಂಚ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿದ್ದ ಪಶ್ಚಿಮ ಆಫ್ರಿಕಾದ ಬಹುತೇಕ ಪ್ರದೇಶಗಳಲ್ಲಿ, ಭಾರತದಲ್ಲಿ ಜರುಗಿದ ರೀತಿಯ ನಿರ್ವಸಾಹತೀಕರಣ (ವಸಾಹತುಶಾಹಿಯನ್ನು ಒದ್ದೋಡಿಸುವ ಹೋರಾಟ) ಪ್ರಕ್ರಿಯೆ ಜರುಗಲಿಲ್ಲ. ಮೊದಲಿಗೆ, ವಸಾಹತುಗಳಾಗಿ ಆ ದೇಶಗಳು ಹಿಂದೆ ಹೊಂದಿದ್ದ ಕರೆನ್ಸಿ, ಅದರ ವಿನಿಮಯ ದರ ಮತ್ತು ಅದು ಫ್ರೆಂಚ್ ಕರೆನ್ಸಿಯಾದ ಫ್ರಾಂಕ್‌ನೊಂದಿಗೆ ಹೊಂದಿದ್ದ ಹಳೆಯ ಸಂಬಂಧವೇ ಮುಂದುವರೆಯಿತು. ಇದರ ಅರ್ಥವೆಂದರೆ, ಸ್ವತಂತ್ರ ದೇಶಗಳಾಗಿ ಅವರು ತಮ್ಮ ಆಯ್ಕೆಯ ಒಂದು ಸ್ವತಂತ್ರ ಹಣಕಾಸು ನೀತಿಯನ್ನು ಮತ್ತು ವಿತ್ತೀಯ ನೀತಿಯನ್ನು ಅನುಸರಿಸುವುದು ಸಾಧ್ಯವಾಗಲಿಲ್ಲ (ಒಂದು ವೇಳೆ ಅವರು ತಮ್ಮ ಆಯ್ಕೆಯ ಹಣಕಾಸು ಮತ್ತು ವಿತ್ತೀಯ ನೀತಿಗಳನ್ನು ಅನುಸರಿಸಿದ್ದರೆ, ಫ್ರೆಂಚ್ ಕರೆನ್ಸಿಯೊಂದಿಗೆ ಆ ದೇಶಗಳು ಹೊಂದಿದ್ದ ಸ್ಥಿರ ವಿನಿಮಯ ದರ ವ್ಯವಸ್ಥೆಯು ಮುರಿದು ಬೀಳುತ್ತಿತ್ತು). ವಸಾಹತು ಭಾರತದಲ್ಲಿ, ದೇಶವು ಸಂಪಾದಿಸಿದ ವಿದೇಶಿ ವಿನಿಮಯ ಮೀಸಲುಗಳನ್ನು, ಮತ್ತು ವರ್ಷ ವರ್ಷವೂ ಸಂಪಾದಿಸಿದ ಎಲ್ಲ ರಫ್ತು ಮಿಗುತಾಯವನ್ನೂ ಬ್ರಿಟನ್ ತನ್ನ ಜೇಬಿಗೆ ಇಳಿಸಿಕೊಳ್ಳುತ್ತಿದ್ದ ಕಾರಣದಿಂದಾಗಿ ಬಲವಂತದ ಸಾಲಗಳ ಮೂಲಕ ಪಡೆದುಕೊಂಡ ದೇಶದ ಮೀಸಲು ಚಿನ್ನದ ನಿಧಿಯನ್ನೂ ಸಹ, ಲಂಡನ್‌ನಲ್ಲಿ ಇರಿಸುತ್ತಿದ್ದ ಕ್ರಮದ ರೀತಿಯಲ್ಲೇ, ಪಶ್ಚಿಮ ಆಫ್ರಿಕಾದ ಈ ದೇಶಗಳ ವಿದೇಶಿ ವಿನಿಮಯ ಮೀಸಲುಗಳನ್ನು ಮತ್ತು ಅವರ ಮೀಸಲು ಚಿನ್ನದ ನಿಧಿಯನ್ನು ಫ್ರಾನ್ಸ್ ತನ್ನ ಬಳಿ ಇಟ್ಟುಕೊಂಡಿತ್ತು. ಮಾತ್ರವಲ್ಲ, ಔಪಚಾರಿಕವಾಗಿ ನಿರ್ವಸಾಹತೀಕರಣವು ಕೊನೆಗೊಂಡ ಬಳಿಕವೂ ಆ ದೇಶಗಳ ಹಣಕಾಸು ನೀತಿಯನ್ನು ಮತ್ತು ವಿತ್ತೀಯ ನೀತಿಯನ್ನು ತನಗೆ ಅನುಕೂಲವಾಗುವ ರೀತಿಯಲ್ಲಿ ಫ್ರಾನ್ಸ್ ರೂಪಿಸುತ್ತಿತ್ತು. ಆ ದೇಶಗಳ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣವೂ ಸಹ ಸಾಮ್ರಾಜ್ಯಶಾಹಿ ದೇಶಗಳ ದೈತ್ಯ ಕಂಪನಿಗಳ (metropolitan corporations) ಬಳಿಯೇ ಉಳಿದಿತ್ತು. ಅದಕ್ಕಿಂತಲೂ ಮಿಗಿಲಾಗಿ, ನಿರ್ವಸಾಹತೀಕರಣದ ಹೊರತಾಗಿಯೂ, ಫ್ರೆಂಚ್ ಸೇನಾ ಪಡೆಗಳು ಆ ದೇಶಗಳಲ್ಲೇ ಉಳಿದುಕೊಂಡವು. ಆರಂಭದಲ್ಲಿ, ಫ್ರೆಂಚ್ ಆಸ್ತಿಯನ್ನು ಕಾಪಾಡುವ ನೆಪದಲ್ಲಿ ಉಳಿದುಕೊಂಡವು. ತರುವಾಯ ಆ ದೇಶಗಳನ್ನು ಇಸ್ಲಾಮಿಕ್ ಉಗ್ರಗಾಮಿಗಳ (ಈ ಉಗ್ರಗಾಮಿಗಳು ಸಾಮ್ರಾಜ್ಯಶಾಹಿ ದೇಶಗಳು ಲಿಬಿಯಾದಲ್ಲಿ ಗಡಾಫಿ ಆಡಳಿತವನ್ನು ಅಸ್ಥಿರಗೊಳಿಸಿದ ಕಾರಣದಿಂದಾಗಿ ಬಲಿಷ್ಠರಾಗಿ ಬೆಳೆದರು) ಆಕ್ರಮಣದಿಂದ ರಕ್ಷಿಸುವ ನೆಪದಲ್ಲಿ ಉಳಿದುಕೊಂಡವು. ಆದರೆ, ವಾಸ್ತವಿಕವಾಗಿ, ಫ್ರೆಂಚ್ ಸೇನಾ ಪಡೆಗಳು ಆ ದೇಶಗಳಲ್ಲಿ ಉಳಿದುಕೊಂಡ ಕಾರಣವೆಂದರೆ, ಹೊಸದಾಗಿ ವಿಮೋಚನೆಯಾದ ದೇಶಗಳ ಸರ್ಕಾರಗಳು ಫ್ರೆಂಚ್ ಸಾಮ್ರಾಜ್ಯಶಾಹಿಯ ಅಣತಿಯ ಮೇರೆಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಆಗಿತ್ತು. ಈ ಪಡೆಗಳನ್ನು ಹೊರಹಾಕುವ ಯಾವುದೇ ಪ್ರಯತ್ನವನ್ನು, ಆಂತರಿಕವಾಗಿ ದಂಗೆ ಎಬ್ಬಿಸುವ ವಿದ್ರೋಹಿ ಕ್ರಮವನ್ನೂ ಸಹ ಒಳಗೊಂಡಂತೆ ಯಾವ ವಿಧಾನದ ಮೂಲಕವಾದರೂ ಸರಿಯೇ ಹೊಸಕಿಹಾಕಲಾಗುವುದು ಎಂಬುದನ್ನು ತೋರಿಸಿಕೊಟ್ಟ ಮೊದಲ ಪ್ರಕರಣವೇ ಬುರ್ಕಿನಾ ಫಾಸೊ.



ಬುರ್ಕಿನಾ ಫಾಸೊದ ಕ್ರಾಂತಿಕಾರಿ ಮಾರ್ಕ್ಸ್‌ವಾದಿ ನಾಯಕ ಮತ್ತು ಅಖಿಲ-ಆಫ್ರಿಕಾ ಪರಿಕಲ್ಪನೆಗೆ ಬದ್ಧವಾಗಿದ್ದ ಥಾಮಸ್ ಶಂಕರ, ತನ್ನ ದೇಶದಿಂದ ಫ್ರೆಂಚ್ ಸೈನ್ಯವನ್ನು ಹೊರಹಾಕಬೇಕೆಂದು ಬಯಸಿದ್ದರು. ಸ್ವಂತ ಅವರದೇ ಪಕ್ಷಕ್ಕೆ ಸೇರಿದ ವ್ಯಕ್ತಿಗಳೇ ನಡೆಸಿದ ದಂಗೆಯಲ್ಲಿ ಅವರು ಹತ್ಯೆಗೀಡಾದರು. ಈ ದಂಗೆಯು ಫ್ರೆಂಚ್ ಬೆಂಬಲದಿಂದ ಉತ್ತೇಜಿತವಾಗಿತ್ತು ಎಂದು ಸಾಮಾನ್ಯವಾಗಿ ಭಾವಿಸಲಾಗಿದೆಯಾದರೂ, ಹೆಚ್ಚಿನ ಸಂದರ್ಭಗಳಲ್ಲಿ ಈ ದಂಗೆಗಳ ಅಗತ್ಯವೇ ಬೀಳುವುದಿಲ್ಲ: ಸಾಮ್ರಾಜ್ಯಶಾಹಿ ದೇಶಗಳಲ್ಲಿ ತರಬೇತಿ ಪಡೆದ ನಾಯಕರನ್ನು ಹೊಂದಿದ ಮತ್ತು ಫ್ರೆಂಚ್ ಪಡೆಗಳ ನಿರಂತರ ಉಪಸ್ಥಿತಿಯ ಸಮಸ್ಯೆಯನ್ನು ತಮ್ಮ ರಾಜಕೀಯ ಅಜೆಂಡಾದಿಂದ ದೂರವಿಡುವ ರಾಜಕೀಯ ಪಕ್ಷಗಳ ಸಾಮಾನ್ಯ ಚುನಾವಣಾ ರಾಜಕೀಯವೇ ಸಾಕಾಗುತ್ತದೆ. ಮೇಲಾಗಿ, ಈ ರಾಜಕೀಯವು ಪ್ರಜಾಪ್ರಭುತ್ವದ ವೇಷವನ್ನು ಧರಿಸಿರುತ್ತದೆ.

ಒಂದು ನಿರ್ಣಾಯಕ ದೋಷ

ಆದಾಗ್ಯೂ, ಇತ್ತೀಚಿನ ದಿನಗಳಲ್ಲಿ, ಪಶ್ಚಿಮ ಆಫ್ರಿಕಾದ ಕೆಲವು ದೇಶಗಳ ಬೆನ್ನುಮೂಳೆಯಿಲ್ಲದ ಚುನಾಯಿತ ಸರ್ಕಾರಗಳನ್ನು ಉರುಳಿಸಿದ ಆ ದೇಶಗಳ ಸೇನೆಯೊಳಗಿನ ಕ್ರಾಂತಿಕಾರಿಗಳು ಅಧಿಕಾರವನ್ನು ವಶಪಡಿಸಿಕೊಂಡಿವೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಪ್ರತಿರೋಧದ ಅಲೆಯನ್ನು ಸೃಷ್ಟಿಸಿವೆ. ಅಧಿಕಾರವನ್ನು ಈ ರೀತಿಯಲ್ಲಿ ವಶಪಡಿಸಿಕೊಳ್ಳುವ ಕ್ರಮವು ಪ್ರಜಾಪ್ರಭುತ್ವದ ವಿರುದ್ಧ ಒಂದು ಬಲವಾದ ಹೊಡೆತ; ಆದುದರಿಂದ ಅದನ್ನು ಖಂಡಿಸಬೇಕಾಗುತ್ತದೆ ಮತ್ತು ವಿರೋಧಿಸಬೇಕಾಗುತ್ತದೆ ಎಂದು ಸಾಮ್ರಾಜ್ಯಶಾಹಿ ದೇಶಗಳು ಬೊಬ್ಬೆ ಹೊಡೆಯುತ್ತಿರುವ ಹೊತ್ತಿನಲ್ಲಿ, ಒಂದು ವಿಪರ್ಯಾಸದೋಪಾದಿಯಲ್ಲಿ, ಈ ದೇಶಗಳ ಜನಸಾಮಾನ್ಯರು ತಾವೇ "ಪ್ರಜಾಸತ್ತಾತ್ಮಕವಾಗಿ" ಚುನಾಯಿಸಿದ ಸರ್ಕಾರಗಳನ್ನು ಬದಲಾಯಿಸಿರುವ ಈ ಹೊಸ ಆಳ್ವಿಕೆಯನ್ನು ಒಂದು ವಿಶಿಷ್ಟ ಉತ್ಸಾಹದಿಂದ ಸ್ವಾಗತಿಸಿದ್ದಾರೆ.


ವಾಸ್ತವವಾಗಿ, ಅವು ಹೊಂದಿರುವ ಚುನಾವಣಾ ಪ್ರಜಾಪ್ರಭುತ್ವದ ಕಾರ್ಯಾಚರಣೆಯಲ್ಲಿ ಕಂಡುಬರುವ ಒಂದು ನಿರ್ಣಾಯಕ ದೋಷವನ್ನು ಈ ದೇಶಗಳು ಬಹಿರಂಗಪಡಿಸುತ್ತವೆ. ನಮ್ಮ ಮುಂದೆ ಸಾಮಾನ್ಯವಾಗಿ ಚುನಾವಣಾ ಪ್ರಜಾಪ್ರಭುತ್ವದ ಬಗ್ಗೆ ಒಂದು ಅಂದಗೊಳಿಸಿದ ಚಿತ್ರಣವನ್ನು ಬಿಂಬಿಸಲಾಗುತ್ತದೆ. ಯಾರು ಬೇಕಾದರೂ ಒಂದು ರಾಜಕೀಯ ಪಕ್ಷವನ್ನು ರಚಿಸಬಹುದು, ಯಾವುದೇ ಸಮಸ್ಯೆಯನ್ನು ಎತ್ತಬಹುದು ಮತ್ತು ಚುನಾವಣಾ ಅಖಾಡವನ್ನು ಪ್ರವೇಶಿಸಬಹುದು. ಎಲ್ಲರನ್ನೂ ಸಮಾನವಾಗಿ ಕಾಣುವುದರಿಂದಾಗಿ, ಜನರ ನೈಜ ಕಾಳಜಿಗಳು ಚುನಾವಣಾ ಫಲಿತಾಂಶಗಳಲ್ಲಿ ವ್ಯಕ್ತಗೊಳ್ಳುತ್ತವೆ ಎಂಬುದು ಈ ಚಿತ್ರಣದ ಹೂರಣವಾಗಿರುತ್ತದೆ. ಆದರೆ, ವಾಸ್ತವವಾಗಿ, ಆರ್ಥಿಕ ಸಂಪನ್ಮೂಲಗಳ ಕೊರತೆಗಳು ಚುನಾವಣಾ ಕಣವನ್ನು "ಪ್ರವೇಶಿಸುವಲ್ಲಿ ಅಡೆ-ತಡೆ"ಗಳಾಗಿ ಪರಿಣಮಿಸುತ್ತವೆ ಎಂಬ ಅಭಿಪ್ರಾಯವನ್ನು ಆರ್ಥಿಕ ತಜ್ಞರು ವ್ಯಕ್ತಪಡಿಸುತ್ತಾರೆ. ಹಾಗಾಗಿ, ಈ ಚುನಾವಣಾ ರಂಗ ಎಂಬುದು ಎಲ್ಲರಿಗೂ ನಿಜಕ್ಕೂ ಸಮಾನ ಅವಕಾಶ ಒದಗಿಸುವ ಆಟದ ಮೈದಾನವಲ್ಲ ಎಂಬುದನ್ನು ಖಚಿತಪಡಿಸುತ್ತದೆ. ಆದ್ದರಿಂದ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತೋರುವ ಮತ್ತು ಅದೇ ಸಮಯದಲ್ಲಿ ಜನರನ್ನು ಬಾಧಿಸುವ ನೈಜ ಸಮಸ್ಯೆಗಳನ್ನು ನಿಜಕ್ಕೂ ಪರಿಹರಿಸದ ಒಂದು ಚುನಾವಣಾ ಪ್ರಜಾಪ್ರಭುತ್ವವನ್ನು ಹೊಂದುವುದು ಸಾಧ್ಯವಿದೆ.

ಪಾಶ್ಚಾತ್ಯ ಪ್ರಜಾಪ್ರಭುತ್ವಗಳಲ್ಲಿ ಈಗ ನಿಖರವಾಗಿ ಜರುಗುತ್ತಿರುವ ವಿದ್ಯಮಾನವು ಇದುವೇ. ಚುನಾವಣಾ ವ್ಯವಸ್ಥೆಯ ಸುಗಮ ಕಾರ್ಯಾಚರಣೆಯ ಹೊರತಾಗಿಯೂ, ಶಾಂತಿ ಸ್ಥಾಪನೆಗಾಗಿ ಜನರು ಹೊಂದಿರುವ ಅಗಾಧ ಬಯಕೆಯು ಚುನಾವಣಾ ಫಲಿತಾಂಶಗಳಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಡುತ್ತದೆ. ಈ ಲಕ್ಷಣವು ಪಶ್ಚಿಮ ಆಫ್ರಿಕಾದ ಪ್ರಜಾಪ್ರಭುತ್ವಗಳ ಲಕ್ಷಣವೂ ಹೌದು. ವಿದೇಶಿ ಪಡೆಗಳ ಉಪಸ್ಥಿತಿಯಿಂದ ದೇಶವು ಮುಕ್ತವಾಗಬೇಕೆಂದು ಜನರು ಹೊಂದಿರುವ ಅಗಾಧ ಬಯಕೆಯನ್ನು ಅಲ್ಲಿನ ಚುನಾವಣಾ ವ್ಯವಸ್ಥೆಯ ಕಾರ್ಯಾಚರಣೆಯು ಮುನ್ನೆಲೆಗೆ ತರಲೇ ಇಲ್ಲ.

ಸಹೆಲ್ ಪ್ರಭುತ್ವಗಳ ಮೈತ್ರಿಕೂಟ

ಆದಾಗ್ಯೂ, ನೈಜರ್, ಮಾಲಿ ಮತ್ತು ಬುರ್ಕಿನಾ ಫಾಸೊ, ಈ ಪ್ರತಿಯೊಂದೂ ದೇಶವೂ ಇತ್ತೀಚೆಗೆ ಅಧಿಕಾರವನ್ನು ವಶಪಡಿಸಿಕೊಂಡ ಮಿಲಿಟರಿ ನಾಯಕರಿಂದ ಆಳಲ್ಪಡುತ್ತಿದೆ ಮತ್ತು ಫ್ರೆಂಚ್ ಪಡೆಗಳು ನಿರ್ಗಮಿಸುವಂತೆ ಹೇಳುತ್ತಿದೆ. ಇಸ್ಲಾಮಿಕ್ ಉಗ್ರಗಾಮಿಗಳ ವಿರುದ್ಧ ಹೋರಾಡುವ ಸಂಬಂಧವಾಗಿ ಹೇಳುವುದಾದರೆ, ಮಾಲಿ ದೇಶವು ರಷ್ಯಾದ ವ್ಯಾಗ್ನರ್ ಗುಂಪನ್ನು (ಈ ಗುಂಪು ಈಗ ರಷ್ಯಾದ ಪ್ರಭುತ್ವದೊಂದಿಗೆ ವಿಲೀನಗೊಳ್ಳುತ್ತಿದೆ) ಅವಲಂಬಿಸಿದೆ. ಬುರ್ಕಿನಾ ಫಾಸೊ, ಮಾಲಿ ಮತ್ತು ನೈಜರ್, ಈ ಮೂರೂ ದೇಶಗಳು ಜುಲೈ 2024ರಲ್ಲಿ 'ಅಲೈಯನ್ಸ್ ಆಫ್ ಸಾಹೇಲ್ ಸ್ಟೇಟ್ಸ್' (ಸಹೆಲ್ ಪ್ರಭುತ್ವಗಳ ಮೈತ್ರಿಕೂಟ) ಎಂಬ ಒಕ್ಕೂಟವನ್ನು ರಚಿಸಿಕೊಂಡಿವೆ. ಈ ಮೂರೂ ಆಡಳಿತಗಳು ಥಾಮಸ್ ಶಂಕರ ಹೊಂದಿದ್ದ ಅಖಿಲ-ಆಫ್ರಿಕಾ ಪರಿಕಲ್ಪನೆಗೆ ಮತ್ತು ಸಾಮ್ರಾಜ್ಯಶಾಹಿ ವಿರೋಧಕ್ಕೆ ಬದ್ಧವಾಗಿವೆ.

ಸಾಮ್ರಾಜ್ಯಶಾಹಿ-ವಿರೋಧಿ ನಿಟ್ಟಿನಲ್ಲಿ ಈಗ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿರುವ ಬುರ್ಕಿನಾ ಫಾಸೊ, ಮೂಲತಃ ಬ್ರಿಟನ್ನಿನ ಎಂಡೀವರ್ ಮೈನಿಂಗ್ ಕಂಪನಿಯೊಂದಿಗೆ ಸಂಬಂಧ ಹೊಂದಿದ್ದ ತನ್ನ ಎರಡು ಚಿನ್ನದ ಗಣಿಗಳನ್ನು ರಾಷ್ಟ್ರೀಕರಣಗೊಳಿಸಿದೆ. ಬುರ್ಕಿನಾ ಫಾಸೊ ವಿಶ್ವದ 13ನೇ ಅತಿ ದೊಡ್ಡ ಚಿನ್ನದ ಉತ್ಪಾದಕ ಎಂದು ಭಾವಿಸಲಾಗಿದೆ. ಅದರ ವಾರ್ಷಿಕ ಚಿನ್ನದ ಉತ್ಪಾದನೆಯು 100 ಟನ್‌ಗಳು ಅಥವಾ ಪ್ರಸ್ತುತ ವಿಶ್ವ ಬೆಲೆಯಲ್ಲಿ ಸುಮಾರು 6 ಬಿಲಿಯನ್ ಡಾಲರ್‌ಗಳು. ಈ ಚಿನ್ನವನ್ನು ಸಂಪೂರ್ಣವಾಗಿ ಯುರೋಪಿಯನ್ ಅಥವಾ ಉತ್ತರ ಅಮೆರಿಕಾದ ಕಂಪನಿಗಳ ಮೂಲಕ ಉತ್ಪಾದಿಸಲಾಗುತ್ತದೆ ಮತ್ತು ಈ ಕಂಪನಿಗಳು ಅದನ್ನು ದೇಶದ ಹೊರಗೆ ಪರಿಷ್ಕರಿಸುತ್ತವೆ ಮತ್ತು ಹೆಚ್ಚಿನ ಮೌಲ್ಯದ ಚಿನ್ನವನ್ನು ತಮ್ಮ ಬಳಿಯೇ ಉಳಿಸಿಕೊಳ್ಳುತ್ತವೆ. ಈ ಕಾರಣದಿಂದಾಗಿ, ಅಷ್ಟು ಗಣನೀಯ ಪ್ರಮಾಣದ ಚಿನ್ನದ ಉತ್ಪಾದನೆಯ ಹೊರತಾಗಿಯೂ, ಪ್ರಸ್ತುತ ಆ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನವು (2022ರಲ್ಲಿ) ಕೇವಲ 19.37 ಬಿಲಿಯನ್ ಡಾಲರ್ ಮಾತ್ರ. ಪ್ರಸ್ತುತ ➚



ಭವಿಷ್ಯ ಪ್ರಮುಖವಾಗಿದ್ದರೂ, ಜಮ್ಮು ಇನ್ನೂ ಪ್ರಸ್ತುತತೆಯನ್ನು ಕಂಡುಕೊಳ್ಳಲು ಹೆಣಗಾಡುತ್ತಿದೆ. ಜಮ್ಮುವಿನ ಸಮಸ್ಯೆಗಳು ಹೊಸದಲ್ಲ, ಆದರೆ ಕೇಂದ್ರ ಸರ್ಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾಗುಗುತ್ತಿದೆ. ಕಳೆದ ಏಳು ವರ್ಷಗಳಿಂದ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನೊಂದಿರುವ ಪ್ರದೇಶವಿದು. ಕಾಶ್ಮೀರ ಕಣಿವೆಯು ತನ್ನದೇ ಆದ ಸವಾಲುಗಳನ್ನು ಎದುರಿಸುತ್ತಿರುವಾಗ, ಜಮ್ಮುವಿನ ಹೋರಾಟಗಳನ್ನು ಸಾಮಾನ್ಯವಾಗಿ ಹತ್ತಿಕ್ಕಲಾಗುತ್ತದೆ. ಸ್ಥಗಿತಗೊಂಡಿರುವ ಅಭಿವೃದ್ಧಿ ಯೋಜನೆಗಳಿಂದ ಉದ್ಯೋಗಾವಕಾಶಗಳು ಸವೆಯುತ್ತಿವೆ.

ಜಮ್ಮುವಿನ ಆರ್ಥಿಕ ಬೆನ್ನೆಲುಬು ಪ್ರವಾಸೋದ್ಯಮ ಮತ್ತು ಸಾರಿಗೆ ಉದ್ಯಮ ದೊಡ್ಡ ಪ್ರಮಾಣದ ನಷ್ಟ ಅನುಭವಿಸಿದೆ. ಅನೇಕ ಟ್ರಕ್ಕರ್‌ಗಳು ಮತ್ತು ವಾಣಿಜ್ಯ ವಾಹನ ಮಾಲೀಕರು ಸರ್ಕಾರದಿಂದ ಯಾವುದೇ ಯೋಜನೆಗಳನ್ನು ಪಡೆಯಲಾಗದೆ ಸಾಲದ ಹೊರೆಯನ್ನು ಹೊತ್ತಿದ್ದಾರೆ.

ಹೆಚ್ಚಿನ ಉದ್ಯೋಗಗಳು ಸರ್ಕಾರಿ ಹುದ್ದೆಗಳಿಗೆ ಸಂಬಂಧಿಸಿರುವುದರಿಂದ, ಹಲವಾರು ಯುವಕರು ವಯಸ್ಸಿನ ಮಿತಿಯನ್ನು ದಾಟಿ ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

ಆರ್ಟಿಕಲ್ 370 ರದ್ದಾದ ನಂತರ ಭೂಮಿ ಮತ್ತು ಉದ್ಯೋಗದ ಸುರಕ್ಷತೆಗಳ ಬಗ್ಗೆ ಕಾಶ್ಮೀರದ ಜನರು ಎತ್ತಿರುವ ಕಳವಳಗಳಂತೆಯೇ, ಜಮ್ಮುವಿನ ನಿವಾಸಿಗಳು ಇದೇ ರೀತಿಯ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಭಯೋತ್ಪಾದನಾ ಕೃತ್ಯ: ಭಾರಿ ಏರಿಕೆ

ಸಂವಿಧಾನದ 370ನೇ ವಿಧಿಯ ಅಡಿ ನೀಡಲಾದ ವಿಶೇಷ ಸ್ಥಾನವನ್ನು ತೆಗೆದುಹಾಕುವುದರಿಂದ ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಕಡಿವಾಣ

ದ್ವೇಷ ರಾಜಕಾರಣಕ್ಕೆ ಪಾಠ ಕಲಿಸುವರೆ ಕಣಿವೆಯ ಜನ......

ಪುಟ 11 ರಿಂದ

ಹಾಕಬಹುದು ಎಂದು 2019ರ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರವು ಹೇಳಿತ್ತು. ಆದರೆ, ವಾಸ್ತವದಲ್ಲಿ ಇದು ಸಾಧ್ಯವಾಗಿಲ್ಲ ಎಂಬುದನ್ನು ಕೇಂದ್ರ ಸರ್ಕಾರದ್ದೇ ದತ್ತಾಂಶಗಳು ಹೇಳುತ್ತವೆ. ಬದಲಿಗೆ ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ತೆಗೆದುಹಾಕಿದ ನಂತರ ಭಯೋತ್ಪಾದನಾ ಚಟುವಟಿಕೆಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿವೆ.

ವಿಶೇಷ ಸ್ಥಾನಮಾನ ತೆಗೆದುಹಾಕುವುದರ ಮೂಲಕ ಭಯೋತ್ಪಾದನ ಚಟುವಟಿಕೆಗಳಿಗೆ ಕಡಿವಾಣ ಹಾಕುವಲ್ಲಿ ಸರ್ಕಾರ ವಿಫಲವಾಗಿದೆ. ಜತೆಗೆ ಭಯೋತ್ಪಾದನಾ ಚಟುವಟಿಕೆಗಳು ಉಲ್ಬಣಗೊಳ್ಳಲು ಸರ್ಕಾರದ ಈ ಕ್ರಮ ಕಾರಣವಾಗಿದೆ ಎಂಬುದನ್ನೂ ಈ ದತ್ತಾಂಶಗಳು ವಿವರಿಸುತ್ತವೆ. 2017ರಲ್ಲಿ ನಡೆದಿದ್ದ ಭಯೋತ್ಪಾದನಾ ಚಟುವಟಿಕೆಗಳಿಗೆ ಹೋಲಿಸಿದರೆ 2022ರಲ್ಲಿ ನಡೆದ ಕೃತ್ಯಗಳ ಸಂಖ್ಯೆಯಲ್ಲಿ ಎರಡು ಪಟ್ಟಿನಷ್ಟು ಏರಿಕೆಯಾಗಿದೆ ಎಂಬುದನ್ನು ಅಂಕಿಅಂಶಗಳು ತೋರಿಸುತ್ತವೆ.

ಕಣಿವೆಯಲ್ಲಿ 18 ತಿಂಗಳ ಯಾತನೆ

ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ ರದ್ದುಪಡಿಸಿದ್ದರಿಂದ ಜಮ್ಮು–ಕಾಶ್ಮೀರ ಬಿಕ್ಕಟ್ಟು ಎದುರಿಸಿತು. ಇಂಟರ್‌ನೆಟ್ ಸ್ಥಗಿತಗೊಂಡಿದ್ದರಿಂದ 2019ರ ಆಗಸ್ಟ್ 5ರ ಬಳಿಕ ಹೊರಜಗತ್ತಿನ ಜೊತೆ ಇಲ್ಲಿನ ಜನರ ಸಂಪರ್ಕ ಬಹುತೇಕ ನಿಂತು ಹೋಯಿತು. ಎಲ್ಲ ರೀತಿಯ ಸಂವಹನ ಮಾರ್ಗಗಳು ಕಡಿತಗೊಂಡವು. ಇದು ಸುದೀರ್ಘ 18 ತಿಂಗಳವರೆಗೆ ರಾಜ್ಯವನ್ನು ಬಾಧಿಸಿತು. ಜನಜೀವನ, ಆರೋಗ್ಯ, ಪ್ರವಾಸೋದ್ಯಮ, ಆರ್ಥಿಕತೆ ಬುಡಮೇಲಾಗಲು ಕಾರಣವಾಯಿತು.

ಜಮ್ಮು–ಕಾಶ್ಮೀರ ಚೇಂಬರ್ ಆಫ್ ಕಾಮರ್ಸ್‌ನ ವರದಿ ಪ್ರಕಾರ, 2019ರ ಆಗಸ್ಟ್ 5ರಿಂದ 2020ರ ಜುಲೈ ಅವಧಿಯಲ್ಲಿ ಉದ್ಯಮಗಳು ರೂ.40,000 ಕೋಟಿಯಷ್ಟು ಆರ್ಥಿಕ ನಷ್ಟ ಎದುರಿಸಿದ್ದವು. 4.96 ಲಕ್ಷ ಜನರು ಉದ್ಯೋಗ ಕಳೆದುಕೊಂಡರು. ಪ್ರವಾಸೋದ್ಯಮ ಹಾಗೂ ದೂರಸಂಪರ್ಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ರಾಜ್ಯದ ಸುಮಾರು 5,000 ಜನರಿಗೆ ಹಲವು ತಿಂಗಳು ವೇತನ ಸಿಕ್ಕಿರಲಿಲ್ಲ. ಇಂಟರ್‌ನೆಟ್ ಇಲ್ಲದ ಕಾರಣ, ಆನ್‌ಲೈನ್ ಶಾಪಿಂಗ್, ಬುಕ್ಕಿಂಗ್ ಸೇವೆಗಳು, ಇ–ಕಾಮರ್ಸ್, ಕೊರಿಯರ್ ಸೇವೆಗಳು, ನವೋದ್ಯಮಗಳು ಇನ್ನಿಲ್ಲದ ನಷ್ಟ ಅನುಭವಿಸಿದ್ದವು.

ಆನ್‌ಲೈನ್ ಆಧಾರಿತ ಸಾರಿಗೆ ಸೇವೆಗಳನ್ನು ನೀಡುವ ಕ್ಯಾಬ್ ಸಂಸ್ಥೆಗಳು, ಆಹಾರ ಪೂರೈಕೆ ಉದ್ಯಮಗಳು, ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ತುಂಬುವ ಅಂಗಡಿಯವರು ಸತತ ಒಂದೂವರೆ ತಿಂಗಳವರೆಗೆ ಬಾಗಿಲು ಹಾಕಬೇಕಾಯಿತು. ಡಿಜಿಟಲ್ ಆಧಾರಿತ ಆರೋಗ್ಯ ಸೇವೆಗಳನ್ನು ಪಡೆಯಲು ರೋಗಿಗಳು ಕಷ್ಟಪಟ್ಟರು. ಆಸ್ಪತ್ರೆಗಳಲ್ಲಿ ಇಂಟರ್‌ನೆಟ್ ಸಹಾಯದಿಂದ ನಡೆಯಬೇಕಿದ್ದ ವಿವಿಧ ಸೇವೆಗಳು ನಿಂತುಹೋದವು. ಆನ್‌ಲೈನ್ ಮೂಲಕ ವೈದ್ಯರನ್ನು ಸಂಪರ್ಕಿಸಿ ಆರೋಗ್ಯ ಸಲಹೆ ಪಡೆಯುವ ಅವಕಾಶ ಮುಚ್ಚಿಹೋಯಿತು. ಆಯುಷ್ಮಾನ್ ಭಾರತ್ ಸೇವೆಯಡಿ ಚಿಕಿತ್ಸೆ ಪಡೆಯಬೇಕಿದ್ದ ಜನರಿಗೆ ಡಿಜಿಟಲ್ ದಾಖಲೆಗಳು ಲಭ್ಯವಾಗದೇ ಕಷ್ಟ ಅನುಭವಿಸಬೇಕಾಯಿತು. ಹಾಗಾಗಿ ಜಮ್ಮು ಕಾಶ್ಮೀರದ ಜನ ಈ ಚುನಾವಣೆಯಲ್ಲಿ ತಮ್ಮ ಹಕ್ಕಿನ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ.

ಚುನಾವಣಾ ವಿಷಯಗಳು

ಎರಡು ಪ್ರಾದೇಶಿಕ ಪಕ್ಷಗಳಾಗಿರುವ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಪಿಡಿಪಿ ಮತ್ತು ರಾಷ್ಟ್ರೀಯ ಪಕ್ಷಗಳಾಗಿರುವ ಕಾಂಗ್ರೆಸ್ ಹಾಗೂ ಸಿಪಿಐ(ಎಂ) ಪಕ್ಷಗಳು ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮತ್ತೆ ಪಡೆಯುವುದು ಹಾಗೂ 370ನೇ ವಿಧಿಯಡಿ ಪುನಃ ವಿಶೇಷ ಸ್ಥಾನಮಾನ ಕಲ್ಪಿಸುವುದಕ್ಕೆ ಸಂಬಂಧಿಸಿದ ಆಗ್ರಹದ ಮೇಲೆ ಮತದಾರರನ್ನು ಸೆಳೆಯುತ್ತಿವೆ.


ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಕಾಶ್ಮೀರ ಪ್ರಾಂತ್ಯದಲ್ಲಿ ಭಯೋತ್ಪಾದನೆ ಕಡಿಮೆಯಾಗಿದೆ ಎನ್ನುವುದೂ ಸೇರಿದಂತೆ ವಾಸ್ತವಕ್ಕೆ ವಿರುದ್ಧವಾದ ಅನೇಕ ವಿಚಾರಗಳನ್ನು ವ್ಯವಸ್ಥಿತವಾಗಿ ಹಬ್ಬಿಸಲಾಗುತ್ತಿದೆ. ಚುನಾವಣೆಯಲ್ಲಿ ಅವು ಕೂಡ ಪ್ರಮುಖ ಪಾತ್ರ ವಹಿಸಿರುವ ಸಾಧ್ಯತೆಯಿದೆ.

ನಿರುದ್ಯೋಗ, ವಿದ್ಯುತ್, ರಸ್ತೆ, ನೀರು ಆಸ್ಪತ್ರೆಗಳು, ಶಾಲಾ–ಕಾಲೇಜುಗಳ ಮೂಲಸೌಕರ್ಯಗಳು ಚುನಾವಣೆಯ ಚರ್ಚಿತ ವಿಷಯಗಳಾಗಿವೆ. ತಮ್ಮ ನಿರೀಕ್ಷೆಗಳನ್ನು ಪೂರೈಸುವಲ್ಲಿ ಇಲ್ಲಿಯವರೆಗೆ ಯಾರೂ ಉತ್ತಮ ಸಾಧನೆ ಮಾಡಿಲ್ಲ. ರಾಜಕೀಯ ಪಕ್ಷಗಳು ಈ ಸಮಸ್ಯೆಗಳನ್ನು ನಿವಾರಿಸತ್ತವೆಯೇ ಅಥವಾ ನಮ್ಮನ್ನು ಮತಬ್ಯಾಂಕ್ ಆಗಿ ಅಷ್ಟೆ ನೋಡುತ್ತಾರಾ ಎಂಬ ಆತಂಕ ಮತದಾರರಲ್ಲಿ ಮೂಡಿದೆ.

ಒಟ್ಟಾರೆ ಬಹು ನಿರೀಕ್ಷೆಯಲ್ಲಿರುವ ಜಮ್ಮು ಕಾಶ್ಮೀರದ ಚುನಾವಣೆಯಲ್ಲಿ ಯುವಜನತೆ ಮತದಾನಕ್ಕೆ ಉತ್ಸಾಹವನ್ನು ತೋರಿದ್ದಾರೆ. ಇಂಡಿಯಾ ಕೂಟ ಗೆಲ್ಲಬಹುದಾ ಅಥವಾ, ಬಿಜೆಪಿ ಮೈತ್ರಿಕೂಟ ಗೆಲ್ಲಬಹುದಾ ಅಕ್ಟೋಬರ್ 8ರ ವರಗೆ ಕಾದು ನೋಡಬೇಕಿದೆ.

ಅಲ್ಲಿ ಅಧಿಕಾರದಲ್ಲಿರುವ ಇಬ್ರಾಹಿಂ ಟ್ರಾರ್ ಅವರ ಸರ್ಕಾರವು ಚಿನ್ನದ ಉತ್ಪಾದನೆಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣಗೊಳಿಸುವುದು ಮಾತ್ರವಲ್ಲದೆ ಚಿನ್ನದ ಸಂಸ್ಕರಣಾಗಾರವನ್ನು ಮೊದಲ ಬಾರಿಗೆ ಸ್ಥಳೀಯವಾಗಿ ಸ್ಥಾಪಿಸಲು ನಿರ್ಧರಿಸಿದೆ. ಆ ದೇಶದ ಅರ್ಥವ್ಯವಸ್ಥೆಯು ಕನಿಷ್ಠ 2 ಬಿಲಿಯನ್ ಡಾಲರ್‌ನಷ್ಟು ಹೆಚ್ಚುವರಿ ಮೌಲ್ಯವನ್ನು ಉಳಿಸಿಕೊಂಡರೂ ಸಹ, ಈ ಹೆಚ್ಚುವರಿ ಮೊತ್ತವು GDP ಯ ಶೇ. 10ಕ್ಕಿಂತಲೂ ಹೆಚ್ಚಿಗೆ ಇರುತ್ತದೆ. ಈ ಹಣವನ್ನು ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಇತರ ಅಗತ್ಯ ಸೇವೆಗಳನ್ನು ಒದಗಿಸಲು ಸರ್ಕಾರವು ಬಳಸಿಕೊಳ್ಳಬಹುದು.

ಖ್ಯಾತ ಅರ್ಥಶಾಸ್ತ್ರಜ್ಞೆ ಜೋನ್ ರಾಬಿನ್ಸನ್, ದೇಶವೊಂದರ ಖನಿಜ ಸಂಪನ್ಮೂಲಗಳನ್ನು ಹೊರತೆಗೆಯಲು ಬಳಸಲಾಗುವ ಎಲ್ಲ ರೀತಿಯ ವಿದೇಶಿ ಹೂಡಿಕೆಗಳೂ ಅತಿ ಹೆಚ್ಚು ಹಾನಿಕಾರಕವಾಗಿರುತ್ತವೆ ಎಂಬುದನ್ನು ಬಹಳ ಹಿಂದೆಯೇ ಒತ್ತಿಹೇಳಿದ್ದರು. ಅಥವಾ, ವಿಷಯವನ್ನು ವಿಭಿನ್ನವಾಗಿ ಹೇಳುವುದಾದರೆ, ಒಂದು ದೇಶವು ತನ್ನ ಖನಿಜ ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಅಭಿವೃದ್ಧಿಪಡಿಸುವುದರ ಬದಲಾಗಿ ಸ್ವಂತ ತನ್ನದೇ ಸಾರ್ವಜನಿಕ ವಲಯದ ಮೂಲಕವೇ ಅಭಿವೃದ್ಧಿಪಡಿಸಬೇಕು. ಏಕೆಂದರೆ ಖನಿಜಗಳು ಬರಿದಾಗುವ ಸಂಪನ್ಮೂಲಗಳಾಗಿರುತ್ತವೆ. ಒಂದು ದೇಶಕ್ಕೆ ಈ ಖನಿಜ ಸಂಪನ್ಮೂಲಗಳ ಲಭ್ಯತೆಯು ಒಂದು ಅಲ್ಪಾವಧಿಗೆ ಮಾತ್ರವೇ ಸೀಮಿತವಾಗಿರುತ್ತದೆ. ಆದ್ದರಿಂದ, ಖನಿಜ ಸಂಪನ್ಮೂಲದ ಬಹುಪಾಲು ಮೌಲ್ಯವು ದೇಶದ ಬೊಕ್ಕಸಕ್ಕೆ ಹಿಂತಿರುಗದ ಹೊರತು, ಅರ್ಥವ್ಯವಸ್ಥೆಯನ್ನು ಸೂಕ್ತವಾಗಿ ವೈವಿಧ್ಯಗೊಳಿಸಲಾಗದು. ಈ ಸಂಪನ್ಮೂಲವು ಖಾಲಿಯಾದಾಗ ದೇಶವು ಅನಾಥವಾಗುತ್ತದೆ.



ದೇಶವು ಅನಾಥವಾಗುವ ಸಂಗತಿಯು ಸ್ವಂತ ನಮ್ಮ ನೆರೆಯಲ್ಲೇ ಸಂಭವಿಸಿದೆ. ಉದಾಹರಣೆಗೆ ಮ್ಯಾನ್ಮಾರ್. ಅದು ಹೊಂದಿದ್ದ ತೈಲ ನಿಕ್ಷೇಪವನ್ನು ಹೊರತೆಗೆಯುವ ಕಾಲದಲ್ಲಿ ತಾತ್ಕಾಲಿಕವಾಗಿ ಅಲ್ಲೊಂದು ಆರ್ಥಿಕ ಉತ್ಕರ್ಷವಿತ್ತು ಮತ್ತು ತೈಲ ಬಹುರಾಷ್ಟ್ರೀಯ ಕಂಪನಿಗಳು ಅಗಾಧ ಲಾಭ ಗಳಿಸಿದವು. ಅರ್ಥವ್ಯವಸ್ಥೆಯನ್ನು ವೈವಿಧ್ಯಗೊಳಿಸಲು ಈ ಲಾಭವನ್ನು ಬಳಸದ ಕಾರಣ (ತೈಲ ಸಂಪನ್ಮೂಲವನ್ನು ಸಾರ್ವಜನಿಕ ವಲಯದ ಮೂಲಕ ಅಭಿವೃದ್ಧಿಪಡಿಸಿದ್ದರೆ ಅರ್ಥವ್ಯವಸ್ಥೆಯನ್ನು ವೈವಿಧ್ಯಗೊಳಿಸಬಹುದಿತ್ತು), ಮ್ಯಾನ್ಮಾರ್‌ನ ತೈಲ ನಿಕ್ಷೇಪಗಳು ಖಾಲಿಯಾದ ಕೂಡಲೇ ಬಹುರಾಷ್ಟ್ರೀಯ ಕಂಪನಿಗಳು ಗಂಟು ಮೂಟೆ ಕಟ್ಟಿ ಜಾಗ ಖಾಲಿ ಮಾಡಿದವು. ಮ್ಯಾನ್ಮಾರ್ ತನ್ನ ಹಿಂದಿನ ಸ್ಥಿತಿಗೆ ಮರಳಿತು. ಈ ದೇಶವನ್ನು ವಿಶ್ವಸಂಸ್ಥೆಯು ಈಗ "ಅಲ್ಪ ಅಭಿವೃದ್ಧಿ ಹೊಂದಿದ ದೇಶ" ಎಂದು ಕರೆಯುತ್ತದೆ.

ಒಂದು ದೇಶವು ತನ್ನ ಖನಿಜ ಮತ್ತು ಬರಿದಾಗುವ ಇತರ ಸಂಪನ್ಮೂಲಗಳ ಮೇಲೆ ಮಾಲೀಕತ್ವವನ್ನು ಮತ್ತು ನಿಯಂತ್ರಣವನ್ನು ಸದಾ ಹೊಂದಿರಬೇಕು ಮತ್ತು ಅವುಗಳನ್ನು ತನ್ನ ಸಾರ್ವಜನಿಕ ವಲಯದ ಮೂಲಕವೇ ಅಭಿವೃದ್ಧಿಪಡಿಸಬೇಕು. ಈ ಮೂಲಭೂತ ತತ್ವವನ್ನು ಅನುಸರಿಸಬಯಸುವ ಬುರ್ಕಿನಾ ಫಾಸೊದ ಕ್ರಮವು ನಿಜಕ್ಕೂ ಒಂದು ದೊಡ್ಡ ಮುನ್ನಡೆಯೇ ಹೌದು. ಈ ಉದ್ದೇಶ ಸಾಧನೆಯ ವಿರುದ್ಧವಾಗಿ ಸಾಮ್ರಾಜ್ಯಶಾಹಿಯು ಒಡ್ಡುವ ಅಗಾಧ ಅಡೆತಡೆಗಳನ್ನು ಖಂಡಿತವಾಗಿಯೂ ಕೀಳಂದಾಜು ಮಾಡಲಾಗದು. ಇರಾನ್‌ನಲ್ಲಿ ಮೊಸದೆಗ್ ಸರ್ಕಾರವನ್ನು ಉರುಳಿಸುವುದರೊಂದಿಗೆ ಆರಂಭಗೊಂಡು, ತಮ್ಮದೇ ಆದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಲು ಪ್ರಯತ್ನಿಸಿದ ಮೂರನೇ ಜಗತ್ತಿನ ಆಡಳಿತಗಳನ್ನು ಅಸ್ಥಿರಗೊಳಿಸಿದ ಸಾಮ್ರಾಜ್ಯಶಾಹಿಯ ಇತಿಹಾಸವು ಸುದೀರ್ಘವಾಗಿದೆ. ಇಂಥಹ ಎಲ್ಲ ಹಕ್ಕುಗಳ ಹೊರತಾಗಿಯೂ, ಮೂರನೇ ಜಗತ್ತಿನ ದೇಶಗಳ ಖನಿಜ ಸಂಪನ್ಮೂಲಗಳ ಮೇಲಿನ ನಿಯಂತ್ರಣವು ಸಾಮ್ರಾಜ್ಯಶಾಹಿಗೆ ದಕ್ಕಿಲ್ಲ. ಅದು ತೃತೀಯ ಜಗತ್ತನ್ನು ಈಗ ನವ–ಉದಾರವಾದಿ ವ್ಯವಸ್ಥೆಯಲ್ಲಿ ಸಿಲುಕಿಸಿದೆ. ನವ–ಉದಾರವಾದಿ ಆರ್ಥಿಕ ನೀತಿಗಳ ಪ್ರಾಥಮಿಕ ಉದ್ದೇಶವು, ಸಾರ್ವಜನಿಕ ವಲಯವನ್ನು ಹಿಮ್ಮೆಟ್ಟಿಸುವುದು ಮತ್ತು ಪಾಶ್ಚಾತ್ಯ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮೂರನೇ ಜಗತ್ತಿನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಅವಕಾಶವನ್ನು ಮರುಕಲ್ಪಿಸುವುದು. ಪಶ್ಚಿಮ ಆಫ್ರಿಕಾದ ದೇಶಗಳಲ್ಲಿ ನವ–ಉದಾರವಾದಿ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಈ ವಂಚನೆಗಳೊಂದಿಗೆ ಗುರುತಿಸಲ್ಪಟ್ಟಿದೆ. ಈ ರೀತಿ ಗುರುತಿಸುವುದರೊಂದಿಗೆ ನೈಸರ್ಗಿಕ ಸಂಪನ್ಮೂಲಗಳ ಮೇಲೆ ರಾಷ್ಟ್ರೀಯ ನಿಯಂತ್ರಣ ಹೊಂದುವ ಅಗತ್ಯವು ಬಹಳ ಮಹತ್ವದ್ದಾಗುತ್ತದೆ.

ಭಾರತದಲ್ಲಿ, ನಮ್ಮ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ಯಶಸ್ವಿ ಹೋರಾಟದ ನಂತರ, "ಆರ್ಥಿಕ ನಿರ್ವಸಾಹತೀಕರಣ"ಕ್ಕಾಗಿ ನಡೆದ ಹೋರಾಟವು ಬಹುಶಃ ರಾಜಕೀಯ ನಿರ್ವಸಾಹತೀಕರಣದ ಹೋರಾಟಕ್ಕಿಂತಲೂ ಹೆಚ್ಚು ಪ್ರಯಾಸದಾಯಕವಾಗಿತ್ತು. ಸೋವಿಯತ್ ಒಕ್ಕೂಟದ ಸಹಾಯದಿಂದಾಗಿ ಈ ಹೋರಾಟವೂ ಯಶಸ್ವಿಯಾಯಿತು. ನವ–ಉದಾರವಾದವನ್ನು ಅಪ್ಪಿಕೊಳ್ಳುವ ಮೂಲಕ ನಾವು ಸಂಪಾದಿಸಿದ ಭಾಗ್ಯವನ್ನು ಮತ್ತೊಮ್ಮೆ ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದೇವೆ. ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ನಿಟ್ಟಿನಲ್ಲಿ ಪಶ್ಚಿಮ ಆಫ್ರಿಕಾ ಕೈಗೊಂಡ ಪ್ರಯತ್ನವು, ನಮ್ಮ ಸರ್ಕಾರವು ನೈಸರ್ಗಿಕ ಸಂಪನ್ಮೂಲಗಳ ಕ್ಷೇತ್ರದಲ್ಲಿಯೂ ಸಹ ಸಾರ್ವಜನಿಕ ವಲಯವನ್ನು ಹಿಂದಕ್ಕೆ ತಳ್ಳುತ್ತಿರುವ ತನ್ನ ಪ್ರಸ್ತುತ ನೀತಿಯನ್ನು ಗಂಭೀರವಾಗಿ ಮರುಪರಿಶೀಲಿಸುವಂತೆ ಮಾಡಬೇಕು.

ಈ ಸಂಪನ್ಮೂಲಗಳ ಸಂಬಂಧವಾಗಿ ಪ್ರಾಸಂಗಿಕವಾಗಿ ಹೇಳುವುದಾದರೆ, ದೇಶೀಯ ಖಾಸಗಿ ಉದ್ಯಮಗಳು ವಹಿಸುವ ಪಾತ್ರವು ಬಹುರಾಷ್ಟ್ರೀಯ ಸಂಸ್ಥೆಗಳಿಗಿಂತ ಉತ್ತಮವೇನಲ್ಲ. ದೇಶೀಯ ಖಾಸಗಿ ಉದ್ಯಮವೂ ಸಹ ನಿಖರವಾಗಿ ಅದೇ ದೋಷಗಳಿಂದ ನರಳುತ್ತಿದೆ. ರಾಷ್ಟ್ರೀಯ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ ವಲಯಕ್ಕೆ ಪರ್ಯಾಯವೇ ಇಲ್ಲ. ಖಚಿತವಾಗಿ ಹೇಳುವುದಾದರೆ, ಒಂದು ಸಾರ್ವಜನಿಕ ವಲಯದಲ್ಲೂ ಸಹ, ದುರುಪಯೋಗ ಅಥವಾ ಅಸಮರ್ಥತೆ ಇದ್ದಲ್ಲಿ ಅದು ರಾಷ್ಟ್ರೀಯ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡುವುದಿಲ್ಲ. ಆದರೆ, ಸಾರ್ವಜನಿಕ ವಲಯದ ಅಡಿಯಲ್ಲಿ ಸಂಪನ್ಮೂಲಗಳ ಅಭಿವೃದ್ಧಿಯು ಈಗಲೂ ರಾಷ್ಟ್ರೀಯ ಅಭಿವೃದ್ಧಿಗಾಗಿ ಒಂದು ಅಗತ್ಯ ಷರತ್ತು ಆಗುತ್ತದೆ. ಜೊತೆಗೆ, ಸಾರ್ವಜನಿಕ ವಲಯಕ್ಕೆ ಬದ್ಧವಾಗಿರುವ ಒಂದು ಆಡಳಿತವು ತನ್ನ ಕಾರ್ಯವೈಖರಿಯಲ್ಲಿ ಕಾಣಿಸಿಕೊಳ್ಳುವ ಲೋಪ–ದೋಷಗಳನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯವನ್ನೂ ಸಹ ಹೊಂದಿರುತ್ತದೆ.

ಕಬ್ಬು ಬೆಳೆಗಾರರಿಗೆ ಎಸ್.ಎ.ಪಿ. ನೀಡುವಂತೆ ಕರ್ನಾಟಕ ಕಬ್ಬು ಬೆಳೆಗಾರರ ರಾಜ್ಯ ಸಮ್ಮೇಳನದ ಆಗ್ರಹ.....

ಪುಟ 5 ರಿಂದ

ಸಿಹಿ ಬೆಳೆದು ಕಹಿ ಉಣ್ಣುವ ರೈತರು

ದೇಶದಲ್ಲಿ ಸಕ್ಕರೆ ಉದ್ಯಮವು ಪ್ರಮುಖ ಸ್ಥಾನದಲ್ಲಿದ್ದರೂ ಇದರ ಆದಿಪತ್ಯ ಬಂಡವಾಳಶಾಹಿ ರಾಜಕೀಯ ಪಕ್ಷಗಳ ನೇತಾರರ ಅಧೀನದಲ್ಲಿವೆ. ಹಾಗಾಗಿ ರೈತರಿಗೆ ನ್ಯಾಯಯುತ ಬೆಂಬಲ ಬೆಲೆ ನಿಗದಿಪಡಿಸಬೇಕಾದವರೇ ಅದನ್ನು ಕೊಡಬೇಕಾಗಿರುವುದರಿಂದ ರೈತರಿಗೆ ನ್ಯಾಯ ಎಂಬುದು ಮರೀಚಿಕೆಯಾಗಿದೆ. ಇವರು ಕಾನೂನುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ರಚಿಸಿಕೊಳ್ಳುತ್ತಾರೆ. 1994–95 ರಲ್ಲಿ ಕಬ್ಬಿಗೆ ಬೆಲೆ ನಿಗದಿಪಡಿಸುವಾಗ ಶೇ.8.5 ಸಕ್ಕರೆ ಇಳುವರಿ ಆಧಾರದ ಮೇಲೆ ಬೆಲೆ ನಿಗದಿ ಪಡಿಸುತ್ತಿದ್ದರು, ನಂತರ ಶೇ.9.5 ಇಳುವರಿ ಆಧಾರದ ಮೇಲೆ ಬೆಲೆ ನಿಗದಿಪಡಿಸಲು ಪ್ರಾರಂಭಿಸಿದರು. ರಾಜಕೀಯದಲ್ಲಿ ಸಕ್ಕರೆ ಉದ್ಯಮಪತಿಗಳು ಬಲಿಷ್ಠರಾಗಿ ಕಾನೂನುಗಳನ್ನು ರಚಿಸುವ ಸ್ಥಳದಲ್ಲಿ ಮೇಲುಗೈ ಸಾಧಿಸಿದ ಪರಿಣಾಮ ಶೇ.10.25 ಸಕ್ಕರೆ ಇಳುವರಿ ಆಧಾರದ ಮೇಲೆ FRP ನಿಗದಿ ಮಾಡಲು ಮುಂದಾದರು. ಇದರಿಂದ ರೈತರಿಗೆ ನಷ್ಟವಾಗಲು ಪ್ರಾರಂಭವಾಯಿತು.

ಟನ್ ಕಬ್ಬಿಗೆ ರೂ.5370 ನಿಗದಿಪಡಿಸಬೇಕಿದೆ. ಒಂದು ಟನ್ ಕಬ್ಬಿಗೆ ಕನಿಷ್ಠ ರೂ.5000 FRPಯನ್ನು ಶೇ.9.5 ಇಳುವರಿ ಆಧಾರದ ಮೇಲೆ ಬೆಲೆ ನಿಗದಿಪಡಿಸಬೇಕು. ಶೇ. ಒಂದರಷ್ಟು ಇಳುವರಿ ಹೆಚ್ಚಾದರೆ ಟನ್ ಗೆ 500 ರೂ.ಗಳನ್ನು ಹೆಚ್ಚುರಿಯಾಗಿ ನೀಡಬೇಕು. ಒಂದು ಟನ್ ಕಬ್ಬು ಬೆಳೆಯಲು ರಾಜ್ಯದ ಕೃಷಿ ಬೆಲೆ ಆಯೋಗದ ಪ್ರಕಾರ 3580 ರೂ.ಗಳಷ್ಟು ಖರ್ಚು ಬರುತ್ತದೆ. ಹಾಗಾಗಿ ಇದಕ್ಕೆ ಶೇ. 10ರಷ್ಟು ಲಾಭಾಂಶ ಸೇರಿಸಿ ಟನ್ ಕಬ್ಬಿಗೆ 3938 ರೂ.ಗಳನ್ನು ಶೇ.9.5 ಇಳುವರಿ ಆಧಾರದಲ್ಲಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ. ಆದರೆ ಡಾ.ಸ್ವಾಮಿನಾಥನ್ ವರದಿ ಪ್ರಕಾರ ಖರ್ಚಿನ ಜೊತೆಗೆ ಶೇ. 50ರಷ್ಟು ಲಾಭಾಂಶ ಸೇರಿಸಿದರೆ ಒಂದು ಟನ್ ಕಬ್ಬಿಗೆ 5370 ರೂ. ಬೆಲೆ ನಿಗದಿಪಡಿಸಬೇಕಾಗುತ್ತದೆ.

ಇದರ ಜೊತೆಗೆ ರಾಜ್ಯ ಸರ್ಕಾರ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಹಾಗೂ ತಿದ್ದುಪಡಿ ಅಧಿನಿಯಮ 2014ರ ಕಲಂ 4(A) ಪ್ರಕಾರ ಪ್ರಾದಾತ್ತವಾದ ಅಧಿಕಾರವನ್ನು ಚಲಾಯಿಸಿ, ಕಬ್ಬಿನ ಎಥನಾಲ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಮೊದಲ ಕಂತಿನಲ್ಲಿ 2022–2023ನೇ ಸಾಲಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ FRP ಜೊತೆಗೆ ಪ್ರತಿ ಟನ್‌ಗೆ 150 ರೂ.ಗಳು ಹಾಗೂ ಎಥನಾಲ್ ಉತ್ಪಾದಿಸದೇ ಇರುವ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಗೆ FRP ಜೊತೆಗೆ ಟನ್ ಒಂದಕ್ಕೆ 100 ರೂ.ಗಳನ್ನು ನೀಡಲು ಆದೇಶ ಮಾಡಿತ್ತು. ಇದು ಬಹಳ ಕಡಿಮೆ ಮೊತ್ತವಾಗಿದ್ದರೂ ಸಹ ಜಾರಿ ಮಾಡದೆ ಸಕ್ಕರೆ ಲಾಭಿಗಳಿಗೆ ಶರಣಾಗಿದೆ. ಈ ಆದೇಶದ ವಿರುದ್ಧ ಸಕ್ಕರೆ ಕಂಪನಿ ಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದರು. ರಾಜ್ಯ ಸರ್ಕಾರ ಈ ಆದೇಶವನ್ನು ಸಕ್ಕರೆ ನಿಯಂತ್ರಣ ಮಂಡಳಿ ಸಭೆ ಮುಂದೆ ಇಟ್ಟು 3 ತಿಂಗಳೊಳಗೆ ಸರಿಪಡಿಸುತ್ತೇವೆ ಎಂದು ಅಫಿಡೆವಿಟ್ ಸಲ್ಲಿಸಿ ಒಂದು ವರ್ಷವಾಗಿದೆ. ಇದನ್ನು ಸರಿಪಡಿಸಿ ಜಾರಿ ಮಾಡಲಿಲ್ಲ. 2023–24ನೇ ಸಾಲಿಗೆ SAP ನಿಗದಿ ಮಾಡಲಿಲ್ಲ. ಆದರೆ ಹರಿಯಾಣ ಪಂಜಾಬ್ ರಾಜ್ಯಗಳು SAP ಟನ್ ಒಂದಕ್ಕೆ 900 ರೂ. ನಿಗದಿಪಡಿಸಿ FRP ಬೆಲೆಯ ಜೊತೆಗೆ ನೀಡುತ್ತಿದ್ದಾರೆ.

ಅದೇ ಮಾದರಿಯಲ್ಲಿ ತಮಿಳುನಾಡು ಸರ್ಕಾರ ಟನ್‌ಗೆ 250 ರೂ. ನೀಡುತ್ತಿದೆ. ಹಾಗಾಗಿ ರಾಜ್ಯ ಸರ್ಕಾರ ಟನ್‌ಗೆ ರೂ.500 SAP ನಿಗದಿ ಪಡಿಸಬೇಕು.

ಕಬ್ಬಿನ ಉಪ ಉತ್ಪನ್ನಗಳ ಲಾಭಾಂಶದಲ್ಲಿ ಶೇ. 50ರಷ್ಟು ಪಾಲು

ಸಕ್ಕರೆಗಿಂತ ಅಧಿಕ ಆದಾಯ ಅದರ ಉಪ ಉತ್ಪನ್ನಗಳಲ್ಲಿ ಬರುತ್ತದೆ. ಪೆಟ್ರೋಲ್ ಡೀಸೆಲ್ ಜೊತೆ ಬಳಕೆ ಮಾಡುವ ಎಥನಾಲ್ ಪ್ರತಿ ಲೀಟರ್‌ಗೆ ರೂ.49, ಬಗಾಸ್ ಟನ್‌ಗೆ ರೂ.2200, ಮೊಲಾಸೆಸ್ ಟನ್‌ಗೆ ರೂ.9500, ಪ್ರೆಸ್‌ಮಡ್ ಟನ್‌ಗೆ ರೂ.500 ಹಾಗೂ ಕಬ್ಬಿನ ಸಿರಾಫ್ ಬಳಸಿ ಉತ್ಪಾದಿಸುವ ಒಂದು ಲಿಟರ್ ಎಥನಾಲ್‌ಗೆ 65 ರೂ. ಇದೆ. ಇದಲ್ಲದೆ ವಿದ್ಯುತ್ ಉತ್ಪಾದನೆ ಡಿಸ್ಟಿಲರಿಸ್ ಗೊಬ್ಬರ, ಪೀಡ್ಸ್ ಇತರೆ ಸೇರಿದಂತೆ ಒಂದು ಟನ್ ಗೆ 13,000ದಿಂದ 14,000 ರೂ.ಗಳವರೆಗೆ ಆದಾಯ ಬರುತ್ತದೆ ಎಂದು ಕೊಯಮತ್ತೂರಿನ ಕಬ್ಬು ಪ್ರಜನನ ಸಂಸ್ಥೆಯ ವಿಜ್ಞಾನಿಗಳು ಹೇಳುತ್ತಾರೆ. ಹಾಗಾಗಿ ಉಪ ಉತ್ಪನ್ನಗಳಲ್ಲಿ ರೈತರಿಗೆ ಶೇ. 50ರಷ್ಟು ಲಾಭಾಂಶ ಕೊಡಬೇಕು.

ತೂಕ ಮತ್ತು ಇಳುವರಿಯಲ್ಲಿ ಮೋಸ

ಕಾರ್ಖಾನೆ ಒಳಗಡೆ ಇರುವ ವೇ ಬ್ರಿಡ್ಜ್ ನಲ್ಲಿ ತೂಕದಲ್ಲಿ ಮೋಸ ನಡೆಸುತ್ತಾರೆ. ಹಾಗೂ ಗದ್ದೆಯಿಂದ ಕಾರ್ಖಾನೆ ಒಳಗೆ ಹೋಗಿ ಎರಡು ಮೂರು ದಿನಗಳಾದರೂ ತೂಕ ಮಾಡದೆ ಇರುವ ಕಾರಣ ಕಬ್ಬು ಒಣಗಿ ತೂಕ ಕಡಿಮೆಯಾಗುತ್ತದೆ. ಆದ್ದರಿಂದ ಕಟಾವಾದ 12 ಗಂಟೆ ಒಳಗೆ ತೂಕ ಆಗಬೇಕು.

ಸಕ್ಕರೆ ಇಳುವರಿಯಲ್ಲೂ ಮೋಸ ಮಾಡಿ ಕಡಿಮೆ ಬೆಲೆ ನಿಗದಿ

ಕಾರ್ಖಾನೆ ಮಾಲೀಕರು ಹೇಳಿದ್ದೇ ಸಕ್ಕರೆ ಇಳುವರಿ. ಕೆಲವು ತಜ್ಞರು ಹಾಗೂ ರೈತ ಮುಖಂಡರು ಒಳಗೊಂಡ ಸಮಿತಿ ರಚಿಸಬೇಕೆಂದು ಕರ್ನಾಟಕ ಕಬ್ಬು ಬೆಳೆಗಾರರ ಸಂಘ ಹಲವು ಕಡೆ ಹೋರಾಟ ನಡೆಸಿದೆ. ಅದರ ಫಲವಾಗಿ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು, ಕೃಷಿ ತಜ್ಞರು ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಒಳಗೊಂಡ ಸಮಿತಿ ರಚನೆ ಮಾಡಿತು. ಆದರೆ ಅದು ಕ್ರಿಯಾಶೀಲವಾಗಲಿಲ್ಲ. ನಂತರ ಸಕ್ಕರೆ ಆಯುಕ್ತರು ಆದೇಶ ಹೊರಡಿಸಿ, ಎಲ್ಲಾ ಕಡೆ ರೈತ ಮುಖಂಡರನ್ನೊಳಗೊಂಡ ಸಮಿತಿ ರಚಿಸಲು ಆದೇಶಿಸಿದೆ. ಅದು ಸಹ ಜಾರಿಯಾಗಲಿಲ್ಲ.

ಎಫ್‌ಆರ್‌ಪಿ ಹೆಚ್ಚಾದಂತೆ ಸಕ್ಕರೆ ಕಾರ್ಖಾನೆ ಮಾಲೀಕರು ವರ್ಷದಿಂದ ವರ್ಷಕ್ಕೆ ಸಕ್ಕರೆ ಇಳುವರಿ ಕಡಿಮೆ ಮಾಡುತ್ತಿದ್ದಾರೆ. ಶೇ. 95ರಷ್ಟು ಕಾರ್ಖಾನೆಗಳು ಕಳೆದ ವರ್ಷ ಇದ್ದುದಕ್ಕಿಂತ ಕಡಿಮೆ ಇಳುವರಿ ತೋರಿಸಿದ್ದಾರೆ. ಇದರ ಹಿಂದೆ ಮೋಸದ ಜಾಲ ಅಡಗಿರುತ್ತದೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು.

ಕೊಯಮತ್ತೂರು ಹಾಗೂ ಮಂಡ್ಯದ ಕೃಷಿ ವಿವಿಯ ವಿಸಿ ಫಾರಂನ ಕೃಷಿ ವಿಜ್ಞಾನಿಗಳು ಕಬ್ಬಿನ ತಳಿ ಕಂಡುಹಿಡಿದಾಗ ಅದರಲ್ಲಿ ಸಕ್ಕರೆ ಅಂಶ ಶೇ. 11ರಿಂದ 12ರಷ್ಟು ಇರುತ್ತದೆ ಎಂದಿದ್ದಾರೆ. ಆದರೆ ಸಕ್ಕರೆ ಕಾರ್ಖಾನೆ ಮಾಲೀಕರು ಶೇ. 8.5ರಿಂದ, ಶೇ. 10.25ರೊಳಗೆ ಇಳುವರಿ ತೋರಿಸುತ್ತಾರೆ. ಇದರಲ್ಲಿ ಸತ್ಯ ಯಾರದು ಮೋಸ ಯಾರದು ಎಂದು ಪತ್ತೆ ಹಚ್ಚಬೇಕಿದೆ.

ಹಣ ಪಾವತಿಯಲ್ಲಿ ವಿಳಂಬ

ಕಬ್ಬು ಸರಬರಾಜು ಮಾಡಿ ಮುಕ್ತಾಯವಾದ ಮಾರನೇ ದಿನಕ್ಕೆ ಒಂದು ಕಂತು ಹಾಗೂ ಉಳಿಕೆ ಹಣ 14 ದಿನದೊಳಗೆ ಪಾವತಿ ಮಾಡಬೇಕು. ಇಲ್ಲವಾದರೆ ವಿಳಂಬಕ್ಕೆ ಶೇ. 15ರ ಬಡ್ಡಿ ದರದಲ್ಲಿ ಹಣ ಸೇರಿಸಿ ಕೊಡಬೇಕು. ಆದರೆ, ಈ ಅವಧಿ ಒಳಗೆ ಹಣ ಪಾವತಿ ಮಾಡದೆ ರೈತರಿಗೆ ಎರಡು ಮೂರು ತಿಂಗಳುಗಳಾಗಿರುವ ಉದಾಹರಣೆಗಳಿವೆ. ಬಾಗಲಕೋಟೆಯ ಜಮಖಂಡಿ ಸಕ್ಕರೆ ಕಾರ್ಖಾನೆ ರೂ.178 ಕೋಟಿ ಹಾಗೂ ಬೀದರ್ ನ ಭಾಗ್ಯಲಕ್ಷ್ಮಿ ಶುಗರಸ್ ರೂ.27 ಕೋಟಿ ಬಾಕಿ ಹಣ ಉಳಿಸಿಕೊಂಡಿದೆ.

ಕಟಾವು ಮತ್ತು ಸಾಗಾಣಿಕೆ ವೆಚ್ಚದಲ್ಲಿ ಮಹಾಮೋಸ

ಉತ್ತರ ಕರ್ನಾಟಕದ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು ಒಪ್ಪಂದ ಮಾಡಿಕೊಳ್ಳುವಾಗ ಎಕ್ಸ್ ಫಿಲ್ಡ್ ಕಬ್ಬಿನ ಒಪ್ಪಂದವಾಗುತ್ತದೆ. ಕಿಮೀಗೆ ಅನುಗುಣವಾಗಿ ಸಾಗಣಿಕೆ ವೆಚ್ಚ ಸಾಗುತ್ತದೆ. ಆದರೆ ಕಾರ್ಖಾನೆ ಮಾಲೀಕರು ಇದನ್ನು ಅನುಸರಿಸುತ್ತಿಲ್ಲ.

ಎಥನಾಲ್ ಪ್ರಮಾಣವನ್ನು 25ರಷ್ಟು ಹೆಚ್ಚಿಸಿ

ಬ್ರೆಜಿಲ್ ದೇಶದಲ್ಲಿ ಎಥನಾಲ್ ಪ್ರಮಾಣವನ್ನು 100ರಷ್ಟು ಬಳಕೆ ಮಾಡಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಪೆಟ್ರೋಲ್ ಡೀಸೆಲ್ ಬಳಕೆಯಲ್ಲಿ ಎಥನಾಲ್ ಪ್ರಮಾಣವನ್ನು ಕನಿಷ್ಠ ಶೇ.25 ಬಳಕೆ ಮಾಡಿದರೆ ಅನುಕೂಲವಾಗುತ್ತದೆ. ವಿದೇಶಗಳಿಂದ ತೈಲವನ್ನು ಆಮದು ಮಾಡಿಕೊಳ್ಳುವ ಪ್ರಮಾಣ ಕಡಿಮೆಯಾಗುತ್ತದೆ. ಅಲ್ಲದೆ ವಾಯುಮಾಲಿನ್ಯವನ್ನು ತಡೆಗಟ್ಟಬಹುದು.

ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಹಗ್ಗದ ಬೆಲೆಗೆ ಮಾರಾಟ

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರೈತರ ಶೇರು ಹಣದ ಪಾಲು ಸಹ ಇರುತ್ತದೆ. ಆದರೆ ರಾಜ್ಯ ಸರ್ಕಾರ ರೈತರ ಅಭಿಪ್ರಾಯಗಳಿಗೆ ಮನ್ನಣೆ ನೀಡದೆ, ಖಾಸಗಿ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ನಷ್ಟದ ಹೆಸರೇಳಿ 30ರಿಂದ 40 ವರ್ಷಗಳಿಗೆ ಗುತ್ತಿಗೆ ನೀಡುವುದು, ಅಥವಾ ಮಾರಾಟ ಮಾಡುವುದು ರೈತ ವಿರೋಧಿ ಹಾಗೂ ಆಡಳಿತದ ಅಸಮರ್ಥತೆಯನ್ನು ತೋರುತ್ತದೆ.

ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಮಿತಿಯ ನೂತನ ಪದಾಧಿಕಾರಿಗಳ ಆಯ್ಕೆ

ರಾಜ್ಯಾಧ್ಯಕ್ಷರಾಗಿ ಜಿ.ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಎನ್.ಎಲ್.ಭರತ್ ರಾಜ್ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರುಗಳಾಗಿ ಚಂದ್ರಗೌಡ ಕಲ್ಲನಗೌಡ ಪಾಟೀಲ್ (ಬೆಳಗಾವಿ), ಶರಣಬಸಪ್ಪ ಮಮಶೆಟ್ಟಿ (ಕಲಬುರಗಿ), ನ್ಯಾಮಗೌಡ (ಬಾಗಲಕೋಟೆ), ಕುಳ್ಳೇಗೌಡ (ಮಂಡ್ಯ) ಬೀಮರಾಯ ಪೂಜಾರಿ (ವಿಜಯಪುರ) ಹಾಗೂ ಶ್ರೀಮಂತ ಬೀರೆದಾರ (ಕಲಬುರಗಿ) ಆಯ್ಕೆಯಾಗಿದ್ದಾರೆ.

ಸಹಕಾರ್ಯದರ್ಶಿಗಳಾಗಿ ಚಂದ್ರಶೇಖರ ಸಂಗಪ್ಪ (ಕೊಪ್ಪಳ), ಸಿದ್ದರಾಮ ದಣ್ಣೂರ (ಕಲಬುರಗಿ) ಕೊಟ್ಟಿಗೆ ಮಲ್ಲಿಕಾರ್ಜುನ (ವಿಜಯನಗರ) ಶುಕೂರ್ ಮತ್ತು ಶ್ರೀನಿವಾಸ್ (ಮಂಡ್ಯ), ಅವಿನಾಶ ಸಾರಥಿ (ಬಾಗಲಕೋಟೆ), ಮಲ್ಲಿಕಾರ್ಜುನ ಸಾವುಕಾರ್ (ವಿಜಯನಗರ) ಅಣ್ಣರಾಯ ಈಳಿಗೇರ ಮತ್ತು ಗೋಪಾಲ ಶಿವಗದ್ದಿಗೆ (ವಿಜಯಪುರ) ಆಯ್ಕೆಯಾಗಿದ್ದಾರೆ.



ರಾಜ್ಯಾಧ್ಯಕ್ಷರಾಗಿ ಜಿ.ನಾಗರಾಜ್



ಪ್ರಧಾನ ಕಾರ್ಯದರ್ಶಿಯಾಗಿ ಎನ್.ಎಲ್.ಭರತ್ ರಾಜ್

ನಿಬ್ಬೆರಗಾಗಿಸಿದ ಚೀನಾದ ಸಾಧನೆಗಳು....

ಪುಟ 9 ರಿಂದ

ಗಣನೀಯ ಸುಧಾರಣೆಯಾಗಿರುವುದು ಚೀನಾದ ಜನರ ಸರಾಸರಿ ಆಯಸ್ಸು ಗಣನೀಯವಾಗಿ ಹೆಚ್ಚಾಗಲು ಕಾರಣವಾಗಿದೆ ಎಂದು ವಿಶ್ವಸಂಸ್ಥೆಯ ಈ ಕುರಿತ ವಿಶ್ಲೇಷಣೆ ಹೇಳುತ್ತದೆ.

ಈ ಮೇಲಿನ ಅಂಕಿ–ಸಂಖ್ಯೆಗಳು, ಮಾಹಿತಿಗಳು ಚೀನಾ ಸಮಾಜದ ಆಳವಾದ ವಿಶ್ಲೇಷಣೆಗಳಿಂದ ಹೊಮ್ಮಿದವುಗಳಲ್ಲ. ಇವು ಯಾರೇ ಹುಡುಕಿದರೂ ಅಂತರ್ಜಾಲದಲ್ಲಿ ವಿಕಿಪಿಡಿಯಾ, ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಸಂಸ್ಥೆ, ವಿಶ್ವ ಬ್ಯಾಂಕ್ ಮುಂತಾದ ಜಾಲತಾಣಗಳಲ್ಲಿ ಸಿಗುತ್ತಿರುವ ಮಾಹಿತಿಗಳು. ನಾವು ಚೀನಾದ ಬಡತನ ನಿವಾರಣೆಯ ಸಾಧನೆಗಳನ್ನು ಹೇಳುವಾಗಲೇ ಚೀನಾದಲ್ಲಿ ನಗರ–ಗ್ರಾಮೀಣ, ಪೂರ್ವ–ಪಶ್ಚಿಮ ಮುಂತಾದ ಅಸಮಾನತೆಗಳು ತೀವ್ರಗೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಇವೆಲ್ಲಾ ಸಂಕೀರ್ಣವಾದ, ವಿವರವಾದ ವಿಶ್ಲೇಷಣೆ ಬಯಸುವ ವಿಷಯಗಳು. ಈ ಲೇಖನದಲ್ಲಿ ಅಂತಹ ಪ್ರಯತ್ನವನ್ನು ಮಾಡಲಾಗಿಲ್ಲ. ಚೀನಾದಲ್ಲಿ ದುಡಿಯುವ ಜನರು ಮತ್ತು ಶ್ರೀಮಂತರ ನಡುವಿನ ಅಂತರವೂ ಸಾಕಷ್ಟು ಬೆಳೆದಿದೆ. ಬೆಳೆಯುತ್ತಿದೆ. ಆದರೆ ಚೀನಾ ಕಮ್ಯೂನಿಸ್ಟ್ ಪಕ್ಷಕ್ಕೆ ಈ ಬಗೆಗೆ ಅರಿವಿದೆ. ಈ ಅಸಮಾನತೆಯನ್ನು ತಗ್ಗಿಸುವ ಪ್ರಯತ್ನದಲ್ಲಿ ಅದು ಗಂಭೀರವಾಗಿ ತೊಡಗಿದೆ ಎಂಬುದನ್ನು ನಾವು ಗಮನಿಸುವುದು ಮುಖ್ಯ. ಚೀನಾ ದೇಶದ ಆರ್ಥಿಕ ಪ್ರಗತಿ, ಅದರ ವೇಗ ಈಗಾಗಲೇ ಜಗತ್ತಿನಲ್ಲಿ ಜನಜನಿತವಾಗಿರುವ ವಿಷಯ. ಆದರೆ ಈ ವೇಗದ ಆರ್ಥಿಕ ಪ್ರಗತಿಯ ಜೊತೆಗೇ ಚೀನಾ ದೇಶವು ಪರಿಸರ ಸಂರಕ್ಷಣೆಯ ವಿಷಯಕ್ಕೂ ಸಾಕಷ್ಟು ಮಹತ್ವ ನೀಡುತ್ತಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಗಮನಿಸುವುದು ಮುಖ್ಯ.

ಈ ಹಿನ್ನೆಲೆಯಲ್ಲಿ ಅನಕ್ಷರತೆ, ರೋಗ ರುಜಿನಗಳು–ಅನಾರೋಗ್ಯ, ಬಡತನ–ಅಪೌಷ್ಟಿಕತೆಗಳ ವಿರುದ್ಧ ಚೀನಾ ಸಾಧಿಸಿರುವ ಯಶಸ್ಸು ಅಗಾಧವಾದುದು. ಮಾನವ ಅಭಿವೃದ್ಧಿಯ ಮುಖ್ಯ ಮಾನದಂಡಗಳಾದ ಶಿಕ್ಷಣ, ಆರೋಗ್ಯ, ಆಹಾರ ಬಳಕೆ, ಜೀವಿತಾವಧಿ ಮುಂತಾದ ವಿಷಯಗಳಲ್ಲಿ ಚೀನಾ ದೇಶವು ಬಹು ದೊಡ್ಡ ನೆಗೆತವನ್ನು ಸಾಧಿಸಿ ಮುನ್ನಡೆದಿದೆ ಎಂಬುದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ.

ಅಕ್ಟೋಬರ್ 6 ಶ್ರದ್ಧಾಂಜಲಿ ಸಭೆಯಲ್ಲಿ ಎರಡು ಯೆಚೂರಿ ಪುಸ್ತಕಗಳ ಬಿಡುಗಡೆ

ವಸಂತರಾಜ ಎನ್.ಕೆ.

ಕನ್ನಡದಲ್ಲಿ ಎರಡು ಯೆಚೂರಿ ಪುಸ್ತಕಗಳನ್ನು ಪ್ರಕಟಿಸಿದ್ದು ಅಕ್ಟೋಬರ್ 6 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಶ್ರದ್ಧಾಂಜಲಿ ಸಭೆಯಲ್ಲಿ ಬಿಡುಗಡೆಯಾಗಲಿದೆ ಎಂದು ಕ್ರಿಯಾ ಮಾಧ್ಯಮ ಪ್ರಕಟಣೆ ತಿಳಿಸಿದೆ. 'ಹೀಗಿದ್ದರು ಯೆಚೂರಿ: ಒಡನಾಡಿಗಳ ನೆನಪು' ಮತ್ತು 'ಅಚ್ಛೇ ದಿನ್' ಗೆ ಸವಾಲು: ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆ' ಆ ಎರಡು ಪುಸ್ತಕಗಳ ಹೆಸರು. ಮೊದಲ ಪುಸ್ತಕ ಯೆಚೂರಿ ಅವರ ಕುರಿತ ಇತರರು ಬರೆದ ಲೇಖನಗಳ ಸಂಗ್ರಹವಾದರೆ, ಎರಡನೆಯದು ಯೆಚೂರಿ ಅವರೇ ಬರೆದ ಆಯ್ದ ಲೇಖನಗಳ ಸಂಗ್ರಹ.

ಹಿರಿಯ ರಾಜಕೀಯ ನಾಯಕರೊಬ್ಬರು ನಿಧನರಾದಾಗ ಶ್ರದ್ಧಾಂಜಲಿಗಳು ಹರಿದು ಬರುವುದು ಸಾಮಾನ್ಯ. ಆದರೆ ಅವು ಬರಿಯ ಔಪಚಾರಿಕವಾಗಿರುವುದೇ ಹೆಚ್ಚು. ರಾಜಕೀಯ ಅಧಿಕಾರದಲ್ಲಿ ಎಂದೂ ಇರದ ಎಡಪಂಥೀಯ ಅದರಲ್ಲೂ ಕಮ್ಯೂನಿಸ್ಟ್ ಪಕ್ಷದ ನಾಯಕರಿಗೆ ಔಪಚಾರಿಕ ಶ್ರದ್ಧಾಂಜಲಿಗಳು ಸಹ ವಿರಳವೇ. ಅದರಲ್ಲೂ 'ಮುಖ್ಯವಾಹಿನಿ' ಮಾಧ್ಯಮಗಳು ಅಂತಹ ನಾಯಕರನ್ನು ನಿರ್ಲಕ್ಷಿಸುವುದೇ ಹೆಚ್ಚು.

ಆದರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಇತ್ತೀಚೆಗೆ ನಿಧನರಾದಾಗ ಇದಕ್ಕೆ ಅಪವಾದವಾದರು. ಭಾವಪೂರ್ಣ ಶ್ರದ್ಧಾಂಜಲಿಗಳ ಮಹಾಪೂರವೇ ಹರಿದು ಬಂತು. ಹೆಚ್ಚಿನ ಪ್ರಮುಖ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾದವು. ಕೆಲವು ಪತ್ರಿಕೆಗಳಲ್ಲಿ ಹಲವು ಲೇಖನಗಳು ಪ್ರಕಟವಾದವು. ಬಹಳ ಆಪ್ತವಾದ ಈ ಲೇಖನಗಳನ್ನು ಬರೆದವರು ಸಮಾಜದ ಎಲ್ಲಾ ವಲಯಗಳಿಂದ ಬಂದವರು. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ



ಅವರು ರಾಜಕೀಯ ಜೀವನ ಆರಂಭಿಸಿದ್ದ ಜೆಎನ್‌ಯು ನಿಂದ ಅವರ ಅಂತಿಮ ಪಯಣ ಆರಂಭ ಸಾಧ್ಯವಾಗಿದ್ದು ಸಹ ಬಹುಶಃ ಈ ವರೆಗೆ ಯಾರಿಗೂ ಸಂದಿಲ್ಲದಿರುವ ಮಹಾನ್ ಗೌರವ. ಅದೇ ರೀತಿ ಯೆಚೂರಿ ಅವರ ಕುರಿತು ಪುಸ್ತಕಗಳೂ ಹಲವು ಭಾಷೆಗಳಲ್ಲಿ ಪ್ರಕಟವಾಗಿವೆ.

ಈ ನಿಟ್ಟಿನಲ್ಲಿ ಕನ್ನಡದಲ್ಲಿ ಎರಡು ಯೆಚೂರಿ ಪುಸ್ತಕಗಳನ್ನು ಪ್ರಕಟಿಸಿದ್ದು ಅಕ್ಟೋಬರ್ 6 ರಂದು ಬೆಂಗಳೂರಿನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಬಿಡುಗಡೆಯಾಗಿವೆ. 'ಹೀಗಿದ್ದರು ಯೆಚೂರಿ: ಒಡನಾಡಿಗಳ ನೆನಪು' ಮತ್ತು 'ಅಚ್ಛೇ ದಿನ್' ಗೆ ಸವಾಲು: ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆ' ಇದು ಕ್ರಿಯಾ ಮಾಧ್ಯಮ ಪ್ರಕಟಿಸಿರುವ ಆ ಎರಡು ಪುಸ್ತಕಗಳ ಹೆಸರು. ಮೊದಲ ಪುಸ್ತಕ ಯೆಚೂರಿ ಅವರ ಕುರಿತು ಇತರರು ಬರೆದ ಲೇಖನಗಳ ಸಂಗ್ರಹವಾದರೆ, ಎರಡನೆಯದು ಯೆಚೂರಿ ಅವರೇ ಬರೆದ ಆಯ್ದ ಲೇಖನಗಳ ಸಂಗ್ರಹ.

'ಹೀಗಿದ್ದರು ಯೆಚೂರಿ' ಪುಸ್ತಕದಲ್ಲಿ ಯೆಚೂರಿ ಅವರ ಜೀವನಪಯಣದ ಸ್ಥೂಲ ನೋಟವಿದೆ. ಯಮುನಾ ಗಾಂವ್ಕರ್ ಅವರ ಕವನ ಅವರ ಬದುಕು-ಕಾಯಕಗಳ ಮಹತ್ವ ಮತ್ತು ನಿಧನದ ನಂತರದ ಪರಿಸ್ಥಿತಿಗೆ ಭಾವಪೂರ್ಣ ಸ್ಪಂದನ, ಸಿಪಿಐ(ಎಂ) ನ ಹಿರಿಯ ನಾಯಕರಲ್ಲದೆ ಯೋಗೇಂದ್ರ ಯಾದವ್, ನಟರಾಜ ಹುಳಿಯಾರ್, ಮುರಳೀಧರ ಖಜಾನೆ, ಸನತ್ ಕುಮಾರ ಬೆಳಗಲಿ, ನವೀನ್ ಸೂರಿಂಜೆ ಯಂತಹ ಪ್ರಮುಖ ಬುದ್ಧಿಜೀವಿಗಳು, ಪತ್ರಕರ್ತರು ಬರೆದ ಲೇಖನಗಳಿವೆ. ಯೆಚೂರಿ ಅವರ ಬದುಕಿನ ಮತ್ತು ಭಾರತದ ರಾಜಕಾರಣಕ್ಕೆ ಕೊಡುಗೆಗಳ ವಿವಿಧ ಆಯಾಮಗಳನ್ನು ಈ ಲೇಖನಗಳು ಅನಾವರಣಗೊಳಿಸುತ್ತವೆ. ಅವರ ಬದುಕು ಕಾಯಕಗಳಿಗೆ ಸಂಬಂಧಿಸಿದ ಹಲವು ಅಪರೂಪದ ಚಿತ್ರಗಳೂ ಇವೆ.

ಯೆಚೂರಿ ಅವರು ದೇಶದ ಪ್ರಗತಿಪರ ವ್ಯಕ್ತಿಗಳ, ಶಕ್ತಿಗಳ ಎಲ್ಲ ವಿಭಾಗಗಳ ಅಪಾರ ಪ್ರೀತಿ-ವಿಶ್ವಾಸಗಳನ್ನು ಗಳಿಸಿದ್ದರಷ್ಟೇ ಅಲ್ಲ, ಸೈದ್ಧಾಂತಿಕ, ತಾತ್ವಿಕ ಚಿಂತನೆಯ ಕ್ಷೇತ್ರದಲ್ಲಿ ಅವರ ಕೊಡುಗೆ ಅಪಾರ. 1988ರಲ್ಲಿ ಸಿಪಿಐ(ಎಂ)ನ 13ನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರೀಯ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದಾಗಿನಿಂದ ಕೊನೆಯ ವರೆಗೂ ಸಿಪಿಐ(ಎಂ)ನ ಸೈದ್ಧಾಂತಿಕ-ರಾಜಕೀಯ ನಿಲುವುಗಳನ್ನು ರೂಪಿಸುವಲ್ಲಿ ಅವರ ಕೊಡುಗೆಗಳು ಎದ್ದು ಕಾಣುವಂತವು ಎಂದು ಅವರ ಅರ್ಧ ಶತಮಾನದ ಒಡನಾಡಿ ಪ್ರಕಾಶ ಕಾರಟ್ ಹೇಳಿದ್ದಾರೆ. ಈ ಮೂಲಕ ದೇಶದ ವಿವಿಧ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ವಿಭಾಗಗಳ ಮೇಲೂ 'ಮೂರ್ತ ಪರಿಸ್ಥಿತಿಯ ಮೂರ್ತ ವಿಶ್ಲೇಷಣೆ' ಎಂಬ ಸೂತ್ರವನ್ನು ಆಧರಿಸಿದ ಅವರ ರಾಜಕೀಯ-ಸೈದ್ಧಾಂತಿಕ ವಿಶ್ಲೇಷಣೆಗಳ ಪ್ರಭಾವವೂ ಅಪಾರ ಎನ್ನಬಹುದು.

2014ರಲ್ಲಿ ಭಾರತದ ರಾಜಕಾರಣದಲ್ಲಿ ಒಂದು ಸ್ಪಷ್ಟ ಬಲಪಂಥೀಯ ಪಲ್ಲಟದ ನಂತರದ ಸನ್ನಿವೇಶದಲ್ಲಿ ದೇಶದ ಜಾತ್ಯತೀತ-ಪ್ರಜಾಪ್ರಭುತ್ವ ನೀತಿಗಳಿಗೆ ಎದುರಾದ ಸವಾಲುಗಳನ್ನು ತಾತ್ವಿಕವಾಗಿ ಮತ್ತು ಕಾರ್ಯತಃ ಎದುರಿಸುವಲ್ಲಿ ಅವರ ಪಾತ್ರವಂತೂ ಅನನ್ಯ. 'ಅಚ್ಛೇ ದಿನ್' ತರುತ್ತೇವೆ ಎಂದು ಅಧಿಕಾರ ಪಡೆದ ನಂತರ, ತಮ್ಮ ನಿಜ ಉದ್ದೇಶವನ್ನು ಮರೆಮಾಚಲು 'ನ್ಯೂ ಇಂಡಿಯ', 'ಅಮೃತ್ ಕಾಲ್', 'ವಿಕಸಿತ್ ಭಾರತ್' ಎಂದೆಲ್ಲ ಘೋಷಣೆಗಳನ್ನು ಬದಲಿಸುತ್ತ ಅವೇ ಉಳ್ಳವರ ಪರವಾದ ನೀತಿಗಳನ್ನೇ ಅನುಸರಿಸುತ್ತ ಬಂದಿರುವುದನ್ನು ಅವರು ತಮ್ಮ ಲೇಖನಗಳಲ್ಲಿ ಬಯಲಿಗೆಳೆದಿದ್ದರು.



'ಅಚ್ಛೇ ದಿನ್' ಗೆ ಸವಾಲು: ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆ' ಪುಸ್ತಕ 2014ರ ನಂತರದ ಈ ಒಂದು ದಶಕದ ಅವರ ಇಂತಹ ಲೇಖನಗಳ ಒಂದು ಪ್ರಾತಿನಿಧಿಕ ಸಂಗ್ರಹ. ಇದರಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಸರಕಾರದ ಕ್ರಮಗಳ ವಿಶ್ಲೇಷಣೆಗಳಿದ್ದರೆ, ಎರಡನೇ ಭಾಗದಲ್ಲಿ ಇಂತಹ ಕ್ರಮಗಳಿಗೆ ಸವಾಲೊಡ್ಡುವ ಬರವಣಿಗೆಗಳಿವೆ.

ಕರ್ಜಗಿ ನೇಮಕ: ಸರಕಾರದ ನಿರ್ಧಾರ ಓಲೈಕೆ ರಾಜಕಾರಣವೇ.........

ಪುಟ 3 ರಿಂದ

ಸಾಗುತ್ತಿದೆ ಎಂಬುದನ್ನು ಈ ಪ್ರಕರಣ ಮತ್ತೊಮ್ಮೆ ದೃಢಪಡಿಸುತ್ತದೆ. ಅಂದರೆ ಕೋಮುವಾದಿಗಳ ವಿರುದ್ಧ ದೃಢ ಹೋರಾಟದ ಮೂಲಕ ಆ ಸರ್ಕಾರವನ್ನು ಸೋಲಿಸಿ ಬದಲಾವಣೆಗಾಗಿ ಮತ ನೀಡಿದ ಜನಾದೇಶಕ್ಕೆ ಹೀಗೆ ಅನ್ಯಾಯ, ದ್ರೋಹ ಬಗೆಯುತ್ತಾ ಹೋದಲ್ಲಿ ಕಾಂಗ್ರೆಸ್ ತನ್ನ ನೆಲೆಯನ್ನು ಬಹು ವೇಗದಲ್ಲಿ ಕಳೆದುಕೊಳ್ಳುತ್ತದೆ. ಮಾತ್ರವಲ್ಲ, ಈ ಮೂಲಕವಾಗಿಯೂ ಬಿಜೆಪಿ ಆರ್ ಎಸ್ ಎಸ್ ಗಳು ನೇರವಾಗಿ ರಾಜಕೀಯ ದುರ್ಲಾಭ ಪಡೆಯಲು ಅವಕಾಶವನ್ನು ಕೂಡ ಕಲ್ಪಿಸಿ ಕೊಡುತ್ತದೆ. ಶಿಕ್ಷಣದಂತಹ ಸೂಕ್ಷ್ಮ, ಮಹತ್ವದ ರಂಗದ ಬಗ್ಗೆ ಏನೇ ಕ್ರಮಗಳನ್ನು ಕೈಗೊಳ್ಳುವುದಾಗಿದ್ದರೂ ಸಮಗ್ರವಾದ ಚಿಂತನೆ ಯಾವಾಗಲೂ ಇರಬೇಕಾಗುತ್ತದೆ. ಇಂತಹ 'ಖಾಜಿ' ನ್ಯಾಯದ ಮೂಲಕ ಸಾಮಾಜಿಕ ನ್ಯಾಯ ಮತನೀರ್ಪಕ್ಷತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಸರ್ಕಾರ ಬದ್ಧವಾಗಿರಬೇಕು. ಈ ಹಿನ್ನೆಲೆಯಲ್ಲಿ ಗುರುರಾಜ ಕರ್ಜಗಿ ಅವರ ನೇಮಕ ವನ್ನು ಸರ್ಕಾರ ರದ್ದುಪಡಿಸಬೇಕು ಮತ್ತು ಸೂಕ್ತವಾದ ನಿರ್ಧಾರ ಕೈಗೊಳ್ಳಬೇಕು.

ಗಾಂಧಿ ಹುಟ್ಟಿದ ದಿನವಿಂದು.
ನೆನಪಿಸಿಕೊಳ್ಳುತ್ತೇನೆ....
ಅಪ್ಪ ಹೇಳುತ್ತಿದ್ದ
ಗಾಂಧಿ ಸತ್ಯವ್ರತ ಎಂದು.
ಹಸಿವು ತಾಳಲಾರದೆ
ಕದ್ದು ಮುಚ್ಚಿಟ್ಟ ಬೆಲ್ಲದುಂಡೆಯೊಂದನ್ನು
ಬಾಯಿಗೆ ಹಾಕಿಕೊಂಡು
ಗಾಂಧಿಯ ಸತ್ಯ ನೆನಪಿಸಿಕೊಂಡು
ಸತ್ಯ ಹೇಳಿ ಒದೆ ತಿಂದಿದ್ದು
ಅಮ್ಮ ಹೇಳುತ್ತಿದ್ದಳು
ಗಾಂಧಿ ಅಹಿಂಸೆಯ ಪರ ಎಂದು
ಹೆಣ್ಣೆಂಬ ಕಾರಣಕ್ಕಾಗಿಯೇ
ಬೇಕೋ ಬೇಡವೋ
ಪ್ರತಿ ದಿನ ಪ್ರತಿ ಕ್ಷಣ
ಹೊಡೆತ, ಬಡಿತ, ಅವಮಾನ
ಮೂದಲಿಕೆಗಳು ಮಾಮೂಲು
ಎಂದು ಬದುಕುತ್ತ ಮನಸಿನೊಳಗೆ
ಕನಲಿ ಕೆಂಡವಾಗುತ್ತ....
ನಾನೂ ಅಹಿಂಸೆಯ ಪರ ಎನ್ನಬೇಕೇ
ಎಂದು ಪದೇ ಪದೇ ಏಳುವ ಪ್ರಶ್ನೆಗಳನ್ನು..
ಗಾಂಧಿ ಉಪವಾಸ ವ್ರತ ಹಿಡಿಯುತ್ತಿದ್ದರಂತೆ
ಅದು ಸತ್ಯಾಗ್ರಹವಂತೆ..
ಅಯ್ಯೋ...
ವಾರಗಟ್ಟಲೆ ಮನೆಯಲ್ಲಿ ಹಿಡಿ ಅಕ್ಕಿಯೂ ಇಲ್ಲದೇ
ಅಕ್ಕಪಕ್ಕದವರಿಗೆ ನಮ್ಮ ಸ್ಥಿತಿ
ತಿಳಿಯಬಾರದೆಂದು
ಒಲೆ ಬೆಂಕಿ ಉರಿಸಿ
ತಪ್ಪಲೆಯಲ್ಲಿ ನೀರಿಟ್ಟು ಕಾಯಿಸಿ
ದಪ್ಪ ತಳದ ಪಾತ್ರೆಗಿಂತ ದಪ್ಪ ಮಸಿ ಹಿಡಿಸಿ
ಅದೇ ಒಲೆಯ ಬೂದಿಯಿಂದ
ಹಸಿದ ಹೊಟ್ಟೆಯಲ್ಲಿ, ಕುಸಿದ ರಟ್ಟೆಯನ್ನೇ ಬಳಸಿ
ತಿಕ್ಕಿ ತಿಕ್ಕಿ ಹೊಳಪು ಮಾಡುತ್ತಿದ್ದ ಪಾತ್ರೆಗಳನ್ನು.
ಗಾಂಧಿ ನೀನು ಅಮರ.

-ಕೆ.ಎಸ್.ವಿಮಲ

NEW No. MAG(3)/NPP/205/2021-2022
JANASHAKTHI KANNADA VARA PATRIKE October 7-13, 2024 Price: Rs. 10/- Date of Publication: 04 October 2024 RNI No. KARKAN /2006/17926 Posted on 07-10-2024
Posted at BG PSO, BG - 560026 **Posted at Periodical Rate -** Rs. 2

ಗುರುತುಗಳನ್ನು ಬಚ್ಚಿಟ್ಟವರ ಬದುಕಿನ ಬವಣೆಗಳ ಅನಾವರಣ

“ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ” ನಾಟಕ

ಎಚ್.ಆರ್. ನವೀನ್‌ಕುಮಾರ್, ಹಾಸನ



ಬದುಕಿನಲ್ಲಿ ಬಣ್ಣ ಬಣ್ಣದ ಕನಸುಗಳನ್ನು ಹೊತ್ತು, ತಮ್ಮ ಗುರುತುಗಳನ್ನು ಬಹಿರಂಗಗೊಳಿಸಿಕೊಳ್ಳಲಾಗದ, ಕೇರಿಗಳನ್ನು ತೊರೆದು ನಗರಗಳಲ್ಲಿ ಬದುಕಿನ ಬಂಡಿ ಸಾಗಿಸಲು, ಬಾಡಿಗೆಯನ್ನು ಉಳಿಸುವ ಸಲುವಾಗಿ ಒಂದೇ ಮನೆಯಲ್ಲಿ ಶೇರಿಂಗ್‌ನಲ್ಲಿ ವಾಸವಾಗಿರುವ ಹೊಸ ತಲೆಮಾರಿನ ಮೂವರ ಬದುಕಿನ ಬವಣೆಗಳನ್ನು ಒಂದೊಂದಾಗಿ ರಂಗದ ಮೇಲೆ ತೆರೆದಿಡುವ ನಾಟಕವೇ ‘ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ’.

ರಂಗಭೂಮಿ ಕ್ಷೇತ್ರದಲ್ಲಿ ಬಹಳ ಚರ್ಚೆಯಾದ ‘ದಕ್ಲ ಕಥಾ ದೇವಿ’ ನಾಟಕಗಳನ್ನು ನಿರ್ದೇಶಿಸಿದ ಯುವ ನಿರ್ದೇಶಕ ಕೆ.ಪಿ.ಲಕ್ಷ್ಮಣ್ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಹಾಸನದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಎರಡು ದಿನಗಳ ನಾಟಕೋತ್ಸವದಲ್ಲಿ ಈ ನಾಟಕವನ್ನು ಪ್ರದರ್ಶಿಸಲಾಯಿತು. ಈಗಾಗಲೇ ನಾಡಿನಾದ್ಯಂತ ಯಶಸ್ವೀ ಪ್ರದರ್ಶನಗಳನ್ನು ಕಾಣುತ್ತಿರುವ ಈ ನಾಟಕವನ್ನು ಜಂಗಮ ಕಲೆಕ್ಟೀವ್ ತಂಡ ಪ್ರಸ್ತುತ ಪಡಿಸಿದೆ. ನಾಟಕದಲ್ಲಿ ಚಂದ್ರಶೇಖರ್ ಕೆ., ಶ್ವೇತ ರಾಣಿ ಎಚ್.ಕೆ. ಮತ್ತು ಭರತ್ ಡಿಂಗ್ರಿಯವರ ನುರಿತ ಮತ್ತು ಶ್ರದ್ಧೆಯ ನಟನೆಯ ಪಾತ್ರಗಳು ನಮ್ಮ ನಡುವೆಯೇ ಜೀವಿಸುವಂತೆ ಮಾಡುತ್ತವೆ.

ನಾಟಕದ ಪ್ರಮುಖ ಮೂರು ಪಾತ್ರಗಳಲ್ಲಿ ಒಬ್ಬ, ಜಮೈಕಾದ ಸ್ಲಂನಲ್ಲಿ ಹುಟ್ಟಿ ಜಗತ್ ಪ್ರಸಿದ್ಧನಾದ ಪಾಪ್ ಸಿಂಗರ್ ಬಾಬ್ ಮಾರ್ಲಿಯಂತೆ ಒಬ್ಬ ದೊಡ್ಡ ಹಾಡುಗಾರನಂತೆ ತಾನಾಗಬೇಕೆಂಬ ಕನಸು ಕಂಡವನು. ಕನಸಿನ ಜೊತೆಗೆ ತನ್ನ ಗುರುತನ್ನು ಬಚ್ಚಿಟ್ಟು ಊರಿನ ಹೆಸರಿನ ಭಾರವನ್ನು ಹೊತ್ತು ಪಟ್ಟಣ ಸೇರಿರುತ್ತಾನೆ. ಹಾಡಿಗೆ ಯಾವುದೇ ಜಾತಿ, ಧರ್ಮದ ಹಂಗಿಲ್ಲ, ಹಾಡು ಎಲ್ಲರನ್ನು ಒಂದುಗೂಡಿಸುತ್ತದೆ ಎಂಬ ಸಂದೇಶವನ್ನು ಬಲವಾಗಿ ನಂಬಿ ಎಲ್ಲವನ್ನು ಅನುಭವಿಸಬೇಕು, ಒಳಗೆ ಎಷ್ಟೇ ನೋವಿದ್ದರೂ ಸದಾ ನಗುನಗುತ್ತಾ ಇರಬೇಕು ಎಂದುಕೊಂಡು ಬದುಕುವವನು ಇವನು. ಮತ್ತೊಬ್ಬ ತಾನು ದೊಡ್ಡ ಕಲಾವಿದನಾಗಬೇಕೆಂಬ ಕನಸಿನೊಂದಿಗೆ ಸ್ಟ್ಯಾಂಡಪ್ ಕಾಮಿಡಿ ಮಾಡುತ್ತಾ, ತನ್ನೂರಿನಲ್ಲಿ ತನ್ನ ಸುತ್ತ ಎಳೆದ ಗುರುತಿನ ವೃತ್ತಗಳನ್ನು ಅಳಿಸುತ್ತಾ ಆ ವೃತ್ತದಿಂದಾಚೆಗೆ ಬಂದು, ತಾನು ಅನುಭವಿಸಿದ ಎಲ್ಲಾ ನೋವುಗಳನ್ನು ಮರೆಯಲು ಪ್ರಯತ್ನಿಸುತ್ತಿರುತ್ತಾನೆ. ಮೊತ್ತೊಬ್ಬಾಕೆ ದೇವದಾಸಿಯ ಮಗಳಾಗಿ ತಾನಿದ್ದ ಹಳ್ಳಿಯಲ್ಲಿನ ಅವಮಾನ, ದೌರ್ಜನ್ಯಗಳನ್ನು ಸಹಿಸದೇ, ಶಿಕ್ಷಣವನ್ನು ಪಡೆದು, ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾ ಸಾಹಿತ್ಯ, ಕವಿತೆಗಳನ್ನು ಓದುತ್ತಾ, ಹಳೆಯ ನೆನಪುಗಳಿದ್ದರೂ ಅವುಗಳನ್ನು ಮೀರುತ್ತಾ ಬದುಕಲು ಪ್ರಯತ್ನಿಸುತ್ತಿರುತ್ತಾಳೆ.

ಗುರುತು ಮುಚ್ಚಿಟ್ಟು ಬಾಡಿಗೆ ಮನೆಗೆ ಬಂದು ಸೇರಿಕೊಂಡಿದ್ದರಿಂದ ದನದ ಮಾಂಸವನ್ನು ಕದ್ದು ಮುಚ್ಚಿ ತರುವುದು, ಕಿಟಕಿ ಬಾಗಿಲುಗಳನ್ನು ಮುಚ್ಚಿ ಗುಟ್ಟಾಗಿ ತಿನ್ನುವುದು, ತಿಂದ ಮೂಳೆಗಳನ್ನು ಅಚ್ಚುಕಟ್ಟಾಗಿ ಪ್ಯಾಕ್ ಮಾಡಿ ದೂರ ಸಾಗಿಸುವುದು, ಹೀಗೆ ಒಮ್ಮೆ ಯಾರಿಗೂ ಅನುಮಾನ ಬಾರದಂತೆ ‘ಶ್ರೀರಾಮ ಸ್ವೀಟ್ಸ್’ ಬಾಕ್ಸ್‌ನಲ್ಲಿ ಕಬಾಬನ್ನು ಪಾರ್ಸಲ್ ತಂದು ತಿನ್ನುವ ದೃಶ್ಯವಂತು ನಗರದಲ್ಲಿ ಬಾಡಿಗೆ ಮನೆ ಮಾಡಿ ಬದುಕುತ್ತಿರುವ, ಬಾಡು ತಿನ್ನುವವರ ಪರದಾಟ ಒಂದು ಕ್ಷಣ ನಮ್ಮನ್ನೆಲ್ಲಾ ತೀವ್ರ ಆಲೋಚನೆಗೆ ಹಚ್ಚಿದ್ದು ಸುಳ್ಳಲ್ಲ. ಈ ದೃಶ್ಯ ನೋಡುಗರ ಮನಸ್ಸುಗಳನ್ನು ಕಲಕುತ್ತದೆ.

ಈ ಮೂವರು ಯಾವ ಗುರುತುಗಳನ್ನು ಬಚ್ಚಿಡಲು ನಿರಂತರವಾಗಿ ಪ್ರಯತ್ನಿಸುತ್ತಿದ್ದರೊ, ಅದೇ ಜಾತಿಯ ಗುರುತುಗಳನ್ನು ಅವರ ಆಹಾರದಿಂದ ಪತ್ತೆಹಚ್ಚಿದ ಮನೆಯ ಮಾಲಿಕ, ಬಾಡಿಗೆ ಮನೆಯಿಂದ ಇವರನ್ನು ಖಾಲಿ ಮಾಡಿಸಲು ತೀರ್ಮಾನಿಸುತ್ತಾನೆ. ಎರಡನೇ ಮಹಡಿಯ ನಾಯಿ, ಮೊದಲ ಮಹಡಿಯ ಮನೆಯ ಮುಂದೆ ಮೂಳೆ ಕಚ್ಚಿಕೊಂಡು ಹೋಗಿದ್ದನ್ನು ನೆಲ ಮಹಡಿಯಲ್ಲಿ ವಾಸವಿರುವ ಮಾಲೀಕರವರೆಗೂ ದೂರು ತಲುಪಿದೆ. ಪ್ರಸ್ತುತ ಆಧುನಿಕತೆಯನ್ನು ಮೈಗೂಡಿಸಿಕೊಂಡಿರುವ ‘ನಾಗರೀಕ’ ಸಮಾಜದಲ್ಲಿ ಜಾತಿಯ ಕಾರಣಕ್ಕಾಗಿ ಮನೆ ಬಾಡಿಗೆ ಕೊಡುವುದನ್ನು ನಿರಾಕರಿಸುವುದು ಮತ್ತು ಪ್ರತಿಯೊಬ್ಬರ ಆಹಾರದ ಹಕ್ಕನ್ನು ಗೌರವಿಸುವ ಬದಲಿಗೆ ಮಾಂಸಹಾರಿಗಳನ್ನು, ಅದರಲ್ಲೂ ಬೀಫ್ ತಿನ್ನುವವರನ್ನು ಅತ್ಯಂತ ಕೀಳಾಗಿ ನೋಡುವ ಇಂದಿನ ಸಮಾಜಕ್ಕೆ ನಾಟಕದ ಈ ದೃಶ್ಯಗಳು ಕನ್ನಡಿ ಹಿಡಿದಂತಿವೆ.

ದಲಿತನಾದ ಕಾರಣಕ್ಕೆ ತನ್ನ ತಂದೆ ಮಾಡುತ್ತಿದ್ದ ಕುಳವಾಡಿಕೆಯ ಕೆಲಸವನ್ನು ತಾನೂ ಮಾಡಬೇಕಾದ ಸಂದರ್ಭ ಒದಗಿಬಂದಾಗ ಅದನ್ನು ನಿರಾಕರಿಸುವ, ಶಿಕ್ಷಣಕ್ಕಾಗಿ ಹಂಬಲಿಸುವ ವಿಚಾರ ಇಂದಿಗೂ ಪ್ರಸ್ತುತವಾಗಿದೆ. ತನ್ನ ಬದುಕಿನ ಈ ಬವಣೆಯನ್ನು ಹೇಳಿಕೊಳ್ಳಲು ತನ್ನ ಶಾಲಾ ದಿನಗಳಲ್ಲಿ ನಡೆದ ಒಂದು ಘಟನೆಯನ್ನು ಪಾತ್ರದಾರಿಗಳಾಗಿ ಅಭಿನಯಿಸಲು ಈ ಮೂವರು ಮುಂದಾಗುತ್ತಾರೆ. ಆದರೆ ಆ ಪಾತ್ರಗಳನ್ನು ನಿಭಾಯಿಸಲಾಗದೆ, ಪಾತ್ರದಲ್ಲಿಯೂ ನಾನು ಶೋಷಕನಾಗುವುದಿಲ್ಲ, ಪಾತ್ರದಲ್ಲಿಯೂ ನಾನು ಒಂದು ಮಗುವನ್ನು ಜಾತಿಯ ಕ್ರೂರ ದೌರ್ಜನ್ಯಕ್ಕೆ ತಳ್ಳುವುದನ್ನು ಸಹಿಸುವುದಿಲ್ಲವೆಂದು ಪಾತ್ರಗಳೇ ನಿರಾಕರಿಸುತ್ತವೆ. ಪಾತ್ರಗಳು ನಿರಾಕರಿಸುವುದನ್ನು ನಿಜಜೀವನದಲ್ಲಿ ಮನುಷ್ಯರು ನಿರಾಕರಿಸಬೇಕಿದೆ.


ಮೇಲ್ಜಾತಿಯವರ ಮನೆಯಲ್ಲಿರುವ ಏಕೈಕ ಟಿವಿಯನ್ನು ನೋಡಲು ಕೇರಿಯ ಹುಡುಗರೆಲ್ಲಾ ನೂಕು ನುಗ್ಗಲಿನಲ್ಲಿ ಹೋಗಿ, ಕಾಡಿ ಬೇಡಿ ಟಿವಿ ನೋಡಲು ಅವಕಾಶ ಕಲ್ಪಿಸಿಕೊಂಡು, ಟಿವಿಯಲ್ಲಿ ಬರುವ ಪ್ರತಿಯೊಂದು ಪಾತ್ರಗಳೂ ತಾವೇ ಆದಂತೆ ಭಾವಿಸಿ ಮೈಮರೆಯುತ್ತಿದ್ದವರು, ಇದ್ದಕ್ಕಿದ್ದಂತೆ ಕರೆಂಟ್ ಹೋಗಿ ಕತ್ತಲಾದಾಗ, ಒಮ್ಮೆಲೆ ಮನೆಯ ಒಳಗೆ ಒಂದು ಹೆಜ್ಜೆಯಿಟ್ಟು, ಜೀವನದಲ್ಲಿ ದೊಡ್ಡ ಸಾಧನೆ ಮಾಡಿದ ಭಾವನೆಯಲ್ಲಿ ಹೊರಬರುವ ದೃಶ್ಯಗಳು, ಶೂದ್ರ ಸಮುದಾಯವನ್ನು ಸಮಾಜವು ಶತಮಾನಗಳಿಂದ ಹೇಗೆ ನಡೆಸಿಕೊಂಡು ಬರಲಾಗುತ್ತಿದೆ ಎಂಬುದನ್ನು, ಎಲ್ಲಾ ಅವಕಾಶಗಳಿಂದ ವಂಚಿಸಿ, ಇವರುಗಳಿಗೆ ಜಾತಿಯ ಗುರುತನ್ನು ಹೊರಿಸಿ, ಅದರ ಮೇಲೆ ಸವಾರಿ ಮಾಡಿಕೊಂಡು ಬರಲಾಗುತ್ತಿದೆ ಎಂಬುದನ್ನು ಹಾಗೂ ಒಬ್ಬ ದೇವದಾಸಿ ಹೆಣ್ಣಿನ ಮೇಲೆ ನಡೆಯುವ ಸಾಮಾಜಿಕ ದೌರ್ಜನ್ಯಗಳು, ಆಕೆಯನ್ನು ಬಳಕೆ ಮಾಡುವ ವಿಧಾನ, ಇದನ್ನು ಪ್ರತಿಭಟಿಸಿ ತನ್ನ ಮಗಳಿಗೂ ಇದೇ ಗತಿ ಬರಬಾರದೆಂದು ಎಚ್ಚೆತ್ತು ಚಿನ್ನದ ಮೂತಿಯ ರಣ ಹದ್ದನ್ನು ಕೊಂದು ಮಗಳನ್ನು ರಕ್ಷಿಸಿ, ಇಂತಹ ಅನಿಷ್ಟ ಪದ್ದತಿಗೆ ಕೊನೆಯಾಡಬೇಕು ಎಂಬುದನ್ನು ಅತ್ಯಂತ ಸೂಕ್ಷ್ಮವಾಗಿ ರಂಗದ ಮೇಲೆ ತರುವ ಪ್ರಯತ್ನ ಮಾಡಲಾಗಿದೆ.

ಈ ಎಲ್ಲಾ ಸಂಕೋಲೆಗಳನ್ನು ಮೀರಲು ತನ್ನ ಜಾತಿಯ ಗುರುತು, ತನ್ನ ಊರಿನ ಗುರುತು, ಧರ್ಮ, ಲಿಂಗ ಎಲ್ಲವನ್ನು ಧಿಕ್ಕರಿಸಿ, ಇವುಗಳ ಗುರುತ್ವ ಬಲದಿಂದ ಆಚೆ ಹೋಗುವ, ಆ ಮೂಲಕ ಮನುಷ್ಯನಾಗುವ ವಿಶ್ವಮಾನವ ಅನಿಕೇತನದ ಪ್ರಯತ್ನವನ್ನು ಮಾಡಬೇಕೆನ್ನುವ ಸ್ಪಷ್ಟ ಸಂದೇಶ ಈ ನಾಟಕದಲ್ಲಿ ಅಡಗಿದೆ. ಕೊನೆಯಲ್ಲಿ ‘ಬಾಬ್ ಮಾರ್ಲಿ ಫ್ರಮ್ ಮಿಲ್ಕಿವೇ’ (ಜಾತಿಯಲ್ಲ, ಧರ್ಮವಲ್ಲ, ಕೇರಿಯಲ್ಲ, ಊರಲ್ಲ, ದೇಶ, ಭೂಮಿಯ ಗಡಿಗಳನ್ನು ದಾಟಿ ಸೌರಮಂಡಲದ ಉಗಮ ಸ್ಥಳ ಮಿಲ್ಕಿವೆ. ಎಲ್ಲೆ ಇಲ್ಲದ್ದು.) ಆಗುವ ಪ್ರಯತ್ನ ಸಂಕೋಲೆಗಳಿಂದ ನಮ್ಮನ್ನು ಬಂದ ಮುಕ್ತಗೊಳಿಸಿ ನಿರ್ದಿಗಂತದೆಡೆಗೆ ಕರೆದೊಯ್ಯುತ್ತದೆ.

ಕೊನೆಯಲ್ಲಿ ಬರುವ ಹಾಡಿ ರೂಪದ ಮಾತುಗಳು “ಎಲ್ಲಿಗಂಟ ಒಬ್ಬ ಶ್ರೇಷ್ಠ, ಮತ್ತೊಬ್ಬ ಕನಿಷ್ಠ ಅಂತ ಇರ್ಥದೋ ಅಲ್ಲಿಗಂಟ, ಘೋಷಣೆ, ಹೋರಾಟ, ಸಂಘರ್ಷ ಇರ್ಥದೆ, ಯುದ್ಧ ಇರ್ಥದೆ...

ಸುಮಾರು ಒಂದು ಗಂಟೆ ನಲವತ್ತು ನಿಮಿಷಗಳ ಕಾಲ ಪ್ರೇಕ್ಷಕರನ್ನು ಗಟ್ಟಿಯಾಗಿ ಕುರ್ಚಿಗಳ ಮೇಲೆ ಕೂರಿಸುವ ತಂಡದ ಪ್ರಯತ್ನ ಶ್ಲಾಘನೀಯ. ಇಲ್ಲಿ ಕೆಲವೊಮ್ಮೆ ಮಾತುಗಳಿಗಿಂತ ಮೌನವು ಎಚ್ಚು ಪರಿಣಾಮಕಾರಿಯಾಗಿದೆ. ರಂಗದ ಮೇಲೆ ಮೂವರೇ ಕಲಾವಿದರಿಂದ, ಅತ್ಯಂತ ಕಡಿಮೆ ರಂಗ ಪರಿಕರಗಳನ್ನು ಬಳಸಿ, ಹಳೆಯ ವಿಚಾರವಾದರೂ ಅದನ್ನು ವಿಭಿನ್ನ ರೀತಿಯಲ್ಲಿ ರಂಗದ ಮೇಲೆ ಕತೆಯನ್ನು ನಿರೂಪಿಸುವ ಶೈಲಿ ಅತ್ಯಂತ ಆಪ್ತವಾಗಿದೆ. ಅಗತ್ಯಕ್ಕೆ ತಕ್ಕಂತೆ ಅಂಬೇಡ್ಕರ್ ಅವರ ‘ವೀಸಾಕ್ಕಾಗಿ ಕಾಯುವ ಜನ’ ಮತ್ತು ಅವರ ಕೆಲವು ಭಾಷಣಗಳನ್ನು ಹಾಗೂ ರೋಹಿತ್ ವೆಮುಲಾ ಕೊನೆಯ ಪತ್ರವನ್ನು ಬಳಸಿಕೊಳ್ಳಲಾಗಿದೆ. ‘ಮನವೆಲ್ಲವೂ ಬಯಲಾಗಿದೆ. . .’ ಹಾಡು ಮತ್ತು ಕೊನೆಯಲ್ಲಿ ಬರುವ ಹಾಡು ಸದಾ ಗುನುಗುವಂತೆ ಮಾಡುತ್ತದೆ.

ಇದು ನಮ್ಮ ನಡುವೆ ನಡೆದು ಹೋಗಿರುವ, ಈಗಲೂ ನಡೆಯುತ್ತಿರುವ, ನಾವು ಎಚ್ಚರ ತಪ್ಪಿದರೆ ಮುಂದೆಯೂ ನಡೆಯುವ ಕಥನ.



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**